
ತುಳುವರ ಕೃಷಿ ಆರಾಧನಾ ಸಂಸ್ಕೃತಿ

# ಪೂಕರೆ ಆಚರಣೆ ಮತ್ತು ಸಮಾಜ ವ್ಯವಸ್ಥೆ



ಹರೀಶ್ ಆಳ್ವ ಎಮ್. ಜಿ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು – 6



# ತುಳುವರ ಕೃಷಿ ಆರಾಧನಾ ಸಂಸ್ಕೃತಿ
# ಪೂಕರೆ ಆಚರಣೆ ಮತ್ತು ಸಮಾಜ ವ್ಯವಸ್ಥೆ

ಹರೀಶ್ ಆಳ್ವ ಎಮ್. ಜಿ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು – 6

**Tuluvara Krishi Aradhanaa Samskriti - Pookare Acharane Mattu Samaja Vyavasthe**

A Research Study Compiled by Harish Alva M. G, Muloor Guthu, Balepuni, Mudipu, Dakshina Kannada. Mobile : 9449534197 email: harishalvamg@gmail.com.

| | | |
|---|---|---|
| Chief Editor | : | **M. Janaki Brahmavara**<br>President<br>Karnataka Tulu Sahithya Academy |
| Publisher | : | **Chandrahasa Rai B**<br>Registrar<br>Karnataka Tulu Sahithya Academy |
| Published by | : | **Karnataka Tulu Sahithya Academy**<br>Tulu Bhavana, Urvastore<br>Post: Ashoka Nagar<br>Mangaluru - 575006 Tel: 0824-2459389<br>email: tulu.academy@yahoo.co.in |
| © | : | Karnataka Tulu Sahithya Academy |
| First Edition | : | 2016 |
| No. of Copies | : | 300 |
| Pages | : | 80 |
| Price | : | 70/- |
| Design & Printed at | : | Pavan Graphics Industries<br>First Floor, N.D. Complex,<br>Opp.Gokarnanatheshwara Temple,<br>Alake Kudroli, Mangalore.<br>Ph. : 9242885743 |

# ಅಧ್ಯಕ್ಷರ ಮಾತು

ತುಳುನಾಡು, ತುಳುನುಡಿ, ಮತ್ತು ತುಳುವರು ಕೃಷಿ ಆಧಾರಿತ ಬದುಕಿನಲ್ಲಿ ರೂಢಿಸಿಕೊಂಡ ಸಂಸ್ಕೃತಿಯ ಬಗೆಗಿನ ಅಧ್ಯಯನಕ್ಕೆ ಬಹಳಷ್ಟು ಅವಕಾಶವಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಈ ತರಹದ ಅಧ್ಯಯನಕ್ಕೆ ಮಹತ್ವ ನೀಡಿ, ತನ್ನ ಕ್ರಿಯಾಯೋಜನೆಯಲ್ಲಿ ಫೆಲೋಶಿಪ್ ಅಧ್ಯಯನ ಯೋಜನೆಯನ್ನೂ ಅಳವಡಿಸಿಕೊಂಡಿತು. ಸರಕಾರದ ಅನುದಾನವನ್ನು ಬಳಸಿಕೊಂಡು ಅರ್ಹ ವಿದ್ವಾಂಸರನ್ನು ಮುಖತ: ಸಂದರ್ಶನದ ಮೂಲಕ ಆಯ್ಕೆಮಾಡಿ, ಫೆಲೋಶಿಪ್ ನೀಡಿ, ಈ ಅಧ್ಯಯನಾತ್ಮಕ ಕೆಲಸದಲ್ಲಿ ತೊಡಗಿಸಿತು. 2012ನೇ ಇಸವಿಯಿಂದಲೇ ಆರಂಭಗೊಂಡ ಈ ಫೆಲೋಶಿಪ್ ಆಧಾರಿತ ಅಧ್ಯಯನ ಮುಂದುವರಿಯುತ್ತಾ ಬರುತಿದ್ದು, ಈಗಾಗಲೇ ಸಿದ್ಧಗೊಂಡ ಬರಹಗಳು ಇದೀಗ ಪ್ರಕಟಗೊಳ್ಳುತ್ತಿವೆ.

2014–2015ನೇ ಸಾಲಿನ ಫೆಲೋಶಿಪ್ ಪಡೆದ ಶ್ರೀ ಹರೀಶ್ ಆಳ್ವ ಎಮ್.ಜಿ., 'ತುಳುವರ ಕೃಷಿ ಆರಾಧನಾ ಸಂಸ್ಕೃತಿ 'ಪೂಕರೆ ಆಚರಣೆ' ಮತ್ತು ಸಮಾಜ ವ್ಯವಸ್ಥೆ' ಎಂಬ ವಿಷಯದ ಅಧ್ಯಯನದಲ್ಲಿ ತೊಡಗಿಸಿಕೊಂಡವರು. ಡಾ. ಪೂವಪ್ಪ ಕಣಿಯೂರುರವರ ಮಾರ್ಗದರ್ಶನದಲ್ಲಿ ನಡೆಸಿದ ಅಧ್ಯಯನ ವಿಚಾರಗಳನ್ನು ಕೃತಿರೂಪದಲ್ಲಿ ಅಕಾಡೆಮಿಗೆ ಸಲ್ಲಿಸಿರುತ್ತಾರೆ. ತುಳುವರಿಗೆ ಕೃಷಿ ಕೇವಲ ಒಂದು ಕಸುಬಲ್ಲ. ಕೃಷಿಯೂ ಒಂದು ಸಂಸ್ಕೃತಿ. ಅದರಲ್ಲಿ ಹತ್ತುಹಲವು ಆರಾಧನಾ ವಿಧಿಗಳೂ ಇವೆ. ಅವುಗಳಲ್ಲಿ ಒಂದು 'ಪೂಕರೆ ಆಚರಣೆ'. ಈ ಆಚರಣೆಯಲ್ಲಿ ಕರಾವಳಿಯ ಸಮಾಜ ವ್ಯವಸ್ಥೆಯ ಒಳನೋಟವೂ ಒದಗುವಂತಿದೆ. ಕೃಷಿಯು ಎಲ್ಲ ವರ್ಗದ ದುಡಿಮೆಗಾರರನ್ನು ಒಳಗೊಂಡು ಸಾಗುವ ಕ್ರೀಯೆ. ಭೂಮಿತಾಯಿಯನ್ನು ಗೌರವಿಸುವ, ನಮ್ಮ 'ಅಹಂ' ಅನ್ನು ಅಳಿಸಿ ಕೊಳ್ಳುವ ಅಗತ್ಯದ ಮರ್ಮವನ್ನು ಈ ಆಚರಣೆಯಲ್ಲಿ ಗುರುತಿಸಬಹುದು. ಶ್ರೀ ಹರೀಶ್ ಆಳ್ವರ ಈ ವಿಶೇಷ ಮಾಹಿತಿ ಭರಿತ ಅಧ್ಯಯನವು ತುಳುವರ ಕೃಷಿ ಸಂಬಂಧಿತ ಆರಾಧನೆಯ ಕಾರ್ಯಕಾರಣಗಳನ್ನು ಶೋಧಿಸುವಲ್ಲಿ ಯಶಸ್ವಿಯಾಗಿದೆ. ಈ ಅಧ್ಯಯನ ಗ್ರಂಥವನ್ನು ಪ್ರಕಟಿಸುವ ಸಂದರ್ಭದಲ್ಲಿ ಲೇಖಕ ಆಳ್ವರನ್ನು ಅಕಾಡೆಮಿ ಅಭಿನಂದಿಸುತ್ತಿದೆ. ಮಾರ್ಗದರ್ಶನ ಮಾಡಿದ ಡಾ. ಪೂವಪ್ಪ ಕಣಿಯೂರುರವರಿಗೆ ಶುಭವನ್ನು ಹಾರೈಸುತ್ತಿದೆ.ಮತ್ತು ಮುದ್ರಣದಲ್ಲಿ ಸಹಕರಿಸಿದ 'ಪವನ್ ಗ್ರಾಫಿಕ್ಸ್' ನ ಪ್ರಸನ್ನ ಮತ್ತು ಬಳಗದವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

**ಎಮ್. ಜಾನಕಿ. ಬ್ರಹ್ಮಾವರ**
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯಅಕಾಡೆಮಿ
ಮಂಗಳೂರು.

**14–10–2016**

## ಲೇಖಕರ ಮಾತು

ತುಳುನಾಡಿನ ಪ್ರತಿ ಊರಿನ ದೊಡ್ಡ ಭತ್ತದ ಗದ್ದೆಗಳ ನಡುವೆ 'ಪೂಕರೆ' ರಾರಾಜಿಸುತ್ತಿದ್ದ ದಿನಗಳಿದ್ದವು. ಕೃಷಿ ಕಾರ್ಮಿಕರ ಕೊರತೆ, ಬೆಳೆದ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಬೆಲೆ ಇಲ್ಲದಿರುವುದು, ಕೃಷಿ ಭೂಮಿಗಳಲ್ಲಿ ತಲೆ ಎತ್ತುತ್ತಿರುವ ಕಾಂಕ್ರೀಟ್ ಕಟ್ಟಡಗಳು, ಸ್ಥಾಪನೆಗೊಳ್ಳುತ್ತಿರುವ ಉದ್ದಿಮೆಗಳು ಇತ್ಯಾದಿಗಳಿಂದ ಭತ್ತ ಬೆಳೆಯುವ ಗದ್ದೆಗಳು ಇಲ್ಲವಾಗಿವೆ ಮತ್ತು ಇಲ್ಲಿನ ಕೃಷಿಕ ಕೃಷಿಯಿಂದ ದೂರ ಸರಿದು ಪೂಕರೆ ಆಚರಣೆಗಳು ಬಹುತೇಕ ನಿಂತು ಹೋಗಿವೆ. ಆಚರಣೆಗಳೆಂದರೆ ನಂಬಿಕೆಯ ಕ್ರಿಯಾರೂಪ ಮಾತ್ರವಾಗಿರದೆ ಸಮುದಾಯವೊಂದರ ಸಂಸ್ಕೃತಿಯ ಚಹರೆಯೂ ಆಗಿದೆ. ಈ ನಿಟ್ಟಿನಲ್ಲಿ ತುಳುನಾಡಿನ ಪೂಕರೆ ಆಚರಣೆ ಮಹತ್ವವನ್ನು ಪಡೆಯುತ್ತದೆ. ಕೃಷಿ ಸಮುದಾಯವೊಂದರ ಬದುಕಿನ ವಿಭಿನ್ನ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಆಯಾಮಗಳನ್ನು ಕೇಂದ್ರೀಕರಿಸಿ ಈ ಅಧ್ಯಯನವನ್ನು ಮಾಡಲಾಗಿದೆ.

ಈ ಸಂಶೋಧನಾ ಪ್ರಬಂಧವನ್ನು ರೂಪಿಸಲು ಅವಕಾಶ ಕಲ್ಪಿಸಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದ ಸುಳ್ಯ ನೆಹರು ಮೆಮೋರಿಯಲ್ ಪದವಿ ಕಾಲೇಜಿನ ಪ್ರಾಧ್ಯಾಪಕ ಡಾ. ಪೂವಪ್ಪ ಕಣಿಯೂರು ಅವರಿಗೆ ಕೃತಜ್ಞತೆಗಳು. ಈ ಪ್ರಬಂಧ ರಚಿಸುವಲ್ಲಿ ನಿಖರ ಮಾಹಿತಿಗಳನ್ನು ನೀಡಿ ಹರಸಿದ ನನ್ನಮ್ಮ ಮೂಲೂರುಗುತ್ತು ಗುಲಾಬಿ ಆಳ್ವ ಮತ್ತು  ಇನ್ನಿತರ ವಕ್ತೃಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

**ಹರೀಶ್ ಆಳ್ವ ಎಮ್. ಜಿ.**

Cell : 9449534197
email : harishalvamg@gmail.com

# ವಿಷಯಾನುಕ್ರಮಣಿಕೆ


**ಅಧ್ಯಾಯ ೧**

ಪ್ರಸ್ತಾವನೆ ವ್ಯಾಪ್ತಿ ಮತ್ತು ಉದ್ದೇಶ

**ಅಧ್ಯಾಯ ೨**

ತುಳುನಾಡಿನ ಕೃಷಿ ಸಂಸ್ಕೃತಿ ಮತ್ತು ಆರಾಧನೆಗಳು

**ಅಧ್ಯಾಯ ೩**

ಪೂಕರೆ ಆಚರಣೆಯ ಭೌಗೋಳಿಕತೆ

೩.೧ ಬಂಟ್ವಾಳ

೩.೨ ಮಂಗಳೂರು

೩.೩ ಪುತ್ತೂರು

೩.೪ ಬೆಳ್ತಂಗಡಿ

೩.೫ ಪ್ರಾದೇಶಿಕ ಸಾದೃಶ್ಯ ಮತ್ತು ವೈದೃಶ್ಯ

**ಅಧ್ಯಾಯ ೪**

ಪೂಕರೆ ಆಚರಣೆಯ ಸ್ವರೂಪ

**ಅಧ್ಯಾಯ ೫**

ಪೂಕರೆ ಆಚರಣೆ ಸಾಂಪ್ರದಾಯಿಕತೆ ಮತ್ತು ಪಲ್ಲಟಗಳು

**ಅಧ್ಯಾಯ ೬**

ಸಮಾರೋಪ

# ಅಧ್ಯಾಯ ೧
# ಪ್ರಸ್ತಾವನೆ, ವ್ಯಾಪ್ತಿ ಮತ್ತು ಉದ್ದೇಶ

೧. ಪ್ರಸ್ತಾವನೆ

೧.೧ ಅಧ್ಯಯನ ಉದ್ದೇಶ

೧.೨ ಅಧ್ಯಯನ ವ್ಯಾಪ್ತಿ

೧.೩ ಸೈದ್ಧಾಂತಿಕ ಚೌಕಟ್ಟು

೧.೪ ಈಗಾಗಲೇ ನಡೆದಿರುವ ಅಧ್ಯಯನಗಳು

# ತುಳುವರ ಕೃಷಿ ಆರಾಧನಾ ಸಂಸ್ಕೃತಿ 'ಪೂಕರೆ ಆಚರಣೆ' ಮತ್ತು ಸಮಾಜ ವ್ಯವಸ್ಥೆ

## 1.1 ಪ್ರಸ್ತಾವನೆ

ತುಳು ಭಾಷಿಕರಿರುವ ನಾಡು ತುಳುನಾಡು. ಇಲ್ಲಿನ ಸಂಸ್ಕೃತಿಯ ಮೂಲ ಸೆಲೆ ಇರುವುದು ಕೃಷಿಯಲ್ಲಿ. ಕೇರಳದ ಕಾಸರಗೋಡು ಜಿಲ್ಲೆಯ ಚಂದ್ರಗಿರಿಯಿಂದ ಕರ್ನಾಟಕದ ಉಡುಪಿ ಜಿಲ್ಲೆಯ ಬಾರ್ಕೂರು ತನಕ ಅರಬ್ಬೀ ಸಮುದ್ರದ ಕಿನಾರೆಯಿಂದ ಸಹ್ಯಾದ್ರಿಯವರೆಗೆ ಹರಡಿರುವ ತುಳುನಾಡು ಪ್ರಕೃತಿದತ್ತವಾಗಿ ಹೆಚ್ಚಿನ ಮಳೆ ಬೀಳುವ ಪ್ರದೇಶವಾಗಿದೆ. ಮಳೆಯ ಜತೆಗೆ ಈ ಭಾಗಕ್ಕೆ ಸಾಕಷ್ಟು ಸೂರ್ಯನ ಬೆಳಕು ದೊರೆಯುತ್ತದೆ. ಉಷ್ಣವಲಯದ ಇಲ್ಲಿನ ಮಣ್ಣು ನೀರು ಹವಾಮಾನ ಭತ್ತದ ಕೃಷಿಗೆ ಸೂಕ್ತವಾಗಿದೆ. ಪ್ರಾಚೀನ ಕಾಲದಿಂದಲೂ ಇಲ್ಲಿನ ಸಮುದಾಯ ಭತ್ತದ ಕೃಷಿಗೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಾಬಂದಿದೆ.

ತುಳುನಾಡಿನ ಭತ್ತದ ಕೃಷಿಮಾಡುವ ರೈತರು ಸಾಕಷ್ಟು ನೀರಿನ ವ್ಯವಸ್ಥೆ ಇರುವ ತಮ್ಮ ಗದ್ದೆಗಳಲ್ಲಿ ವರ್ಷದಲ್ಲಿ ಮೂರು ಬೆಳೆಗಳನ್ನು ಬೆಳೆಯುತ್ತಾರೆ. ಮಳೆಗಾಲ ಆರಂಭವಾಗುತ್ತಿದ್ದಂತೆ ಏಣೆಲು ಬೆಳೆ ಬೆಳೆಯುತ್ತಾರೆ. ಅಕ್ಟೋಬರ್ ಹೊತ್ತಿಗೆ ಸುಗ್ಗಿ ಬೆಳೆಯ ನಾಟಿಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಜಡಿ ಮಳೆಯ ಆರ್ಭಟ ಕಡಿಮೆಯಾಗಿ ಮೊದಲ ಬೆಳೆ ಮನೆ ಸೇರಿರುತ್ತದೆ. ಕೃಷಿ ಚಟುವಟಿಕೆಯ ಒತ್ತಡವೂ ಕೊಂಚ ಕಡಿಮೆಯಾಗಿ ರೈತ ಒಂದು ರೀತಿಯಲ್ಲಿ ಸಮೃದ್ಧಿಯ ವಾತಾವರಣವನ್ನು ಅನುಭವಿಸುತ್ತಿರುತ್ತಾನೆ. ಈ ಸಂದರ್ಭದಲ್ಲಿ ಕೃಷಿಕರು ತಾವು ಪ್ರೀತಿಸುವ ಪ್ರಕೃತಿ ಮತ್ತು ನಂಬಿರುವ ದೈವೀ ಶಕ್ತಿಗಳಿಗೆ ಗೌರವ ಸಲ್ಲಿಸಿ ಹಬ್ಬ ಆಚರಿಸುತ್ತಾರೆ. ವಿಶಿಷ್ಟವಾದ ಆಚರಣೆಯೊಂದಿಗೆ ಸಮೃದ್ಧವಾಗಿರುವ ಈ ಹಬ್ಬವನ್ನು ಕಂಬುಳಕೋರಿ ಉತ್ಸವ, ಪೂಕರೆ ಪರ್ಬ, ಕೋರಿಜಾತ್ರೆ, ಕಂಬಲ್ದಕೋರಿ, ಪೂಕರೆ ಕಂಬಲ ಉತ್ಸವ, ಪೂಕರೆ ಪಾಡ್ಲೋ ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ತುಳುನಾಡಿನ ಈ ಕೃಷಿ ಉತ್ಸವ, ಇಲ್ಲಿನ ಜನರ ಸಾಮಾಜಿಕ, ಆರ್ಥಿಕ, ಆಡಳಿತಾತ್ಮಕ ಜನಜೀವನ ಪದ್ಧತಿಯನ್ನು ಸರಳವಾಗಿ ಅರ್ಥೈಸಲು ಸೂಕ್ತ ಮಾಧ್ಯಮವಾಗಿದೆ.

## 1.2 ಅಧ್ಯಯನ ವ್ಯಾಪ್ತಿ

ಕೃಷಿ ಸಂಸ್ಕೃತಿಯ ಕುರುಹಾಗಿ ತುಳುನಾಡಿನ ಕೆಲವೇ ಕಡೆ ಉಳಿದುಕೊಂಡಿರುವ, ಕೆಲವೆಡೆ ಕಟ್ಟಳೆಗೆ ಸೀಮಿತಗೊಂಡ ಹಂತಕ್ಕೆ ತಲುಪಿರುವ 'ಪೂಕರೆ ಆಚರಣೆ ಯಾ

'ಕಂಬಲ ಕೋರಿ ಉತ್ಸವ' ಅಧ್ಯಯನವನ್ನು ಇಲ್ಲಿ ಬಂಟ್ವಾಳ, ಬೆಳ್ತಂಗಡಿ, ಮಂಗಳೂರು ಮತ್ತು ಪುತ್ತೂರು ತಾಲೂಕುಗಳಿಗೆ ಸೀಮಿತಗೊಳಿಸಲಾಗಿದೆ. ಇಂದು ಸಾಂಕೇತಿಕವಾಗಿ ಕಟ್ಟಳೆಯಾಗಿ ಆಚರಣೆಯಾಗುತ್ತಿರುವ ಹಿನ್ನೆಲೆಯಲ್ಲಿ ಪೂಕರೆ ರಚನೆ, ಆರಾಧನೆ, ಸಾಂಸ್ಕೃತಿಕ ವಿನ್ಯಾಸಗಳನ್ನು ಕಂಡುಕೊಳ್ಳುವ ಉದ್ದೇಶಕ್ಕಾಗಿ ಈ ಭೌಗೋಳಿಕ ವ್ಯಾಪ್ತಿಯನ್ನು ಇಟ್ಟುಕೊಳ್ಳಲಾಗಿದೆ.

## 1.3 ಅಧ್ಯಯನ ಉದ್ದೇಶ

ಆಚರಣೆಗಳೆಂದರೆ ನಂಬಿಕೆಯ ಕ್ರಿಯಾರೂಪ ಮಾತ್ರವಾಗಿರದೆ ಸಮುದಾಯವೊಂದರ ಸಂಸ್ಕೃತಿಯ ಚಹರೆಯೂ ಆಗಿರುತ್ತದೆ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಧಾನ ವೃತ್ತಿಯಾಗಿದ್ದ ಕೃಷಿ, ವರ್ತಮಾನದಲ್ಲಿ ನಷ್ಟದ ವೃತ್ತಿಯಾಗಿ ಮಾರ್ಪಡುಗೊಂಡಿದೆ. ಭತ್ತ ಬೆಳೆಯುವುದಕ್ಕೆ ಜನ ಹಿಂದೇಟು ಹಾಕುತ್ತಿದ್ದಾರೆ. ಕೂಲಿ ಕಾರ್ಮಿಕರ ಕೊರತೆ, ತಲಾ 400ರಿಂದ 500ಕ್ಕೇರಿರುವ ದಿನಗೂಲಿ, ರಾಸಾಯನಿಕ ಗೊಬ್ಬರ ಬಳಕೆ ಇಲ್ಲದೆ ಕೃಷಿ ಇಲ್ಲ ಎನ್ನುವ ಸ್ಥಿತಿ, ಸಣ್ಣ ಹಿಡುವಳಿದಾರರಿಗೆ ಹೊಂದಾಣಿಕೆಯಾಗದಿರುವ ಯಾಂತ್ರೀಕರಣ. ಬೆಳೆದ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಬೆಲೆ ಇಲ್ಲದಿರುವುದು, ಕೃಷಿ ಭೂಮಿಗಳಲ್ಲಿ ತಲೆ ಎತ್ತುತ್ತಿರುವ ಕಾಂಕ್ರೀಟ್ ಕಟ್ಟಡಗಳು–ಉದ್ದಿಮೆಗಳು; ಕೃಷಿಗೆ ಪೂರಕವಲ್ಲದ ವಾತಾವರಣವನ್ನು ನಿರ್ಮಿಸಿದೆ. ಈ ಕಾರಣಗಳಿಂದ ಇಲ್ಲಿನ ಕೃಷಿಕ ಕೃಷಿಯಿಂದ ದೂರ ಸರಿಯುವುದು ಅನಿವಾರ್ಯವಾಗಿದೆ.

ತುಳುನಾಡಿನಲ್ಲಿ ಕೃಷಿ ಅವನತಿಯತ್ತ ಸಾಗುವುದರೊಂದಿಗೆ ಆ ಸಂಬಂಧಿಯಾದ ಕಂಬಲಕೋರಿಯಂತಹ ವಿಶಿಷ್ಟ ಸಂಸ್ಕೃತಿ ಆಚರಣೆಗಳು ನಾಶವಾಗಿವೆ. ಹೊಸ ತಲೆಮಾರಿಗೆ ಇದರು ಪರಿಚಯ ಇಲ್ಲವಾಗುತ್ತಿದೆ. ರೂಪಪಲ್ಲಟದೊಂದಿಗೆ ಅಳಿವಿನತ್ತ ಹೆಜ್ಜೆ ಇಟ್ಟಿರುವ ಅಲಿಖಿತ ಜೀವನ ಪದ್ಧತಿಯಾಗಿರುವ ಪೂಕರೆ ಆಚರಣೆಯನ್ನು ಲಿಖಿತವಾಗಿಡುವುದು ಅನಿವಾರ್ಯವಾಗಿದೆ. ಈ ದೃಷ್ಟಿಯಿಂದ ಕೃಷಿ ಸಂಸ್ಕೃತಿಯಲ್ಲಿ ಅನನ್ಯವಾಗಿರುವ ಪೂಕರೆ ಆಚರಣೆಯನ್ನು ದಾಖಲಿಸುವ ಮತ್ತು ಅದರ ಹಿಂದಿರುವ ಆಲೋಚನೆಯನ್ನು ಗ್ರಹಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ. ಪೂಕರೆ ಆಚರಣೆ ತುಳುನಾಡಿನ ದೈವಾರಾಧನೆ ಮತ್ತು ನಾಗಾರಾಧನೆಯೊಂದಿಗೆ ಹೊಂದಿರುವ ಅಂತರ್ಗತ ಸಂಬಂಧವನ್ನು ತೆರೆದಿಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಪ್ರಧಾನವಾಗಿ ಈ ಅಧ್ಯಯನ ಕೃಷಿಮೂಲವಾಗಿ ತುಳುನಾಡಿನ ಸಂಸ್ಕೃತಿಯಲ್ಲಾಗುತ್ತಿರುವ ಸಾಂಸ್ಕೃತಿಕ ಪಲ್ಲಟವನ್ನು ದಾಖಲಿಸುವ ಪ್ರಯತ್ನವೂ ಆಗಿದೆ.

## 1.4 ಸೈದ್ಧಾಂತಿಕ ಚೌಕಟ್ಟು

ಸಮುದಾಯ ಜೀವನದ ಅಗತ್ಯವಾದ ಕೃಷಿ ಸಂಸ್ಕೃತಿ ಪ್ರಧಾನವಾಗಿ ಪ್ರಕೃತಿ ಆರಾಧನೆ ಜೊತೆಗೆ ಅಲೌಕಿಕ ಶಕ್ತಿಗಳ ಆರಾಧನೆಯೊಂದಿಗೆ ಅನುಸಂಧಾನಗೊಂಡಿದೆ.

ಈ ಮೂಲಕ ಕೃಷಿ ಸಮುದಾಯಕ್ಕೆ ಕೃಷಿ ವ್ಯವಹಾರ ಮಾತ್ರವಾಗಿರದೆ ದೈವಿಕತೆಯೂ ಆಗಿದೆ. ಈ ದೃಷ್ಟಿಯಿಂದ ರೈತ, ಕೃಷಿಯನ್ನು ಆರಾಧನಾ ಭಾವದಿಂದ ಕಂಡಿದ್ದಾನೆ. ದೈವಾರಾಧನೆ ಮತ್ತು ನಾಗಾರಾಧನೆ ಅವಿನಾಭಾವದೊಂದಿಗೆ ಬೆರೆತಿರುವ ಪೂಕರೆ ಆಚರಣೆಯನ್ನು ಕೇಂದ್ರೀಕರಿಸಿದಂತೆ ಕೃಷಿ ಮೂಲದ ಇತರ ಆರಾಧನೆಗಳನ್ನು ದಾಖಲಿಸಲು ಇಲ್ಲಿ ಉದ್ದೇಶಿಸಲಾಗಿದೆ. ಒಟ್ಟಾರೆ ಈ ಮೂಲಕ ಕೃಷಿ ಸಂಸ್ಕೃತಿಯ ವಿಭಿನ್ನ ನೆಲೆಗಳನ್ನು ಮತ್ತು ಅದರ ಚಲನಶೀಲತೆ ಹಾಗೂ ಪಲ್ಲಟಗಳನ್ನು ದಾಖಲಿಸುವ ದೃಷ್ಟಿಯಿಂದ ವಿಸ್ತ್ರತ ಕ್ಷೇತ್ರ ಕಾರ್ಯ ಮಾಡಿ ಮಾಹಿತಿ ಸಂಗ್ರಹವನ್ನು ಮಾಡಲಾಗಿದೆ. ಸಂಗ್ರಹವಾದ ಮಾಹಿತಿಯನ್ನು ಅನುಲಕ್ಷಿಸಿ ಸೈದ್ಧಾಂತಿಕವಾಗಿ ವಿವರಿಸಿ ವ್ಯಾಖ್ಯಾನಿಸುವ ಪ್ರಯತ್ನವನ್ನು ಮಾಡಲಾಗಿದೆ.

## 1.5 ಪೂಕರೆ ಆಚರಣೆಯ ಕುರಿತು ನಡೆದಿರುವ ಅಧ್ಯಯನಗಳು

ಡಾ. ಪೂವಪ್ಪ ಕಣಿಯೂರು ಅವರ 'ಉಳ್ಳಾಕುಳು' ಐತಿಹಾಸಿಕತೆ, ಪ್ರಾದೇಶಿಕತೆ ಮತ್ತು ಆರಾಧನಾ ಸ್ವರೂಪ ಮಹಾಪ್ರಬಂಧದಲ್ಲಿ (ಪುಟ 304,305) ಹಿಂಗಾರ, ಹಳದಿ ಹೂವುಗಳಿಂದ ಅಲಂಕರಿಸಲ್ಪಟ್ಟ ಗೆಣೆಗಳಿಂದ ಕೂಡಿದ ವಿಶಾಲಗದ್ದೆಯಲ್ಲಿ ನೆಡುವ ಎತ್ತರದ ಕಂಬಕ್ಕೆ ಪೂಕರೆ ಎನ್ನುತ್ತಾರೆ ಎನ್ನುವ ವಿವರವನ್ನು ನೀಡುತ್ತಾರೆ. ಇವರದ್ದೇ ಪೂಕರೆ ಹೆಸರಿನ ಲೇಖನ ಮತ್ತು ಸುಂದರ ಕೇನಾಜೆಯವರ ಭತ್ತದ ಲೋಕ ಒಂದಿಷ್ಟು ಪೂರಕ ಮಾಹಿತಿ ನೀಡುತ್ತದೆ. ಡಾ. ಪುರುಷೋತ್ತಮ ಬಿಳಿಮಲೆ, ಡಾ. ವಾಮನ ನಂದಾವರ, ಪ್ರೊ ಅಮೃತ ಸೋಮೇಶ್ವರ, ಇಂದಿರಾ ಹೆಗ್ಗಡೆ,ಡಾ. ಅಭಯಕುಮಾರ್ ಮೊದಲಾದ ವಿದ್ವಾಂಸರು ಕಂಬುಲ ಪೂಕರೆಯ ಕುರಿತಾದ ತಮ್ಮ ಬರಹಗಳನ್ನು ಸಾಂದರ್ಭಿಕ ಹಿನ್ನೆಲೆಯಲ್ಲಿ ದಾಖಲಿಸಿದ್ದಾರೆ.

ತುಳುನಾಡಿನಲ್ಲಿ ಕಂಬಳ ಉತ್ಸವ ಮತ್ತು ಕೋಣಗಳ ಓಟದ ಕುರಿತಾಗಿ ಸುಮಾರು 733 ವರ್ಷಗಳಷ್ಟು ಹಿಂದಿನ ಲಿಖಿತ ದಾಖಲೆ ಸಿಗುತ್ತದೆ. ಬಾರ್ಕೂರು ಬಲ್ಲಮಹಾದೇವಿಯ 1282ರ ಶಾಸನದಲ್ಲಿ ಕಂಬಳದ ಕುರಿತಾದ ಉಲ್ಲೇಖ ಇದೆ. ಅಲೂಪ ರಾಣಿ ಬಲ್ಲಮಹಾದೇವಿಯ ಕರ್ಜೆಯ ಶಾಸನವನ್ನು ಉಲ್ಲೇಖಿಸಿರುವ ಕೆ.ವಿ. ರಮೇಶ್, ಕೆಂಜೂರು ಶಾಸನವೆಂದು ಹೆಸರಿಸಿದ್ದಾರೆ. ಈ ಶಾಸನದಲ್ಲಿ ಕಂಬಲ ಪದ ಉಲ್ಲೇಖಿತವಾಗಿರುವುದನ್ನು ಬರೆದಿದ್ದಾರೆ. ಇದರ ಪ್ರಕಾರ ಇಲ್ಲಿನ ಕೃಷಿ ಸಂಸ್ಕೃತಿಯನ್ನು ಸುಮಾರು ಎಂಟುನೂರು ವರ್ಷಗಳ ಹಿಂದೆ ದಾಖಲಿಸುವ ಪ್ರಯತ್ನ ನಡೆದಿರುವುದು ಕಂಡು ಬರುತ್ತದೆ.

ಬಲೀಂದ್ರ ಪಾಡ್ದನದಲ್ಲಿ ಬರುವ **'ಕೋರು ಕಂಬಳ ಮಾಡಿಸಿ ಪೂಕರೆ ಹಾಕಿಸುತ್ತೇನೆ'** ವಾಕ್ಯವೊಂದು ಕಂಬಲ ಕೋರಿ ಪೂಕರೆಯ ಪ್ರಾಚೀನತೆಗೆ ಜನಪದದಲ್ಲಿ ಸಿಗುವ ಸಾಕ್ಷಿಯಾಗಿ ನಿಲ್ಲುತ್ತದೆ. ಮರವಾಂಡಿ ಭೂತದ ಪಾಡ್ದನ, ಅಗೋಳಿ ಮಂಜನನ ಐತಿಹ್ಯಗಳಲ್ಲಿ ಕಂಬುಲದ ಬಗ್ಗೆ ಕೆಲವೊಂದು ವಿವರಣೆಗಳು ಸಿಗುತ್ತವೆ. ಇದರ

ಪ್ರಕಾರ ತುಳುನಾಡಿನ ಜನರ ನಡುವೆ ಕಂಬಳ ಕೋರಿ ಉತ್ಸವದ ವಿಧಿವಿಧಾನಗಳು ಹೊಸತೇನು ಆಗಿರಲಿಲ್ಲ. ಅದು ವಿಶಾಲವಾದ ಭತ್ತದ ಗದ್ದೆಗಳನ್ನು ನಿರ್ಮಾಣಗೊಳಿಸಿ ಕಟ್ಟಪುಣಿ ಇಲ್ಲವೆ ದೊಡ್ಡ ಗದ್ದೆಯ ಬದುಗಳನ್ನು ಕಟ್ಟಿಸಿ ತೆಂಗಿನ ಗಿಡ ನೆಡಿಸಿ ಪೂಕರೆ ಹಾಕಿಸುವುದನ್ನು ಸೂಚ್ಯವಾಗಿ  ಒಂದೇ ವಾಕ್ಯದಲ್ಲಿ ಹೇಳುತ್ತದೆ.

ಡಾ.ಕೊಯಿರಾ ಎನ್. ಬಾಳೆಪುಣಿ ಅವರ 'ಮುಗೇರರ ದುಡಿ ಕುಣಿತಗಳು ಸ್ವರೂಪ ಮತ್ತು ಸಂಸ್ಕೃತಿ ಅಧ್ಯಯನ'ಕೃತಿಯಲ್ಲಿ (ಪುಟ 142) ಕಂಬುಲಗಳ ಒಟ್ಟು ಸಂಖ್ಯೆಯನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಅದರೂ ಒಟ್ಟು ಸಂಖ್ಯೆಯನ್ನು 200 ಎಂದು ಅಂದಾಜು ಮಾಡಬಹುದು ಎಂದು ಹೇಳಿದ್ದಾರೆ. ಅರಸು ಕಂಬುಲ, ದೇವರ ಕಂಬಲ, ಬೀಡು ಗುತ್ತುಗಳ ಓಟದ ಕಂಬುಲ ಎಂದು ದಾಖಲಿಸುತ್ತಾರಾದರೂ ಪೂಕರೆ ಉತ್ಸವದ ಬಗ್ಗೆ ವಿವರಗಳನ್ನು ಒದಗಿಸುವುದಿಲ್ಲ.

# ಅಧ್ಯಾಯ ೨
# ತುಳುನಾಡಿನ ಕೃಷಿ ಸಂಸ್ಕೃತಿ ಮತ್ತು ಆರಾಧನೆಗಳು


೨.೧ ತುಳುನಾಡು ಮತ್ತು ಕೃಷಿ

೨.೨ ತುಳುನಾಡು ಮತ್ತು ಆರಾಧನೆಗಳು

೨.೨.೧ ನಾಗಾರಾಧನೆ

೨.೨.೨ ದೈವಾರಾಧನೆ

೨.೨.೩ ಪಿತೃ ಆರಾಧನೆ

೨.೨.೪ ಕೃಷಿ ಸಂಬಂಧಿ ಆಚರಣೆಗಳು

೨.೨.೫ ವೈದಿಕ ಮೂಲ ಆಚರಣೆಗಳು

೨.೩ ಕೃಷಿ ಮತ್ತು ಕಂಬಲ ಗದ್ದೆಗಳು


---

## 2.1 ತುಳುನಾಡು ಮತ್ತು ಕೃಷಿ

ಅವಿಭಜಿತ ದಕ್ಷಿಣ ಕನ್ನಡದಲ್ಲಿ ಮಾತ್ರವಲ್ಲದೆ ಕೊಡಗಿನ ಸೋಮವಾರ ಪೇಟೆ, ಹಾಸನದ ಸಕಲೇಶಪುರದಂತಹ ಪ್ರದೇಶಗಳಲ್ಲೂ ಜನ ಊರಿನ ಆಡುಭಾಷೆಯಾಗಿ ತುಳುವನ್ನು ಮಾತನಾಡುತ್ತಾರೆ. ಈ ಭಾಗದಲ್ಲಿ ನೆಲೆಸಿರುವ ಕನ್ನಡ, ಬ್ಯಾರಿ, ಕೊಂಕಣಿ, ಮಲಯಾಳಂ, ತೆಲುಗು, ತಮಿಳು ಮಾತೃಭಾಷೆ ಇರುವ ಜನರೂ ವ್ಯವಹಾರಿಕ ಆಡುಭಾಷೆಯನ್ನಾಗಿ ತುಳು ಭಾಷೆಯನ್ನು ಮಾತನಾಡುತ್ತಾರೆ.

ತುಳುನಾಡಿನ ಜನ ಭತ್ತದ ಜತೆಗೆ ತೆಂಗು, ಕಂಗು, ಬಾಳೆ, ಉದ್ದು, ಹೆಸರು, ಹುರುಳಿಯಂತಹ ದ್ವಿದಳ ಧಾನ್ಯಗಳನ್ನು ಮಾತ್ರವಲ್ಲದೆ ಸೌತೆ, ಕುಂಬಳ, ಬೆಂಡೆ, ಅಲಸಂಡೆ, ಇನ್ನಿತರ ತರಕಾರಿಗಳಲ್ಲದೆ ಗೆಡ್ಡೆಗೆಣಸುಗಳನ್ನು ಬೆಳೆಯುತ್ತಾರೆ. ಆದರೂ ಭತ್ತದ ಕೃಷಿಗೆ ಹೆಚ್ಚಿನ ಮಾನ್ಯತೆ ನೀಡುವ ಇಲ್ಲಿನ ರೈತರು ಭತ್ತದ ಕೃಷಿಯ ಕುರಿತು ಹೆಚ್ಚಿನ ಕಾಳಜಿ ತೋರಿಸುತ್ತಿದ್ದರು.

ಪಶ್ಚಿಮಕ್ಕೆ ಹರಿಯುವ ನದಿಗಳು, ಝರಿ, ತೋಡು, ನೀರಿನ ಹಳ್ಳಗಳು ಬೆಟ್ಟಗುಡ್ಡ ಪ್ರದೇಶಕ್ಕೆ ಹೊಂದಿಕೊಂಡಿರುವ ಫಲವತ್ತಾದ ಇಲ್ಲಿನ ಮಣ್ಣು ಕೃಷಿಗೆ ಪೂರಕವಾಗಿದೆ. ಈ ಕಾರಣದಿಂದ ಇಲ್ಲಿನ ಜನ ಸಜವಾಗಿಯೇ ಕೃಷಿ ಪ್ರಿಯರಾಗಲು ಕಾರಣವಾಗಿದೆ. **ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಸುತ್ತಲೂ ಸಹ್ಯಾದ್ರಿ ಬೆಟ್ಟಗಳ ಸಾಲುಗಳಿಂದ ಆವೃತವಾಗಿ ಸುಂದರ ಪ್ರಕೃತಿಯ ನಡುವೆ ಜೀವನ ನಡೆಸಿದ ಇಲ್ಲಿನ ಸಮುದಾಯ ಪ್ರಕೃತಿಪ್ರಿಯರಾಗಿರುವುದು ಸಹಜ. ಇಲ್ಲಿನ ಜನ ಸಮುದಾಯ ಪ್ರಕೃತಿ ಶಕ್ತಿಯನ್ನು ಜಗತ್ತಿನ ಅತ್ಯುನ್ನತ ಮಾನವ ಮೌಲ್ಯಗಳಾದ ಸತ್ಯ ಮತ್ತು ಸಾಮಾಜಿಕ ನ್ಯಾಯದೊಂದಿಗೆ ಜತೆಗೂಡಿಸಿ ಸತ್ಯದೈವ- ಧರ್ಮದೈವವೆಂದು ಉಪಾಸನೆ ಮಾಡುತ್ತಾರೆ. ಈ ದೈವಗಳ ಪರಿವಾರದಲ್ಲಿ ಸತ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ಮಡಿದ ಪಿತೃಗಳನ್ನೂ ಸೇರಿಸಿ ಅವರನ್ನು ಗೌರವಿಸಿ ಆರಾಧಿಸುತ್ತಾರೆ. ಇದಕ್ಕೆ ಪೂರಕವಾಗಿ ನಾಗಾರಾಧನೆಗೂ ಪ್ರಾಶಸ್ತ್ಯ ಇದೆ. ಈ ಆರಾಧನೆಗಳನ್ನು ಅವಲೋಕಿಸಿದಾಗ ನಿತ್ಯ ಕಾಯಕದ ಕೃಷಿ ಪದ್ಧತಿಯ ಭಾಗವಾಗಿ ಈ ಆರಾಧನೆಗಳನ್ನು ಜನ ಒಪ್ಪಿಕೊಂಡಿರುವುದನ್ನು ಕಾಣಬಹುದು. ತುಳುನಾಡಿನ ಸಂಸ್ಕೃತಿಯೊಂದಿಗೆ ಕೃಷಿ ಮತ್ತು ಆರಾಧನೆಗಳು ಒಂದಕ್ಕೊಂದು ಬೆಸೆದುಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.**

ಹೆಚ್ಚು ಮಳೆಬೀಳುವ ಪ್ರದೇಶವಾಗಿರುವ ತುಳುನಾಡಿನ ಮಣ್ಣು ಮತ್ತು ಭೌಗೋಳಿಕತೆ ಕೃಷಿ ಬೆಳೆಗಳಿಗೆ ಹೇಳಿ ಮಾಡಿಸಿದಂತಿದೆ. ಇಲ್ಲಿನ ಜನರ ಮುಖ್ಯ ಆಹಾರವಾಗಿಯೂ ಅಕ್ಕಿಗೆ ಪ್ರಾಶಸ್ತ್ಯ ಇದೆ . ಈ ಕಾರಣದಿಂದ ಈ ಪ್ರದೇಶದ ರೈತರು ದೊಡ್ಡ ದೊಡ್ಡ ಭತ್ತದ ಗದ್ದೆಗಳನ್ನು ನಿರ್ಮಿಸಿದ್ದರು. ಹಲವೆಡೆ ಪ್ರಕೃತಿದತ್ತವಾಗಿದ್ದ ಪ್ರದೇಶದಲ್ಲಿ ಬದು ಕಟ್ಟಿ ನೀರು ಹಾದು ಹೋಗಲು ಅವಕಾಶ ಇರುವಂತೆ ಹಾಗೂ ಕೃಷಿಗೆ ನೀರಿನ ಕೊರತೆ ಇರುವ ಕಾಲದಲ್ಲಿ ಬೇರೆಡೆಯಿಂದ ನೀರು ಹಾಯಿಸಲು ಅವಕಾಶ ಇರುವಂತೆ ಗದ್ದೆಗಳ ನಿರ್ಮಾಣ ಮಾಡಿದ್ದರು. ಬೆಳೆಯುವ ಕೃಷಿಗೆ ನೀರಿನ ವ್ಯವಸ್ಥೆ ಸಾಕಷ್ಟು ಇಲ್ಲದೆಡೆಯಲ್ಲಿ ಕೆರೆ ಬಾವಿ ನದಿಗಳಿಂದ ನೀರು ಹಾಯಿಸಲು ಕಾಲುವೆ ಇಲ್ಲವೆ ಏತ ನೀರಾವರಿ ವ್ಯವಸ್ಥೆ ಮಾಡುತ್ತಿದ್ದರು.

ಆಹಾರ ಮತ್ತು ಆರ್ಥಿಕತೆಯ ಮೂಲ ಬೆಳೆಯಾಗಿದ್ದ ಭತ್ತ ಮತ್ತು ಅದನ್ನು ಬೆಳೆಯುವ ಗದ್ದೆಗಳ ವಿಚಾರದಲ್ಲಿ ಮತ್ತು ಕೃಷಿ ಮಾಡಲು ಉಪಯೋಗಿಸುತ್ತಿದ್ದ ಪ್ರಾಣಿಗಳು ಮತ್ತು ಪರಿಕರಗಳು ಬಗ್ಗೆ ಜೀವನ ಪ್ರೀತಿ ಇದ್ದ ಇಲ್ಲಿನ ರೈತ, ತನ್ನ ಅನುಭವ ಮತ್ತು ಶೋಧನೆಗೆ ಒತ್ತು ಕೊಟ್ಟಿದ್ದ. ತುಳುನಾಡಿನ ಭತ್ತದ ಗದ್ದೆಗಳನ್ನು ಕೊಳಕೆ ಬೈಲು ಗದ್ದೆಗಳು, ಮಜಲು ಗದ್ದೆಗಳು, ಬೆಟ್ಟುಗದ್ದೆಗಳು ಮತ್ತು ಕರೆಸಾಲಿನ ಗದ್ದೆಗಳು ಎಂಬುದಾಗಿ ಗುರುತಿಸಬಹುದಾಗಿದೆ.

ವರ್ಷದಲ್ಲಿ ಮೂರು ಬೆಳೆ ಬೆಳೆಯಲು ನೀರಿನ ವ್ಯವಸ್ಥೆ ಇರುವ ಭತ್ತದ ಗದ್ದೆಗಳನ್ನು ಕೊಳಕೆ ಗದ್ದೆಗಳು ಇಲ್ಲವೆ ಬೈಲು ಗದ್ದೆಗಳೆಂದು ಕರೆಯುತ್ತಾರೆ. ಇದರಲ್ಲಿ ಮಳೆಗಾಲದ ಆರಂಭಕ್ಕೆ ಬೆಳೆಯುವ ಬೆಳೆಯನ್ನು 'ಏಣಿಲು ಬೆಳೆ' ಎಂದು ಕರೆಯುತ್ತಾರೆ. ಮೊದಲ ಬೆಳೆ ಮೂರು ಮೂರುವರೆ ತಿಂಗಳ ಅಂತರದಲ್ಲಿ ಕಟಾವಿಗೆ ಬರುತ್ತದೆ. ಈ ಬೆಳೆಯ ಫಸಲು ಅನೇಕ ಬಾರಿ ಅನಿರೀಕ್ಷಿತಗಳ ಪರೀಕ್ಷೆಗಳನ್ನೆದುರಿಸಬೇಕಾಗುತ್ತದೆ. ಏಕೆಂದರೆ ಮಳೆ ಎಡೆಬಿಡದೆ ಸುರಿದರೆ ನಾಟಿ ಕೊಳೆತು ಹೋಗುವುದು ಫಸಲು ಕೊಯ್ಯಲು ಆಗದೆ ಭತ್ತ ಗದ್ದೆಯಲ್ಲಿಯೇ ಬಿದ್ದು ಹೋಗುವುದು ಸಾಮಾನ್ಯ, ಉಳಿದರೆ ಭತ್ತದ ಫಸಲು ರೈತನ ಮನೆ ಸೇರುವುದು.

ಮೊದಲ ಏಣೆಲು ಬೆಳೆ ಕಟಾವಾದ ನಂತರ ನಾಟಿ ಮಾಡುವ ಬೆಳೆಯನ್ನು 'ಸುಗ್ಗಿಬೆಳೆ' ಎಂದು ಕರೆಯುತ್ತಾರೆ. ಈ ಬೆಳೆಯ ಫಸಲು ರೈತನ ಶ್ರಮ ಮತ್ತು ಕಾಳಜಿಯನ್ನು ಅವಲಂಬಿಸಿದೆ. ಈ ಬೆಳೆಯ ಸಂದರ್ಭದಲ್ಲಿ ನಿರಂತರ ಮಳೆ ಸುಮಾರಾಗಿ ಕಡಿಮೆಯಾಗಿರುತ್ತದೆ. ಸುಗ್ಗಿ ಬೆಳೆಯ ಸಂದರ್ಭದಲ್ಲಿ ರೈತ ಗದ್ದೆಯ ಬದುವನ್ನು ಸ್ವಚ್ಛಮಾಡಿ ಸುಂದರಗೊಳಿಸುವ ಕೆಲಸಕ್ಕೆ ಹೆಚ್ಚಿನ ಗಮನ ನೀಡುತ್ತಾನೆ. ನೈಸರ್ಗಿಕವಾಗಿ ಮಳೆ ಅಗತ್ಯಕ್ಕಿಂತ ಕಡಿಮೆಯಾಗಿ ಸೂರ್ಯ ಹೆಚ್ಚು ಕಾಣಿಸಿಕೊಂಡರೆ ಗದ್ದೆಗಳಿಗೆ ನೀರು ಹಾಯಿಸುವ ವ್ಯವಸ್ಥೆಯ ಬಗ್ಗೆಯೂ ಮುತುವರ್ಜಿ ವಹಿಸುತ್ತಾನೆ. ಬೆಳೆಯುವ ಗದ್ದೆಗಳಿಗೆ ಗೊಬ್ಬರ, ಬೂದಿ ಬಳಕೆ ಹೆಚ್ಚು ಮಾಡುತ್ತಾನೆ.

ತುಳುನಾಡಿನ ರೈತರು ಕೊಳಕೆ ಬೈಲು ಗದ್ದೆಗಳಲ್ಲಿ ಮೂರನೇ ಬೆಳೆಯನ್ನೂ ಬೆಳೆಯುತ್ತಾರೆ. ಮಳೆಗಾಲದ ಮಳೆಯನ್ನು ಮಾತ್ರ ನಂಬಿಕೊಂಡು ಭತ್ತ ಬೆಳೆಯುವ ಗದ್ದೆಗಳಿಗೆ ಬೇಸಿಗೆಯಲ್ಲಿ ಹೊಳೆ, ಒರತೆ, ಕೆರೆ ಹಾಗೂ ಬಾವಿಗಳಿಂದ ನೀರು ಹಾಯಿಸಿ ಬೆಳೆ ಬೆಳೆಯಲಾಗುತ್ತದೆ. ಈ ಬೆಳೆಗೆ 'ಕೊಳಕೆ ಬೆಳೆ' ಎಂದು ಕರೆಯುತ್ತಾರೆ. ಆದರೆ ಈ ಬೆಳೆಗೆ ನೀರು ಹಾಯಿಸುವುದೇ ದೊಡ್ಡ ಕೆಲಸ. ನದಿ ಹೊಳೆಯ ಬದಿ ಇರುವ ಇಲ್ಲವೆ ತಗ್ಗು ಪ್ರದೇಶಗಳಲ್ಲಿ ನಿರ್ಮಾಣಗೊಂಡಿರುವ ಬೈಲುಗದ್ದೆಗಳು ಮೂರೂ ಬೆಳೆಗಳಿಗೆ ಪ್ರಶಸ್ತವಾಗಿದ್ದರೂ ಎರಡನೇ ಸುಗ್ಗಿ ಬೆಳೆಗೆ ತುಳುನಾಡಿನ ರೈತ ಹೆಚ್ಚು ಪ್ರಾಶಸ್ತ್ಯ ನೀಡುತ್ತಾನೆ. ಏಕೆಂದರೆ ಮೊದಲ ಏಣಿಲು ಬೆಳೆ ಅತಿವೃಷ್ಟಿಗೆ ಈಡಾಗಬಹುದು. ಮೂರನೇ ಕೊಳಕೆ ಬೆಳೆ ನೀರು ಇಲ್ಲದೆ ಪರದಾಡಬಹುದು ಆದರೆ ಎರಡನೇ ಸುಗ್ಗಿ ಬೆಳೆರೈತನ ಶ್ರಮವನ್ನು ಯಾವತ್ತೂ ಸುಳ್ಳು ಮಾಡುವುದಿಲ್ಲ ಎಂಬ ನಂಬಿಕೆ ಇಲ್ಲಿನ ರೈತರದ್ದು.

ಬೈಲು ಗದ್ದೆಗಳಲ್ಲಿ ಏಣಿಲು ಮತ್ತು ಸುಗ್ಗಿ ಎರಡು ಬೆಳೆ ಮಾತ್ರ ಬೆಳೆಯುಲು ಅವಕಾಶ ಇರುವ ಗದ್ದೆಗಳೂ ಇವೆ. ಮಳೆಗಾಲದ ಮಳೆ ನೀರನ್ನು ನಂಬಿಕೊಂಡು

ಒಂದು ಬೆಳೆಯನ್ನು ಮಾತ್ರ ಬೆಳೆಯುವ ಭತ್ತದ ಗದ್ದೆಗಳಿಗೆ ಬೆಟ್ಟುಗದ್ದೆಗಳೆಂದು ಕರೆಯುತ್ತಾರೆ. ಈ ರೀತಿಯ ಬೆಟ್ಟುಗದ್ದೆಗಳನ್ನು ಸಾಮಾನ್ಯವಾಗಿ ಬೆಟ್ಟಗುಡ್ಡ ಪ್ರದೇಶಗಳನ್ನು ಸಮತಟ್ಟು ಮಾಡಿ ನಿರ್ಮಿಸಿರುತ್ತಾರೆ. ಇದಕ್ಕೆ 'ಕುಮೇರು ಬೆಳೆ' ಎಂತಲೂ ಕರೆಯುತ್ತಾರೆ. ಇದು ಎತ್ತರದ ಬೆಟ್ಟಗುಡ್ಡಗಳನ್ನು ಸಮತಟ್ಟು ಮಾಡಿ ಮಳೆಯ ನೀರನ್ನು ಮಾತ್ರ ನಂಬಿಕೊಂಡು ಮಾಡುವ ಬೆಳೆ. ಸಾಕಷ್ಟು ನೀರಿನಾಶ್ರಯ ಇರುವ ತುಳುನಾಡಿನ ಭತ್ತದ ಗದ್ದೆಗಳಲ್ಲಿ ಏಣೆಲು, ಸುಗ್ಗಿ ಅಲ್ಲದೆ ಮೂರನೆ ಬೆಳೆಯಾಗಿ 'ಕೊಳಕೆ' ಬೆಳೆಯನ್ನು ಬೆಳೆಯಲಾಗುತ್ತದೆ. ಇದು ಸಾಮಾನ್ಯವಾಗಿ ಬೇಸಿಗೆಯ ಬೆಳೆ.

**ಬೈಲು ಗದ್ದೆ, ಮಜಲು ಗದ್ದೆ, ಬೆಟ್ಟು ಗದ್ದೆಗಳ ಹೊರತಾಗಿ ನದಿ ತೀರದ 'ಪಟ್ಲಗದ್ದೆ'ಗಳಿವೆ. ಈ ಗದ್ದೆಗಳು ನದಿ ತೀರದ ಗದ್ದೆಗಳು. ಮಳೆಗಾಲದಲ್ಲಿ ನದಿಗಳು ಉಕ್ಕೇರಿ ಹರಿಯುವ್ಯದರಿಂದ ಈ ಗದ್ದೆಗಳಲ್ಲಿ ಏಣೆಲು ಬೆಳೆ ಬೆಳೆಯಲು ಅವಕಾಶ ಇರುವುದಿಲ್ಲ. ತುಳುನಾಡಿನಲ್ಲಿ ಪೂರ್ವದ ಬೆಟ್ಟಗುಡ್ಡಗಳಿಂದ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುವ ನದಿಗಳು ಮಳೆಗಾಲದಲ್ಲಿ ಅತಿ ರಭಸದಿಂದ ಪ್ರವಾಹವನ್ನು ತುಂಬಿಕೊಂಡು ಹರಿಯುತ್ತವೆ. ಬೇಸಿಗೆ ಕಾಲದಲ್ಲಿ ಈ ನದಿಗಳು ಹೆಚ್ಚು ಕಡಿಮೆ ಬತ್ತಿ ಹೋಗುವ ಸ್ಥಿತಿಗೆ ತಲುಪುತ್ತದೆ. ಈ ನದಿಯ ಅಕ್ಕಪಕ್ಕ ಇರುವ ಭತ್ತದ ಗದ್ದೆಗಳಲ್ಲಿ ಮಳೆಗಾಲದ ಏಣೆಲು ಬೆಳೆ ಬೆಳೆಯುವುದು ಸಾಧ್ಯವಿಲ್ಲ. ಏಕೆಂದರೆ ನದಿಯ ನೀರು ಮಳೆಗಾಲದಲ್ಲಿ ಹತ್ತಿರದ ಗದ್ದೆಗಳಿಗೂ ನುಗ್ಗುತ್ತದೆ. ಭತ್ತದ ಗದ್ದೆಗಳಿಗೆ ನೀರು ನುಗ್ಗಿ ಅಲ್ಲಿರುವುದನ್ನೆಲ್ಲ ಕೊಚ್ಚಿಕೊಂಡು ಹೋಗುತ್ತದೆ. ಅಲ್ಲದೆ ಅನಗತ್ಯ ಕಣಜ ಕಸಕಡ್ಡಿ ಮಣ್ಣುಗಳನ್ನು ತಂದು ಹರಡಿ ಬಿಡುತ್ತದೆ. ಈ ವ್ಯವಸ್ಥೆಗೆ ಅನುಗುಣವಾಗಿ ಇಲ್ಲಿನ ರೈತ ನದಿತೀರದ ಗದ್ದೆಗಳು ಇಲ್ಲವೆ 'ಕರೆಸಾಲು' ಗದ್ದೆಗಳಲ್ಲಿ ಮಳೆಪ್ರವಾಹ ಆರ್ಭಟ ಕಡಿಮೆಯಾಗುವ ಹೊತ್ತಿಗೆ ಅಂದರೆ ಸುಗ್ಗಿ ಬೆಳೆಯುವ ಹೊತ್ತಿಗೆ ಸ್ವಲ್ಪ ಸಮಯ ಮೊದಲು ಭತ್ತದ ಬೆಳೆ ಬೆಳೆಯುವ ಪ್ರಯತ್ನ ಮಾಡುತ್ತಾನೆ. ಈ ಬೆಳೆಗೆ 'ಪಟ್ಲಬೆಳೆ' ಎಂದು ಕರೆಯುತ್ತಾರೆ. ಈ ಪಟ್ಲ ಬೆಳೆಯ ನಂತರ ಎಡೆಕೊಳಕೆ ಬೆಳೆಗಳಿಗೆ ಅವಕಾಶ ಇರುತ್ತದೆ.**

ಈ ಗದ್ದೆಗಳಲ್ಲಿ ಪಟ್ಲ ಬೆಳೆ ಕೊಯ್ಲಾದ ನಂತರ ಎರಡನೇ ಬೆಳೆಯಾಗಿ ಇಡೆಕೊಳಕೆ ಬೆಳೆಯಲಾಗುತ್ತದೆ. ನದಿ ತೀರದಲ್ಲಿ ವಿಫುಲ ನೀರಿನಾಶ್ರಯ ಇರುವುದರಿಂದ ಇಡೆಕೊಳಕೆ ಬೇಸಿಗೆಯ ಬೆಳೆಯಾಗಿ ಕಂಡು ಬರುತ್ತದೆ. ಇದು ಕೊಳಕೆ ಬೆಳೆಗಿಂತ ಸ್ವಲ್ಪ ಮುಂಚಿತವಾಗಿ ಕಟಾವಿಗೆ ಬರುತ್ತದೆ. ಈ ಬೆಳೆಗೆ ಗ್ರಾಮೀಣ ಏತದಿಂದ ನೀರುಣಿಸುವ ಸೌಲಭ್ಯ ಮಾಡಲಾಗುತ್ತಿತ್ತು. ರೈತರು ನೀರಿನ ಪೈಪುಗಳ ರೀತಿಯಲ್ಲಿ ಈಂದ್ ಮರದ ತೊಗಟೆಗಳಿಂದ ತಯಾರಿಸಿದ ದಂಬೆಗಳನ್ನು ಉಪಯೋಗಿಸುತ್ತಿದ್ದರು. ಕೊಳಕೆ ಬೆಳೆ ಬೆಳೆಯುವಾಗ 'ತೊನ್ನೂರು' ಮಾದರಿಯ ತಳಿಗಳನ್ನು ಬಳಸುತ್ತಾರೆ. ಈ ತಳಿ ಕಡಿಮೆ ಅವಧಿಯ ತಳಿಯಾಗಿದ್ದು ಇದು ಬೆಳೆಯಲು ಕಡಿಮೆ ನೀರು ಸಾಕಾಗುತ್ತದೆ. ಬೇಸಿಗೆ ಕಾಲಿಡುವ ಸಂದರ್ಭದಲ್ಲಿ ಬೆಳೆಯುವ ಬೆಳೆಯಾಗಿರುವುದರಿಂದ ನೀರಿನ ಅಗತ್ಯವನ್ನು ಮನಗಂಡು ಈ ತಳಿಯನ್ನು ಬೆಳೆಯಲಾಗುತ್ತದೆ.

ಭತ್ತ ಬೆಳೆಯುವ ಬಗೆ ತುಳುವರಲ್ಲಿ ವಿಶಿಷ್ಟವಾಗಿದೆ. ತುಳುನಾಡಿನ ರೈತರು ಸಾಮಾನ್ಯವಾಗಿ ಭತ್ತವನ್ನು 24ಗಂಟೆ ನೀರಿನಲ್ಲಿ ನೆನೆಸುತ್ತಾರೆ. ನಂತರ ಭತ್ತದ ಮೂಟೆಯನ್ನು ನೀರಿನಿಂದ ಮೇಲೆ ತೆಗೆದು ಮರುದಿನ ಅದಕ್ಕೆ ಸೆಗಣಿ ನೀರು

ಬಳಿಯುತ್ತಾರೆ. ಅದು ಮೊಳಕೆಯೊಡೆಯಲು ಆರಂಭಿಸುತ್ತಿದ್ದಂತೆ ನಾಲ್ಕನೇ ದಿನ ಬಿತ್ತನೆ ಬೀಜವನ್ನು ಬಾಳೆ ಎಳೆಯ ಮೇಲೆ ಹರಡಿ ನೆಕ್ಕಿ ಸೊಪ್ಪು ಮೇಲೆ ಇಟ್ಟು ಮುಚ್ಚುತ್ತಾರೆ. ಮೇಲ್ಗಡೆ ಭಾರ ಇರುವಂತೆ ಕಲ್ಲು ಇಲ್ಲವೆ ಭಾರದ ವಸ್ತುಗಳನ್ನು ಇಡುತ್ತಾರೆ. ಹೀಗೆ ಮೊಳಕೆಯೊಡೆದ ಭತ್ತವನ್ನು ಮೊದಲೇ ಉತ್ತುಹದಮಾಡಿ ಇಟ್ಟಿರುವ ಗದ್ದೆಗಳಲ್ಲಿ (ಪಾತಿ) ಬಿತ್ತುತ್ತಾರೆ. ಇಲ್ಲವೆ ಪಸರಿಸುತ್ತಾರೆ. ನಂತರ ಈ ಮೊಳಕೆ 20ರಿಂದ 30 ದಿವಸಗಳೊಳಗೆ ಬೆಳೆದು 'ನೇಜಿ' ಎಣಿಸಿಕೊಳ್ಳುತ್ತದೆ. ಈ ಸಂದರ್ಭದಲ್ಲಿ ಅದನ್ನು ಕಿತ್ತು ಉತ್ತು ಹದಮಾಡಿರುವ ಇತರಗದ್ದೆಗಳಲ್ಲಿ ನೆಡುತ್ತಾರೆ. ಭತ್ತ ಬೆಳೆಯುವ ಕಾರ್ಯ ಶ್ರಮದಾಯಕವಾದುದು.

ತುಳುವರ ಆಹಾರ ಪದ್ದತಿ ಇತರ ಭಾಗಗಳಿಗಿಂತ ತೀರ ಭಿನ್ನವಾಗಿದೆ. ರೈತರು ರುಚಿಯೊಂದಿಗೆ ಆರೋಗ್ಯಕರ ಆಹಾರ ಪದ್ದತಿಗೆ ಒತ್ತು ಕೊಟ್ಟಿರುವುದು ಕಂಡು ಬರುತ್ತದೆ. ದೇಹರಕ್ಷಣೆಯ ಔಷಧೀಯ ಗುಣಗಳನ್ನು ಹೊಂದಿರುವ ಆಹಾರ ತಿನಿಸುಗಳು ಸಾಧ್ಯವಾದಷ್ಟು ತನ್ನ ನಿತ್ಯದ ಆಹಾರದಲ್ಲಿ ಬಳಸುತ್ತಾರೆ. ತಾಳೆಮರದ ಹೊಂಬಾಳೆಯಿಂದ ತೆಗೆಯುವ 'ನೀರಾ' ರಸ ಒಂದು ಆರೋಗ್ಯಕರ ಪೇಯ. ಈ ಪೇಯವನ್ನು ಸ್ವಲ್ಪ ಹೊತ್ತು ಇಟ್ಟರೆ ಅದು ಶೇಂದಿಯಾಗಿ ಪರಿವರ್ತನೆಯಾಗುತ್ತದೆ. ಈ ನೀರಾಕ್ಕೆ ಸುಣ್ಣ ಸೇರಿಸಿ ಕುದಿಸಿ ತಯಾರಿಸಿದ ಬೆಲ್ಲವನ್ನು 'ಓಲೆಬೆಲ್ಲ' ಎಂದು ಕರೆಯುತ್ತಾರೆ. ಈ ಓಲೆಬೆಲ್ಲ ಔಷಧೀಯ ಗುಣಗಳನ್ನು ಹೊಂದಿದೆ. ಈ ಬೆಲ್ಲವನ್ನು ಚಹಾ, ಕಾಫಿ ತಯಾರಿಸಲು ಸಕ್ಕರೆಯ ಬದಲಿಗೆ ಬಳಸುತ್ತಾರೆ. ಎಳನೀರು ಗಂಜಿ ಜತೆ ಈ ಓಲೆಬೆಲ್ಲ (ಬಣ್ಣಂಗಾಯಿ ಬೆಲ್ಲ) ಸವಿದರೆ ಅದು ರುಚಿಯುಳ್ಳದ್ದು ಮಾತ್ರವಲ್ಲ ಅದು ಶಕ್ತಿವರ್ಧಕವಾಗಿಯೂ ಬಳಕೆಯಾಗುತ್ತದೆ. ಈ ಕಾರಣಕ್ಕಾಗಿ ತುಳುನಾಡಿನ ಕುಸ್ತಿ , ತಾಲೀಮು, (ಗೋದ ಗೊಬ್ಬು) ಮಲ್ಲ ವಿದ್ಯೆ ಕಲಿಯುವವರು ಬೆಳಗ್ಗಿನಿಂದ ಸಂಜೆತನಕ ಹೊಲಗದ್ದೆಗಳಲ್ಲಿ ದುಡಿಯುವವರು ಎಳನೀರಿನ ಗಂಜಿಯೊಂದಿಗೆ ಬೆಲ್ಲ ಸವಿಯುತ್ತಿದ್ದರು. ಬಾಣಂತಿಯರ ಆಹಾರ ಆರೈಕೆಯಲ್ಲೂ ಈ ಬೆಲ್ಲವನ್ನೇ ಉಪಯೋಗಿಸುತ್ತಿದ್ದರು. ತುಳುವರು ತಮ್ಮ ಮೋಜಿನ ಸಮಯಕ್ಕೆ ಈ ಪ್ರಕೃತಿದತ್ತವಾದ ಅಮಲು ಪದಾರ್ಥವನ್ನು ಬಳಸುತ್ತಿದ್ದರು. ಮಾತ್ರವಲ್ಲ ಇಂದಿಗೂ ಅದರ ಬಳಕೆ ಉಳಿದುಕೊಂಡಿದೆ. ಹಣ್ಣು ಮತ್ತು ಮದ್ದಿನ ಬೇರುಗಳನ್ನು ಬಳಸಿಕೊಂಡು ಸ್ಥಳಿಯವಾಗಿ ಭಟ್ಟಿಇಳಿಸುವಿಕೆ ಮೂಲಕ ಮದ್ಯ ತಯಾರಿಸುವ ಕಲೆಯೂ ತುಳುಣಾಡಿನ ರೈತರಿಗೆ ಗೊತ್ತಿತ್ತು.

ತುಳುನಾಡಿನ ರೈತ ತನ್ನ ಜೀವನಾನುಭವದಿಂದ ಮಳೆಗಾಲ, ಚಳಿಗಾಲ, ಬೇಸಿಗೆಕಾಲಕ್ಕೆ ಸರಿಹೊಂದುವಂತಹ ಆಹಾರ ಪದ್ದತಿಯನ್ನು ರೂಢಿಸಿಕೊಂಡಿರುವುದು ಕಂಡು ಬರುತ್ತದೆ. ತುಳುನಾಡು ಪಶ್ಚಿಮಘಟ್ಟಗಳ ನಡುವೆ ಇರುವ ಭೂಪ್ರದೇಶವಾಗಿರುವುದರಿಂದ ಕಾಡಿನಲ್ಲಿ ನೈಸರ್ಗಿಕವಾಗಿ ಸಿಗುತ್ತಿದ್ದ ಕೆಲವೊಂದು ಮರಬಳ್ಳಿಗಳ ಹೂ, ತೊಗಟೆ, ಹಣ್ಣುಗಳನ್ನು ತನ್ನ ಆಹಾರ ತಯಾರಿಕೆಯಲ್ಲಿ ಸಂಬಾರ ಪದಾರ್ಥಗಳಾಗಿ ಉಪಯೋಗಿಸಿರುವುದು ಕಂಡು ಬರುತ್ತದೆ. ಇಲ್ಲಿನ ರೈತ ಈ ಔಷಧೀಯ ಗುಣಗಳುಳ್ಳ ಸಂಬಾರಗಳ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನೂ ಹೊಂದಿದ್ದ. ಈ ಕಾರಣದಿಂದ ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಇಲ್ಲಿನ ರೈತನ ಕೊಡುಗೆ ಸಾಕಷ್ಟಿದೆ.

ತುಳುನಾಡಿನ ಉಷ್ಣ ಹವಾಮಾನ ಆರೋಗ್ಯ, ಮತ್ತು ಪರಿಪೂರ್ಣ ಆಹಾರ ದೃಷ್ಟಿಯಿಂದ ತುಳುವರು ಕುಚ್ಚಲಕ್ಕಿಯನ್ನು ಇಷ್ಟ ಪಡುತ್ತಾರೆ. ಭತ್ತವನ್ನು ಬೇಯಿಸಿ ನಂತರ ಒಣಗಿಸಿ ಅದರಿಂದ ಅಕ್ಕಿಯನ್ನು ಪಡೆದರೆ ಅದು ಕುಚ್ಚಲಕ್ಕಿ ತುಳುವಿನಲ್ಲಿ ಅದು 'ಕಜೆ ಅಕ್ಕಿ' ಎಂದು ಕರೆಸಿಕೊಳ್ಳುತ್ತದೆ. ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೆ ಇಲ್ಲಿನ ಜನ ಈ ಕುಚ್ಚಲಕ್ಕಿಯ ಅನ್ನವನ್ನೇ ಬಳಸುತ್ತಾರೆ. ಅದರೊಟ್ಟಿಗೆ ಮೀನು ಸಾರು, ಇಲ್ಲವೆ ಕೋಳಿ ಸಾರು ಇಷ್ಟವಾದರೂ ಯಥೇಚ್ಛವಾಗಿ ತರಕಾರಿ ಸೊಪ್ಪು ಗೆಡ್ಡೆಗೆಣಸು ಬಳಕೆ ಮಾಡುತ್ತಾರೆ.

ತುಳುನಾಡಿನ ರೈತ ಉಪಯೋಗಿಸುವ ಉತ್ತಮ ಕಜೆ ಅಕ್ಕಿ ತಯಾರಿಸುವ ಉದ್ದೇಶದಿಂದ ಅತಿಕಾರೆ, ಕಯಮೆ, ಕಳಮೆ, ಗಂಧಸಾಲೆ(ಪರಿಮಳಯುಕ್ತ ಅಕ್ಕಿ) ಕಜೆ, ಪೊಣ್ಣರಿಯಂತಹ ಸಾಂಪ್ರದಾಯಿಕ ತಳಿಗಳನ್ನು ಬಳಸುತ್ತಿದ್ದ. ಮೊದಲ ಏಣೆಲ್ ಬೆಳೆಗೆ ಕಯಮೆ ಹೆಸರಿನ ತಳಿಯನ್ನು ಹೆಚ್ಚಾಗಿ ಆಯ್ಕೆ ಮಾಡುತ್ತಿದ್ದ. ಇದು ಶಕ್ತಿವರ್ಧಕ ಕೂಡಾ ಹೌದು. ಭತ್ತದ ತಳಿಗಳಲ್ಲಿ ನೂರಾರು ವಿಧದ ತಳಿಗಳಿವೆ. ಮಳೆಗಾಲದಲ್ಲಿ ಉಪಯೋಗಿಸಲು ಸೂಕ್ತವಾದ ಅಕ್ಕಿ, ಬೇಸಿಗೆ ಚಳಿ ಹೀಗೆ ಬೇರೆ ಬೇರೆ ಕಾಲದಲ್ಲಿ ಉಪಯೋಗಿಸಲು ಸೂಕ್ತವಾದ ಅಕ್ಕಿ ಸೇರಿದಂತೆ ಗಡ್ಡೆಗೆಣಸುಗಳು ತರಕಾರಿಗಳನ್ನು ಬಳಸುವಾಗಲೂ ತುಳುನಾಡಿನ ರೈತ ಒಂದು ರೀತಿಯ ಅಲಿಖಿತ ನಿಯಮವನ್ನು ಪಾಲಿಸುತ್ತಿದ್ದ ಇದು ಆರೋಗ್ಯವನ್ನು ಪಾಲಿಸುವ ದೃಷ್ಟಿಯಿಂದಲೂ ಮುಖ್ಯವಾಗಿರುವುದು ಕಂಡು ಬರುತ್ತದೆ. ಸುಗ್ಗಿ ಬೆಳೆಗೆ ಎಲ್ಯ ಅತಿಕಾರೆ ತಳಿಯನ್ನು ಹೆಚ್ಚು ಉಪಯೋಗಿಸುತ್ತಿದ್ದ. 'ಎಲ್ಯ ಅತಿಕಾರೆ' ಭತ್ತದ ಅಕ್ಕಿಯನ್ನು ಹೆಚ್ಚು ಸಮಯ ಸಂರಕ್ಷಿಸಲು ಬರುತ್ತದೆ. ಈ ತಳಿಯ ಭತ್ತದ ಅಕ್ಕಿ ಸಾಮಾನ್ಯವಾಗಿ ಹಾಳಾಗುವುದಿಲ್ಲ.(ತುರಿ ಇಲ್ಲವೆ ಅಕಾಲ ತೂತು ಬೀಳುವುದಿಲ್ಲ)

**ಇಲ್ಲಿನ ರೈತ ಆಹಾರ ತಯಾರಿಕೆಯಲ್ಲಿ ತಾನೇ ಬೆಳೆಸುವ ಊರ ಮೆಣಸು, ಕರಿಮೆಣಸು ಮತ್ತು ಹುಣಸೆ ಹಣ್ಣನ್ನು ಹೆಚ್ಚು ಬಳಸುವುದು, ಕೊಚ್ಚಲಕ್ಕಿ ಅನ್ನ, ಅಕ್ಕಿರೊಟ್ಟಿ ನಾಟಿ ಕೋಳಿ, ಸಮುದ್ರ ನದಿ ಹೊಳೆ ಮೀನು, ಬೇಟೆಯಾಡಿದ ಕಾಡಿನ ಪ್ರಾಣಿಗಳ ಮಾಂಸ, ದನದ ಹಾಲು, ಆಡಿನ ಹಾಲು, ಮೊಸರು ಜತೆಯಲ್ಲಿ ತರಕಾರಿ ಸೊಪ್ಪು ಗೆಡ್ಡೆಗೆಣಸುಗಳಿಗೆ ಆದ್ಯತೆ ನೀಡಿರುವುದು ಕಂಡು ಬರುತ್ತದೆ.**

## 2.2 ತುಳುನಾಡು ಮತ್ತು ಆರಾಧನೆಗಳು

ತುಳುನಾಡಿನ ಆರಾಧನಾ ಸಂಸ್ಕೃತಿ ಕೃಷಿ ಮತ್ತು ಪ್ರಕೃತಿಯನ್ನು ಕೇಂದ್ರವಾಗಿಟ್ಟುಕೊಂಡು ಬೆಳೆದು ಬಂದಿದೆ. ಪ್ರಧಾನವಾಗಿ ತುಳುನಾಡಿನ ಆರಾಧನಾ ಪರಂಪರೆ ಇಲ್ಲಿನ ಪ್ರಾಣಿ ಮತ್ತು ಸಸ್ಯವರ್ಗವನ್ನು ಒಳಗೊಂಡಿದೆ. ಇದು ಪ್ರಾಣಿಗಳ ಆರಾಧನೆ, ದೈವಾರಾಧನೆ, ನಾಗಾರಾಧನೆ ಮತ್ತು ಪಿತೃ ಆರಾಧನೆಯೊಂದಿಗೆ ಬೆಸೆದುಕೊಂಡಿರುವುದನ್ನು ಕಾಣಬಹುದು. ತುಳುವರ ಆರಾಧನಾ ಪರಂಪರೆಯಲ್ಲಿ ಜೀವನಾವರ್ತನ ಮತ್ತು ಕಾಲಾವರ್ತನ ಆರಾಧನೆಗಳು ಒಳಗೊಂಡಿವೆ.

### 2.2.1 ನಾಗಾರಾಧನೆ

ತುಳು ನಾಡಿನ ಆರಾಧನಾ ಪರಂಪರೆಯಲ್ಲಿ ನಾಗರಹಾವಿಗೆ ದೇವತೆಯ ಸ್ಥನ ಮಾನ ನೀಡಲಾಗಿದೆ ಕುಕ್ಕೆ ಸುಬ್ರಹ್ಮಣ್ಯ , ಕುಡುಪು, ಮಂಜೇಶ್ವರ, ಪೆರ್ಡೂರು, ಮಂದಾರ್ತಿ ಮುಂತಾದ ಕ್ಷೇತ್ರಗಳನ್ನು ನಾಗಕ್ಷೇತ್ರಗಳೆಂದು ಗುರುತಿಸಲಾಗುತ್ತದೆ. ಸಿರಿ ಆರಾಧನೆ ಇರುವ ನಾಗಕ್ಷೇತ್ರಗಳನ್ನು ಆಲಡೆಗಳೆಂದು ಗುರುತಿಸಿಕೊಂಡಿದ್ದಾರೆ. ಗದ್ದೆಗಳ ಬದುಗಳ ಸಮಿಪ ನಾಗನ ಹೆಸರಲ್ಲಿ ಸಣ್ಣ ಅರಣ್ಯ ಬೆಳೆಸಿ ಅದರ ನಡುವೆ ನಾಗ, ನಾಗಕನ್ನಿಕೆ ಮತ್ತು ಬೆಮ್ಮೆರ್ ಕಲ್ಲುಗಳನ್ನು ಇರಿಸಿ ವರ್ಷಕ್ಕೊಂದು ಸಾರಿ ಪೂಜೆ ನಡೆಸಲಾಗುತ್ತದೆ ಅವುಗಳಲ್ಲಿ ಸಿರಿಜಾತ್ರೆ ನಡೆಯುವ ಹಿರಿಯಡ್ಕ – ವೀರಭದ್ರ, ನಂದಳಿಕೆ (ಕಾರ್ಕಳ), ಮಣಿಕಲ್ಲು, ಮಾರಣಕಟ್ಟೆ, ಲಂಕೆಲೋಕನಾಡ್,(ನಿಡಿಗಲ್–ಉಜಿರೆ), ಕವತ್ತಾರ್(ಕಿನ್ನಿಗೋಳಿ), ಪಡುಬಿದಿರೆ (ಡಕ್ಕೆ ಬಲಿಗೆ ಪ್ರಸಿದ್ಧ), ಖಂಡಿಗೆ(ಸುರತ್ಕಲ್) ಮುಂತಾದ ಹತ್ತಾರು ಆಲಡೆಗಳು ಇಂದಿಗೂ ಕೃಷಿ ಸಮುದಾಯದ ಆರಾಧನಾ ಕೇಂದ್ರಗಳಾಗಿವೆ. **ಇಲ್ಲಿನ ಆರಾಧನೆಗಳು ಕೇವಲ ನಾಗನಿಗೆ ತನು ಹಾಕುವುದು ಇಲ್ಲವೆ ಹಾಲೆರೆಯುವುದಕ್ಕೆ ಸೀಮಿತವಾಗಿಲ್ಲ ಬದಲಾಗಿ ಆರಾಧನೆಯೊಂದಿಗೆ ಮಾನಸಿಕ ತುಮುಲ ತಲ್ಲಣಗಳನ್ನು ಹೊರಹಾಕುವ ಚಿಕಿತ್ಸಾ ಮಾದರಿಯ ಆರಾಧನೆಯಾಗಿ ಗಮನೀಯವಾಗಿದೆ.** ನಾಗನಿಗೆ ದೈವಗಳ ರೀತಿಯಲ್ಲಿ ಅರಳು, ಬೆಲ್ಲ, ಕಬ್ಬು ತುಂಡುಗಳನ್ನು ಬಾಳೆ ಎಲೆಯಲ್ಲಿ ಇರಿಸಿ ತಂಬಿಲ ಸೇವೆ ಸಲ್ಲಿಸುವ ಕ್ರಮವೂ ಇದೆ. ನಾಗಗ್ ತಂಬಿಲ ಆಗಿ ಇಲ್ಲವೆ ನಾಗನಿಗೆ ತನು ಎರೆಯುವಾಗ ನಾಗನ ಜತೆ ಇರುವ ಬೆಮ್ಮೆರ್, ನಾಗ ಕನ್ನಿಕೆ, ನಾಗನಿಗೆ ಹಾಲು ಎರೆಯುವ ಪೂಜೆ ನಡೆಯುತ್ತದೆ.

ತುಳುನಾಡಿನ ದೈವಾರಾಧನಾ ತಾಣಗಳಲ್ಲಿ ಸಾಮಾನ್ಯವಾಗಿ ನಾಗರ ಪಂಚಮಿ ದಿನಗಳಂದು ತನು ಎರೆಯುವ ಬದಲು ಈ ಕಂಬಲಕೋರಿ ಉತ್ಸವದ ಸಂದರ್ಭದಲ್ಲಿ ತನು ಎರೆಯುವ ಸಂಪ್ರದಾಯವನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ನಾಗರ ಪಂಚಮಿಯ ದಿನದಂದು ಹೆಚ್ಚುವರಿಯಾಗಿ ತನು ಎರೆಯುತ್ತಾರೆ. ತುಳುನಾಡಿನಲ್ಲಿ ನಾಗಾರಾಧನೆಗೆ ಪ್ರಾಶಸ್ತ್ಯ ಹೆಚ್ಚು ಇಲ್ಲಿ ನಾಗಬ್ರಹ್ಮ ಎನ್ನುವ ಶಕ್ತಿಯನ್ನು ಮೂಲ ಆರಾಧನಾ ಶಕ್ತಿಯಾಗಿ ಆರಾಧಿಸುತ್ತಾರೆ. ಹಿಂದೂ ಪುರಾಣಗಳ ಆಧಾರದಲ್ಲಿ ಆರಾಧನೆ ಮಾಡುವ ನಾಗಧಾರಿ ಶಿವ, ನಾಗನ ಮೇಲೆ ಮಲಗಿರುವ ವಿಷ್ಣು, ನಾಗರೂಪಿ ಸುಬ್ರಹ್ಮಣ್ಯ ರೂಪಕ್ಕೆ ಪರ್ಯಾಯವಾಗಿ ನಾಗ ಬಿಮ್ಮೆರ್ ಆರಾಧನೆ ಕಂಡು ಬರುತ್ತದೆ. ತುಳುನಾಡಿನ ಜನಪದ ಸಾಹಿತ್ಯ ಪರಂಪರೆಯ ಜನಪದ ಮಹಾವ್ಯಕ್ತಿಗಳಾದ ಸಿರಿ, ಕೋಟಿ ಚೆನ್ನಯ ಪಾಡ್ದನದಲ್ಲಿ ನಾಗಬಿರ್ಮೆರ್ ಜನಪದರ ಪ್ರಧಾನ ದೈವವಾಗಿ ಕಂಡು ಬರುತ್ತದೆ. ಬಿರ್ಮೆರ್ ಕೃಷಿಮೂಲ ತುಳುವರ ದೃಷ್ಟಿಯಲ್ಲಿ ಸಂಪತ್ತು ಸಮೃದ್ಧಿ ಆರೋಗ್ಯ ದಯಪಾಲಿಸುವ ಫಲದೇವತೆಯಾಗಿದ್ದಾನೆ.

### 2.2.2 ದೈವಾರಾಧನೆ

ನಾಗನ ಬಳಿಕ ಕೃಷಿಸಂಬಂಧಿ ದೈವಗಳು ಇಲ್ಲವೆ ಶಕ್ತಿಗಳ ಆರಾಧನೆ ತುಳುನಾಡಿನ ಮೂಲ ಆರಾಧನೆಯಾಗಿ ಗುರುತಿಸಿಕೊಂಡಿದೆ. ತುಳುವರು ಪ್ರಾಣಿ ಮೂಲದ

ಹಾಗೇನೇ ಹಿರಿಯರ ಆರಾಧನೆಯ ಹಿನ್ನೆಲೆಯಲ್ಲಿ ದೈವಗಳನ್ನು ಪರಿಕಲ್ಪಿಸಿದ್ದಾರೆ. ಪಂಜುರ್ಲಿ, ಮೈಸಂದಾಯ, ಹುಲಿದೈವಗಳು ಪ್ರಾಣಿ ಸಂಬಂಧ ದೈವಗಳಾದರೆ, ಸಿರಿ, ಕೋಟಿ, ಚೆನ್ನಯ, ಮುಗೇರ್ಲು ಸಾಂಸ್ಕೃತಿಕ ಹಿನ್ನೆಲೆಯ ದೈವಗಳು; ತುಳುವರ ದೈವಾರಾಧನಾ ಜಗತ್ತು ಪ್ರಧಾನವಾಗಿ 'ಮಾತೃತ್ವ' ಆರಾಧನೆಗೆ ಒತ್ತು ನೀಡಿದೆ. ಭೂಮಿಯನ್ನು ಹೆಣ್ಣೆಂದು ಗುರುತಿಸಿರುವುದು ಕಂಡು ಬರುತ್ತದೆ. ಈ ದೃಷ್ಟಿಯಲ್ಲಿ ಉಳ್ಳಾಲ್ತಿ, ಲೆಕ್ಕೆಸಿರಿ, ಕೊರತಿ, ಕಲ್ಲುರ್ಟಿ, ಜೂಮಾದಿ, ಇಂತಹ ಹತ್ತಾರು ಸ್ತ್ರೀ ದೈವಗಳ ಹೆಸರುಗಳನ್ನು ಗುರುತಿಸಬಹುದು. ಹೀಗೆ ತಮ್ಮ ಕಲ್ಪನೆಯ ದೈವಗಳನ್ನು ಮುಖವಾಡ ಶಿಲ್ಪಗಳಲ್ಲಿ ಒಡಮೂಡಿಸಿರುವುದಲ್ಲದೆ ಭಂಡಾರ ರೂಪದಲ್ಲಿ ಬಳಸಲಾಗುತ್ತದೆ. ದೈವಾರಾಧನೆಯಲ್ಲಿ ಚರ ಅಂದರೆ ಎಲ್ಲೆಂದರಲ್ಲಿಗೆ ಕೊಂಡೊಯ್ಯಬಹುದಾದ ಮುಖವಾಡ ಶಿಲ್ಪ(ಮುಗ)ಗಳನ್ನು ಪೂಜೆಗೆ ಬಳಸಲಾಗುತ್ತದೆ. ಇವುಗಳನ್ನು ಉಜ್ಜಾಲ್ ಎಂದು ಕರೆಯುವ ಉಯ್ಯಾಲೆ ಇಲ್ಲವೆ ಮುಂಡ್ಯೆ ಎಂದು ಕರೆಯುವ ಮರದ ಸಣ್ಣಗಾತ್ರದ ಮಂಚದಲ್ಲಿರಿಸಲಾಗುತ್ತದೆ.

ದೈವಾರಾಧನೆಯ ಕೇಂದ್ರ ದೈವಸ್ಥಾನ ಎಂದು ಕರೆಯಲ್ಪಡುತ್ತದೆ. ದೈವಸ್ಥಾನದಲ್ಲಿ ಸ್ತ್ರೀ ಶಕ್ತಿಯಾಗಿ ಉಳ್ಳಾಲ್ದಿ ಮತ್ತು ಪೂರಕವಾದ ಲೆಕ್ಕೆಸಿರಿ, ಜೂಮಾದಿ, ಕಲ್ಲುರ್ಟಿ, ಸತ್ಯದೇವತೆ, ಕೊರತಿ, ಮಾರಿ, ಮಂತ್ರದೇವತೆ, ಚಾಮುಂಡಿ, ಹೆಸರಿನಲ್ಲಿ ಶಕ್ತಿಯ ಆರಾಧನೆ ಮತ್ತು ಪುರುಷ ಶಕ್ತಿಯಾಗಿ ಧರ್ಮ ಅರಸು, ಉಳ್ಳಾಯ, ಪಂಜುರ್ಲಿ, ಭೈರವ, ಕೊರಗಜ್ಜ, ಗುಳಿಗ, ಬಂಟ ಮುಂತಾದ ಹೆಸರಲ್ಲಿ ಆರಾಧನೆ ನಡೆಯುತ್ತದೆ. ಇಲ್ಲಿ ಶಕ್ತಿ ಒಂದೇ ಆಗಿದ್ದರೂ ಪ್ರತೀ ಊರಿನಿಂದ ಊರಿಗೆ ಆರಾಧನಾ ಶಕ್ತಿಯ ಹೆಸರು ಮಾರ್ಪಾಡುಗೊಂಡಿರುವುದು ಕಂಡು ಬರುತ್ತದೆ. ಮಾತ್ರವಲ್ಲ ಈ ದೈವಗಳ ಉತ್ಸವ ಊರಿನ ಹೆಸರಿನೊಂದಿಗೆ ಹೇಳಲ್ಪಡುತ್ತದೆ. ಉದಾಹರಣೆಗೆ ಕಣಂದೂರಿನಲ್ಲಿ ನಡೆಯುವ ದೈವಗಳ ಉತ್ಸವಕ್ಕೆ ಕಣಂದೂರಾಯನ ಸಜೀಪದಲ್ಲಿ ನಡೆಯುವ ದೈವಗಳ ಉತ್ಸವಕ್ಕೆ ಸಜೀಪದಾಯನ, ತಿಬರ್ದಾಯನ (ಶಿಬರೂರು) ಎಂದು ಕರೆಯಲ್ಪಡುತ್ತದೆ. ಉತ್ಸವದಲ್ಲಿ ಸ್ತ್ರೀ ಶಕ್ತಿಗೆ ಪ್ರಾಮುಖ್ಯತೆ ಇದ್ದಲ್ಲಿ ಅದನ್ನು ಮೆಚ್ಚಿ ಎಂದು ಕರೆಯುತ್ತಾರೆ. ಮಾಣಿ, ಅನಂತಾಡಿ, ಕೇಪು, ಕೆಲಿಂಜ, ಕೂಟತ್ತಜೆ, ಮುಂತಾದ ಕಡೆಗಳಲ್ಲಿನ ಉತ್ಸವಗಳು ಮೆಚ್ಚಿ ಎಂದು ಕರೆಸಿಕೊಳ್ಳುತ್ತವೆ. ಇಲ್ಲಿ ಉಳ್ಳಾಲ್ದಿ ಎಂದು ಕರೆಸಿಕೊಳ್ಳುವ ಸ್ತ್ರೀ ಶಕ್ತಿಗೆ ಪ್ರಾಧಾನ್ಯತೆ ಇದೆ. ಮುಖ್ಯವಾದ ಪುರುಷ ಶಕ್ತಿಯನ್ನು ಧರ್ಮ ಅರಸು ಇಲ್ಲವೆ ಉಳ್ಳಾಯ ಎಂದು ಕರೆಯುವುದು ವಾಡಿಕೆಯಾದರೂ ಊರಿನಿಂದ ಊರಿಗೆ ಈ ಶಕ್ತಿಯ ಹೆಸರು ಬದಲಾಗಿರುವುದನ್ನು ಕಾಣಬಹುದು ಕಣಂದೂರಿನಲ್ಲಿ ತೋಡಕುಕ್ಕಿನಾರ್, ಮಾಣಿಯಲ್ಲಿ ಗುಡ್ಡಜಂಡಿ, ಶಿಬರೂರಿನಲ್ಲಿ ಕೊಡಮಣಿತ್ತಾಯ, ಪಾಣಾಜೆಯಲಿ ಜಠಾಧಾರಿ, ಉದ್ಯಾವರದಲ್ಲಿ ಅಣ್ಣದೈವ, ಕಾಂಪ್ರಬೈಲ್‌ನಲ್ಲಿ ಅಜ್ಜೆರ್ ದೈವ, ಮೋರ್ಲದಲ್ಲಿ ಮಿತ್ತಮೊಗರಾಯ ಹೀಗೆ ಹೆಸರುಗಳು ಕಾಣಸಿಗುತ್ತವೆ. ಈ ದೈವಗಳಿಗೆ ವಾರ್ಷಿಕವಾಗಿ ನೇಮ, ಮತ್ತು ತಂಬಿಲ ಹೆಸರಿನ ಎರಡು ಪರ್ವಗಳನ್ನು ಸಲ್ಲಿಸುತ್ತಾರೆ. ಪ್ರತೀ ತಿಂಗಳ ಸಂಕ್ರಮಣ ದಿನದಂದು ಈ

ದೈವಾರಾಧನೆಯ ಕೇಂದ್ರ ಮತ್ತು ಪರಿಕರಗಳನ್ನು ಸ್ವಚ್ಛ ಮಾಡಿ ಪರ್ವ ಕೊಡುವುದು ನಡೆಯುತ್ತದೆ.

### 2.2.3 ಕುಲೆ/ಪಿತೃ ಆರಾಧನೆ

ತುಳುನಾಡಿನಲ್ಲಿ ಮಡಿದು ಹೋದ ಹಿರಿಯರ ಆತ್ಮಗಳಿಗೆ ಸದ್ಗತಿ ಕೋರುವ ಮತ್ತು ಅವುಗಳನ್ನು ಮೆಚ್ಚಿಸಲು ಆರಾಧನೆ ಮಾಡಿ ಅವುಗಳಿಂದ ಆಶೀರ್ವಾದ ಕೇಳುವ ಕ್ರಮವೂ ಆರಾಧನ ವಿಧಾನವಾಗಿ ಕಂಡುಬರುತ್ತದೆ. ಸತ್ತು ಹೋದವರ ಆತ್ಮಗಳು ಜೀವಂತವಾಗಿರುತ್ತವೆ ಎನ್ನುವ ನಂಬಿಕೆ ಇರುವ ತುಳುವರು, ಮರಣಹೊಂದಿದ ದಿನದಿಂದ 16ನೇ ದಿನಕ್ಕೆ ಒಳಗೆ ಕರೆಯುವುದು ಎನ್ನುವ ಸಂಪ್ರದಾಯದ ಮೂಲಕ ಸತ್ತು ಹೋದ ಹಿರಿಯರ ಆತ್ಮಗಳ ಜತೆ ವಿಲೀನಗೊಳಿಸುವ ಆರಾಧನೆ ನಡೆಸುತ್ತಾರೆ. ತಾವು ದಿನನಿತ್ಯ ಊಟ ಮಾಡುವ ಮೊದಲು ಪಿತೃಗಳಿಗೆ ಎಂದು ಬಾಳೆಎಲೆಯಲ್ಲಿ ಆಹಾರ ಬಡಿಸಿ ಮನೆಯ ಎತ್ತರದ ಮೂಲೆಯೊಂದರಲ್ಲಿ ಇಲ್ಲವೆ ಅದಕ್ಕೆಂದೇ ಮಾಡಿರುವ ಮರದ ಸಣ್ಣ ಮಂಚದ ಮೇಲೆ ಬಡಿಸುತ್ತಾರೆ. ಕೆಲವು ವಿಶೇಷ ದಿನಗಳಂದು ಈ ಸಂಪ್ರದಾಯ ಮಾಡುತ್ತಾರೆ. ಆಷಾಢ ತಿಂಗಳು ಇಲ್ಲವೆ ಆಟಿ ತಿಂಗಳಿನಲ್ಲಿ ಪಿತೃಗಳಿಗೆ ಅಗೆಲು ಬಳಸುವುದು ಎಂದು ಕರೆಯುವ ಆರಾಧನೆಯಲ್ಲಿ ಕೋಳಿ, ಮೀನಿನ ಪದಾರ್ಥ ಇರುವ ಊಟ ಮಾಡಿ ಪಿತೃಗಳಿಗೆ ಅರ್ಪಿಸುವ ಆಚರಣೆ ಮಾಡುತ್ತಾರೆ. ಆಟಿ ತಿಂಗಳನ್ನು ಪಿತೃಗಳ ತಿಂಗಳು ಎಂದೇ ಗುರುತಿಸುತ್ತಾರೆ. ಇದನ್ನು ಕುಲೆಕ್ ಬಳಸುನೆ ಎಂದೂ ಕರೆಯುತ್ತಾರೆ. ಮದುವೆ, ತೊಟ್ಟಿಲು ಕಟ್ಟುವುದು, ಸೀಮಂತ, ಮುಂತಾದ ಶುಭ ಕಾರ್ಯಗಳನ್ನು ಆರಂಭಿಸುವ ಮುನ್ನ ಹಬ್ಬ ಉತ್ಸವಗಳಂದು ಗತಿಸಿದ ಹಿರಿಯರಿಗೆ ಗೌರವ ಸಲ್ಲಿಸುವ ಸಂಪ್ರದಾಯ ಕಂಡು ಬರುತ್ತದೆ.

### 2.2.4 ಕೃಷಿ ಸಂಬಂಧಿ ಆಚರಣೆಗಳು

ಕೃಷಿ ಸಂಬಂಧಿತ ಆಚರಣೆಗಳಲ್ಲಿ ಕೆಡ್ಡಸ, ಬಿಸು, ಪುದ್ವಾರ್, ಪರ್ಬ ಮುಂತಾದ ಆಚರಣೆಗಳು ಕಾಲಾವರ್ತನದ ಆಚರಣೆಗಳಾಗಿರುತ್ತದೆ.

#### 2.2.4.1 ಕೆಡ್ಡಸ

ಕೆಡ್ಡಸವನ್ನು ಭೂಮಿ ದೇವಿ ಸ್ನಾನ ಮಾಡುವ ಹಬ್ಬ ಎಂದು ತುಳುವರು ಆಚರಿಸುತ್ತಾರೆ. ಋತುಮತಿಯಾದ ಹೆಣ್ಣನ್ನು ಮಡಿಯಾಗಿಸುವ ಕ್ರಿಯಾಚರಣೆ. ಹೆಣ್ಣು ಮಗಳಿಗೆ ತಿಂಗಳ ಬಿಡುವು ಇರುವ ರೀತಿಯಲ್ಲಿ ಭೂಮಿತಾಯಿಯೂ ವರ್ಷಕ್ಕೆ ಒಂದು ಸಲ ಸೂತಕವನ್ನು ಮುಗಿಸಿ ಸ್ನಾನ ಮಾಡುತ್ತಾಳೆ ಎಂಬ ನಂಬಿಕೆ ಅವರದ್ದು. ಭೂಮಿಯನ್ನು ಹೆಣ್ಣಿನ ನೆಲೆಯಲ್ಲಿ ಆರಾಧಿಸುವ ದಿನ ಕೆಡ್ಡಸ. ತುಳುವರು ಕೆಡ್ಡಸವನ್ನೂ ವರ್ಷಾವರ್ತನದ ಮೊದಲ ಹಬ್ಬಾಚರಣೆಯಾಗಿ ಆಚರಿಸುತ್ತಾರೆ.

ಕೆಡ್ಡಸವನ್ನು ಮಹಿಳೆಯರು ಭೂಮಿದೇವಿಗೆ ಎಣ್ಣೆ ಎರೆಯುವ ದಿನವನ್ನಾಗಿ ಆಚರಿಸುತ್ತಾರೆ. ಪುರುಷರು ಬೇಟೆಯ ದಿನವನ್ನಾಗಿ ಆಚರಿಸುತ್ತಾರೆ. ಕೃಷಿಗೆ ಹಾವಳಿ ಮಾಡುವ ಕಾಡುಪ್ರಾಣಿಗಳನ್ನು ಬೇಟೆಯಾಡುವ ಮೂಲಕ ಅವುಗಳ ಉಪಟಳ ಕಡಿಮೆ ಮಾಡುವುದು ಒಂದೆಡೆಯಾದರೆ ಊರಿನವರೊಂದಿಗೆ ಬೇಟೆಯಾಡಿದ ಮಾಂಸವನ್ನು ಹಂಚಿಕೊಂಡು ಅವುಗಳನ್ನು ಅಡುಗೆ ಮಾಡಿ ಮಾಂಸದೂಟ ಮಾಡುವುದು ಮತ್ತು ಆ ಮೂಲಕ ಊರಿಡೀ ಸಂಭ್ರಮ ಆಚರಿಸುವುದು. ಬೇಟೆಯಾಡುವುದು ಧೈರ್ಯ ಶೌರ್ಯದ ಪ್ರತೀಕವನ್ನಾಗಿಯೂ ಜನ ಸ್ವೀಕರಿಸುತ್ತಿದ್ದರು. ಬೆಳಿಗ್ಗೆ ಮಹಿಳೆಯರು ಶುಚಿರ್ಭೂತರಾಗಿ ಮನೆಯಂಗಳದಲ್ಲಿನ ತುಳುಸಿಕಟ್ಟೆಯ ಬುಡದಲ್ಲಿ ದೀಪ ಹಚ್ಚಿ ಬಾಳೆ ಎಲೆಯಲ್ಲಿ ವಿಶೇಷವಾಗಿ ತಯಾರಿಸಿದ ತಿಂಡಿಯನ್ನಿಟ್ಟು ಭೂಮಿಗೆ ಎಣ್ಣೆ ಸುರಿಯುವ ಸಂಪ್ರದಾಯವನ್ನು ಮಾಡುತ್ತಾರೆ. ಮೂಲತ: ಮಾಂಸಾಹಾರಿಗಳಾಗಿ ಗುರುತಿಸಿಕೊಂಡಿದ್ದ ತುಳುನಾಡಿನ ಕೃಷಿಕರು ಕಾಡಿನ ನಿಕಟ ಸಂಪರ್ಕ ಇದ್ದವರೂ ಹೌದು. ಪಶ್ಚಿಮ ಘಟ್ಟ ಸಾಲಿನ ದಟ್ಟ ಕಾಡುಗಳು ಇವರಿಗೆ ತಮ್ಮ ಬೇಟೆಗಾರಿಕೆಗೆ ಅನುವು ಮಾಡಿಕೊಟ್ಟಿತ್ತು. ಈ ಆಚರಣೆಯೇ ಕೆಡ್ಡಸ, ನಡುಕೆಡ್ಡಸ, ಕೆಡ್ಡಸ ಎಂದು ಮೂರು ದಿನ ಆಚರಿಸುತ್ತಾರೆ. ಬೇಟೆಗೆ ತೆರಳಿ ಕಾಡಿನ ಮೊಲ,ಕಾಡುಹಂದಿ, ಮುಳ್ಳು ಹಂದಿ, ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು. ಈ ಬೇಟೆಯ ಪ್ರಾಣಿಗಳ ಮಾಂಸವನ್ನು ಊರಿಡೀ ಹಂಚಿ ಮಾಂಸದ ಊಟ ಮಾಡುವುದು ಕೆಡ್ಡಸದ ವಿಶೇಷತೆ. ಇದೀಗ ಕಾನೂನು ಬೇಟೆಯನ್ನು ನಿಷೇಧಿಸಿರುವುದರಿಂದ ಈ ಆಚರಣೆ ಚಾಲ್ತಿಯಲ್ಲಿಲ್ಲ.

### 2.2.4.2 ಬಿಸು

ಇದು ತುಳುನಾಡಿನ ಎಲ್ಲಾ ಅವೈದಿಕ ಸಮುದಾಯಗಳವರಿಗೆ ಹೊಸ ವರ್ಷಾರಂಭದ ದಿನವಾಗಿದೆ. ಬಿಸು ಹಬ್ಬದಂದು ಬಿಸುಕಣಿ ಇಡುತ್ತಾರೆ. ದೈವಾರಾಧನೆ ಚಾವಡಿಯ ಉಜ್ಜಾಲ್‌ನಲ್ಲಿ ಹೊಸದಾಗಿ ಬೆಳೆದಿರುವ ಒಂದೊಂದು ತರಕಾರಿಗಳನ್ನು ಇಡಲಾಗುತ್ತದೆ. ಅದರಲ್ಲಿ ಅಲಸಂಡೆ, ಬೆಂಡೆ, ಮುಳ್ಳು ಸೌತೆ, ಕೆಂಪು ಕುಂಬಲ ಕಾಯಿಗಳು ಜಾಗಪಡೆಯುತ್ತವೆ. ಇದಕ್ಕೆ ಬಿಸುಕಣಿ ಇಡುವುದು ಎನ್ನುತ್ತಾರೆ. ದೈವಾರಾಧನೆ ನಡೆಯುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ದೈವಾರಾಧನೆಯ ಕಟ್ಟಡಕ್ಕೆ ಚಾವಡಿ ಎಂದು ಅದರಲ್ಲಿ ತೂಗು ಹಾಕಿರುವ ಉಯ್ಯಾಲೆಯನ್ನು ಉಜ್ಜಾಲ್ ಎಂದು ಕರೆಯುತ್ತಾರೆ. ಈ ಉಜ್ಜಾಲ್‌ನಲ್ಲಿ ಆರಾಧನಾ ದೈವದ ಮುಗಮೂರ್ತಿ ಮತ್ತು ಸಾಂಕೇತಿಕ ಆಯುಧಗಳಾದ ಕತ್ತಿ, ತ್ರಿಶೂಲ, ಬೆತ್ತ, ಚಾಮರ, ಕೈಗಂಟೆ, ಕೂಚಿ ತಂಬಿಗೆಗಳನ್ನು ಇಟ್ಟಿರುತ್ತಾರೆ. ಆರಾಧನಾ ಶಕ್ತಿಗಳ ಸಾಂಕೇತಿಕ ಲೋಹದ, ಮರದ ಮುಖಮುದ್ರೆಗಳನ್ನು ಇಟ್ಟಿರುತ್ತಾರೆ. ಕೆಲವೆಡೆ ಖಾಲಿ ಉಜ್ಜಾಲ್ ಇರುತ್ತದೆ. ಇದರಲ್ಲಿ ಬಂದು ದೈವಗಳು ಕುಳಿತುಕೊಳ್ಳುತ್ತವೆ ಎಂಬುದು ತುಳುಜನಪದರ ನಂಬಿಕೆ. ಬಿಸು ದಿನದಂದು ವಾರ್ಷಿಕ ಗೇಣಿ ಅವಧಿ ಮುಕ್ತಾಯವಾಗುತ್ತದೆ. ಆ ದಿನದಿಂದ ಮರುವರ್ಷಕ್ಕೆ

ಮತ್ತೆ ಹೊಲ ತೋಟ, ಗುಡ್ಡೆಗಳನ್ನು ಮತ್ತೆ ಗೇಣಿಗೆ ಪಡೆಯುವ ಬಾಯ್ದರೆ ಕರಾರು ನಡೆಯುತ್ತದೆ. ಈ ಗೇಣಿದಾರರು ಬಿಸು ದಿನದಂದು ತಮ್ಮ ವಾರ್ಷಿಕ ಗೇಣಿಯನ್ನು ಜಾಗದ ಮಾಲಕನಿಗೆ ತಲುಪಿಸಿ ಅಂದು ಜಾಗದ ಮಾಲೀಕನ ಮನೆಯಲ್ಲಿ ಹಬ್ಬದ ಊಟ ಮಾಡಿ ಹೋಗುವ ಪದ್ಧತಿ ಇತ್ತು. ಹೊಸವರ್ಷಾಚರಣೆಯ ಮಧ್ಯಾಹ್ನದೂಟಕ್ಕೆ ತರಕಾರಿ ಪಲ್ಯ ಖಾದ್ಯಗಳ ಜತೆಗೆ ಒಣ ಮೀನು ಕಡ್ಲೆ ಗೇರುಬೀಜ ಪಲ್ಯಗಳಿಗೆ ಆದ್ಯತೆ  ನೀಡುತ್ತಾರೆ. ಉಳುವವನೇ ಹೊಲದೊಡೆಯ ಕಾನೂನು ಬಂದು ಗೇಣಿದಾರನೇ ಜಾಗದ ವಾರಸುದಾರನಾಗಿ ಬದಲಾವಣೆಗೊಂಡ ನಂತರ ಈ ಪದ್ಧತಿ ನಿಂತರೂ ಊರವರು ಬಂದು  ದೈವದ ಚಾವಡಿಯಲ್ಲಿ ಪ್ರಾರ್ಥನೆ ಸಲ್ಲಿಸುವ ಸಂಪ್ರದಾಯ ಮುಂದುವರಿದಿದೆ.

### 2.2.4.3 ಇಲ್ಲ್ ದಿಂಜವುನೆ

ಮನೆ ತುಂಬಿಸಿಕೊಳ್ಳುವುದು ಕೃಷಿಕರ ಪಾಲಿಗೆ ಒಂದು ಮುಖ್ಯ ಆಚರಣೆಯಾಗಿದೆ. ಈ ಆಚರಣೆ ಗದ್ದೆಯಲ್ಲಿ ಬೆಳೆದ ಬೆಳೆಯನ್ನು ಮನೆಗೆ ತರುವುದಕ್ಕೆ ಮೊದಲು ನಡೆಸುವ ಆಚರಣೆ.  ಭತ್ತದ ತೆನೆಯನ್ನು ತಂದು  ದೈವದ ಚಾವಡಿಯ ಎದುರು ಇಡುತ್ತಾರೆ. ಅಲ್ಲಿಂದ ಊರಿನ ಎಲ್ಲರೂ ಸಾಂಕೇತಿಕವಾಗಿ ತೆನೆಗಳನ್ನು ತಮ್ಮ ಮನೆಗಳಿಗೆ ಕೊಂಡು ಹೋಗಿ ತುಳಸಿಕಟ್ಟೆಯ ಎದುರು ತಾವು ತಮ್ಮ ತಮ್ಮ ಗದ್ದೆಯಿಂದ ತಂದಿರುವ ತೆನೆಗಳ ನಡುವೆ ಇಟ್ಟು ದೀಪ ಬೆಳಗಿಸಿ ಕೈಮುಗಿದು ನಂತರ ಈ ತೆನೆಗಳನ್ನು  ಇಟ್ಟೆವು ಎಲೆಗಳಲ್ಲಿ ಸುತ್ತಿ ದಡ್ಡಲ್ ಮರದ ತೊಗಟೆಯ ಹಗ್ಗದಿಂದ ಸಣ್ಣ ಸಣ್ಣ ಕಟ್ಟುಗಳನ್ನಾಗಿ ಮಾಡುತ್ತಾರೆ. ಮತ್ತು ಅವುಗಳನ್ನು ಮನೆಯ ಕಿಟಕಿ ಬಾಗಿಲುಗಳಿಗೆ ಕಟ್ಟುತ್ತಾರೆ. ಹಾಗೆಯೇ ಚಾವಡಿ ಮನೆಯ ಎದುರು ಇರುವ ಹಾಲುಬರುವ  ಮರ, ತೆಂಗಿನ ಮರಗಳಿಗು ಕಟ್ಟುತ್ತಾರೆ. ಕೊಡಗಿನಲ್ಲಿ ಈ ಆಚರಣೆಗೆ ಹುತ್ತರಿ ಎಂದು ಕರೆಯುತ್ತಾರೆ. ಅಲ್ಲಿ ತೆನೆಯನ್ನು ಸುತ್ತಲು ಮಾವಿನ ಇಲ್ಲವೆ ಅರಳಿ ಎಲೆಯನ್ನು ಬಳಸುತ್ತಾರೆ.

### 2.2.4.4 ಪುದ್ವಾರ್

ಹೊಸ ಅಕ್ಕಿ ಊಟ ಅಥವಾ ಪುದ್ವಾರ್ ಎಂದು ಕರೆಯುವ ಈ ಹಬ್ಬಕ್ಕೆ ತಾವು ಬೆಳೆದ ಏಣಿಲು ಬೆಳೆಯ ಹೊಸ ಅಕ್ಕಿಯ ಊಟಕ್ಕೆ ನೆಂಟರು ನೆರೆಕರೆಯವರನ್ನು ಕರೆದು ಮಧ್ಯಾಹ್ನಕ್ಕೆ ಪಾಯಸದೂಟ ಬಡಿಸುತ್ತಾರೆ. ಈ ಊಟಕ್ಕೆ ಹತ್ತು ಹಲವಾರು ತರಕಾರಿಗಳ ಪಲ್ಯ ಪದಾರ್ಥಗಳನ್ನು ಮಾಡಿರುತ್ತಾರೆ. ಈ ಸಮಯದಲ್ಲಿ ಮಳೆಗಾಲ ಇದ್ದರೂ ಬಿರುಸಿನ ಮಳೆಯ ಆರ್ಭಟ ಸ್ವಲ್ಪ ಕಡಿಮೆಯಾಗಿರುತ್ತದೆ. ಮನೆಯಂಗಳ ಹಿತ್ತಲುಗಳಲ್ಲಿ ಮುಳ್ಳು ಸೌತೆ, ಬೆಂಡೆ, ಅಲಸಂಡೆ, ಕೆಸು, ಮುಂತಾದ ತರಕಾರಿಗಳು ಹೇರಳವಾಗಿ ಬೆಳೆದಿರುತ್ತದೆ. ಇವುಗಳನ್ನು ಬಳಸಿಕೊಂಡು ಮಧ್ಯಾಹ್ನಕ್ಕೆ ಭರ್ಜರಿ ತರಕಾರಿ ಊಟವಾದರೆ ರಾತ್ರಿಗೆ ಮೀನು ಮಾಂಸದೂಟ ಮಾಡುತ್ತಾರೆ. ಮಾಂಸದೂಟಕ್ಕೆ

ಮದು ಪುದ್ವಾರ್ ಎಂದು ಕರೆಯುತ್ತಾರೆ. ಕೆಲವೆಡೆ ಈ ಆಚರಣೆಯನ್ನು ಪೂಕರೆ ಉತ್ಸವದ ಜತೆಗೆ ಆಚರಿಸುವುದರಿಂದ ಈ ಸಮಯ ವಿಳಂಬವಾಗಿ ಬಿಡುತ್ತದೆ. ಈ ಕಾರಣದಿಂದ ಪೂಕರೆ ಉತ್ಸವದ ಜತೆಯಾಗಿ ನಡೆಯುವ ಪುದ್ವಾರ್ ಊಟ ನವೆಂಬರ್, ಡಿಸೆಂಬರ್, ಜನವರಿತನಕದ ಕಾಲಗಳಲ್ಲಿ ನಡೆಯುತ್ತದೆ.

### 2.2.4.5 ಪರ್ಬ /ದೀಪಾವಳಿ

ತುಳುವರಿಗೆ ದೀಪಾವಳಿ ಸಂಭ್ರಮದ ಹಬ್ಬ. ತುಳುವರು ಬಲಿ ಚಕ್ರವರ್ತಿಯನ್ನು ಕೃಷಿಕ ದೊರೆ ಎಂದು ನಂಬುತ್ತಾರೆ. ಪರಊರಿನಿಂದ ಬಂದ ಬ್ರಾಹ್ಮಣ ಮಾಣಿಗೆ ಕೊಟ್ಟ ಮಾತು ಉಳಿಸಿಕೊಳ್ಳುವುದಕ್ಕೆ ದಾನ ನೀಡಿದ ಫಲವಾಗಿ ತನ್ನ ರಾಜ್ಯವನ್ನು ಕಳೆದುಕೊಂಡ ಕಥೆಯ ಆಧಾರದ ಮೇಲೆ ಈ ಆಚರಣೆ ನಡೆಯುವುದಾದರೂ ಈ ಆಚರಣೆಯಲ್ಲಿ ಕೃಷಿ ಸಮೃದ್ಧಿಗೆ ಇಂಬು ನೀಡುವ ಆಚರಣೆ ಕಂಡುಬರುತ್ತದೆ. ದೀಪಾವಳಿ ದಿನದಂದು ಕೃಷಿಕರ ಕೃಷಿಯನ್ನು ನೋಡಲು ಆತ ಬರುತ್ತಾನೆ ಎಂಬ ನಂಬಿಕೆ ಅವರದ್ದು. ಈ ಕಾರಣದಿಂದ ದೀಪಾವಳಿಯಲ್ಲಿ ಬಲಿಪಾಡ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ.

ದೀಪಾವಳಿ ಇಲ್ಲವೆ ಪರ್ಬ ಅಂದರೆ ಸುಡುಮದ್ದುಗಳ ಹಬ್ಬವೆಂದೇ ಖ್ಯಾತಿ. ಮೊದಲ ದಿನ ನರಕ ಚತುರ್ದಶಿಯ ಮುಂಜಾವು ಮೈಕೈಗೆ ಎಣ್ಣೆ ಹಾಕಿ ಬಿಸಿ ನೀರು ಸ್ನಾನ ಮಾಡಿ ನಂತರ  ಬೆಲ್ಲ ಕಲಸಿದ ಸಿಹಿ ಅವಲಕ್ಕಿ ತಿನ್ನುತ್ತಾರೆ. ಬಿಸಿನೀರು ಮಾಡಲೂ ತಾಮ್ರದ ಹಂಡೆಗಳಲ್ಲಿ ರಾತ್ರಿಯೇ ನೀರು ತುಂಬಿಸಿ ಈ ಹಂಡೆಗೂ ಹೂ ಅಲಂಕಾರ ಮಾಡಿರುತ್ತಾರೆ. ಈದಿನವನ್ನು ಕೊಡಿಪರ್ಬ ಎನ್ನುತ್ತಾರೆ. ಇದಕ್ಕೆ ಮೀಪುನ ಪರ್ಬ ಎಂದೂ ಕರೆಯುತ್ತಾರೆ.

ಎರಡನೇ ದಿನದ ಆಚರಣೆಯನ್ನು ನಡುಪರ್ಬ ಇಲ್ಲವೆ ದೀಪಾವಳಿ ಅಮವಾಸ್ಯೆ ಎಂದು ಆಚರಿಸುತ್ತಾರೆ. ಗುರು ಹಿರಿಯರಿಗೆಂದು ಮಾಂಸಾಹಾರದ ಊಟ ತಯಾರಿಸಿ ಅದರೊಂದಿಗೆ ಮದ್ಯ ಇಟ್ಟು ಬಾಳೆ ಎಲೆಯಲ್ಲಿ ಬಡಿಸಿ ದೀಪ ಹಚ್ಚಿ ಒಂದು ಕೋಣೆಯಲ್ಲಿ ಇಟ್ಟು ಬಾಗಿಲು ಹಾಕಿಕೊಳ್ಳುತ್ತಾರೆ. ಸ್ವಲ್ಪ ಸಮಯದ ನಂತರ ಕೋಣೆಯ ಬಾಗಿಲು ತೆಗೆದು ಪಿತೃಗಳು ಊಟ ಮಾಡಿ ಹೋದರು ಎಂದು ಭಾವಿಸುತ್ತಾರೆ. ತರುವಾಯ ಸಾಮೂಹಿಕ ಭೋಜನ ಮಾಡುತ್ತಾರೆ.

ಬಲಿಪಾಡ್ಯದ ಮೂರನೇ ದಿನವನ್ನು ಬಲಿಪಾಡ್ಯವೆಂದು ಆಚರಿಸುತ್ತಾರೆ. ಈ ದಿನ ಪಾಡ್ಯ ಆಚರಿಸುವುದರೊಂದಿಗೆ ಗೋವು ಪೂಜೆಯನ್ನು ನಡೆಸಲಾಗುತ್ತದೆ. ಕೃಷಿಗೆ ಅಗತ್ಯವಾಗಿ ಸಾಕುವ ಎತ್ತುಗಳು ಮತ್ತು ಹಾಲು ಕರೆಯಲು ಸಾಕುವ ದನಕರುಗಳಿಗೆ ಪೂಜೆ ಮಾಡುತ್ತಾರೆ. ಮೊದಲಾಗಿ ದನಕರುಗಳನ್ನು ತೊಳೆದು ಅವುಗಳಿಗೆ ಹೂವಿನ ಹಾರ ಹಾಕಿ ಅವುಗಳ ಹಣೆಗೆ ಕುಂಕುಮ ಇಟ್ಟು ಆರತಿ ಬೆಳಗಿ ನಂತರ ಅಕ್ಕಿಯಿಂದ ಮಾಡಿದ ವಿವಿಧ ತಿಂಡಿಗಳನ್ನು ದನ – ಕರುಎತ್ತುಗಳಿಗೆ ತಿನ್ನಿಸುತ್ತಾರೆ.  ರಾತ್ರಿ ಗದ್ದೆಗಳಿಗೆ ಪಾಲೆಮರ, ಬಾಳೆಯ ದಿಂಡು ಇಲ್ಲವೆ ಹೊಂಗಾರೆ ಮರಗಳಿಂದ ಅತೀ ಸಣ್ಣ ಪೂಕರೆ ಮಾದರಿಯ ರಚನೆ ಮಾಡಿ ಮರಪಾಡುನ

ಆಚರಣೆ ಮಾಡುತ್ತಾರೆ. ನಂತರ ಗದ್ದೆಗೆ ದೀಪ ಇಟ್ಟು ಗದ್ದೆಯಲ್ಲಿ ಅವಲಕ್ಕಿ, ತೆಂಗಿನ ಕಾಯಿ ಹೋಳು, ಎಲೆ ಅಡಿಕೆ, ಅರಿಶಿನ ಎಲೆಯ ಕಡುಬು, ಇಡ್ಲಿ ಮುಂತಾದ ಅಕ್ಕಿಯ ತಿಂಡಿಗಳನ್ನು ಇಟ್ಟು ಕೂ... ಬಲಿಕೊಟ್ರು, ಬಲಿತೆಗೊಂಡ್ರು, ಬಲಿಯಂದೇವ ತನ್ನ ಸಾಮಾಜ್ಯಕ್ಕೆ ತಾನೇ ಬಂದ್ರು. ಬಲ ಬಲ ಬಲಿಯೇಂದ್ರ ಕೂ.... ಕೂ... ಎಂದು ಕರೆಯುವ ಸಂಪ್ರದಾಯ ಇದೆ. ಇದಕ್ಕೆ ಬಲಿಯೇಂದ್ರ ಲೆಪ್ಪುನೆ ಎನ್ನುತ್ತಾರೆ. ದೀಪಾವಳಿಗೆ ಪಟಾಕಿ ಸಡಗರ ತುಂಬಾ ಹೆಚ್ಚು. ಪಟಾಕಿ ಶಬ್ದಕ್ಕೆ ಕಾಡಿನ ಪ್ರಾಣಿಗಳೂ ದೂರ ಸರಿಯಲಿ ಎನ್ನುವ ಆಶಯವೂ ಇದೆ.  ಇದು ಮಕ್ಕಳು ಹಿರಿಯರೆನ್ನದೆ ಪಟಾಕಿ ಸಿಡಿಸುವ ಹಬ್ಬ.

### 2.2.4.6 ಕಾವೇರಿ ಸಂಕ್ರಾಂತಿ

ತುಳುವಿನಲ್ಲಿ ಪಗ್ಗು, ಬೇಶ, ಕಾರ್ತೆಲ್ ಆಟಿ, ಸೋಣ, ನಿರ್ನಾಳ, ಬೊಂತೆಲ್, ಪೊಣಿ, ಮಾಯಿ, ಸುಗ್ಗಿ ಎಂಬುದಾಗಿ ತಿಂಗಳುಗಳನ್ನು ಗುರುತಿಸುತ್ತಾರೆ. ಪ್ರತಿಯೊಂದು ತುಳು ತಿಂಗಳ ಕೊನೆಯ ದಿನವನ್ನು ಸಂಕ್ರಾಂದಿ ಎಂಬುದಾಗಿ ಮತ್ತು ತಿಂಗಳ ಮೊದಲ ದಿನವನ್ನು ಸಿಂಗೊಡೆ ಎನ್ನುತ್ತಾರೆ.

ಪ್ರತಿ ಸಂಕ್ರಾಂತಿಯಂದು ದೈವಾರಾಧನೆ ಕೇಂದ್ರ ಚಾವಡಿಯನ್ನು ಶುಚಿಗೊಳಿಸಿ ಪರ್ವ ನೀಡುತ್ತಾರಾದರೂ ವರ್ಷಕ್ಕೊಮ್ಮೆ ಬರುವ ನಿರ್ನಾಳ ತಿಂಗಳಿನ ಸಂಕ್ರಾಂದಿಯನ್ನು ಮಾತ್ರ ಕಾವೇರಿ ಸಂಕ್ರಾಂತಿ ಎಂದು ಗೌಜಿಯಿಂದ ಆಚರಿಸುತ್ತಾರೆ. ಈ ದಿನದಂದು ಭತ್ತದ ಬೀಜದ ಮುಡಿಯನ್ನು ಅಟ್ಟಕ್ಕೆ ಹಾಕುವ ಸಂಪ್ರದಾಯ ಮಾಡುತ್ತಾರೆ. ಮುಸ್ಸಂಜೆ ಹೊತ್ತಿಗೆ ಭತ್ತದ ರಾಶಿಗೆ ಚೂರಿಮುಳ್ಳು ಬೊಳ್ಳುಕಲ್ಲು ಇಡುವ ಪದ್ಧತಿಯೂ ಇದೆ.ಇಲಿ ಹೆಗ್ಗಣ ಕಾಟ ಇಲ್ಲದೆ ಭತ್ತದ ಸಮೃದ್ಧಿಗೆ ಕೆಟ್ಟಕಣ್ಣು ಬೀಳದಿರಲಿ ಎನ್ನುವ ಆಶಯ ಇಲ್ಲಿದೆ. ಮನೆಯ ಮುಂದಿನ ತುಳಸಿಕಟ್ಟೆಯ ಎದುರು ಪೊಲಿ ಕೂಗುತ್ತಾರೆ. ಅಂದು ಬಸಳೆ ಪುಂಡಿ ಮಾಡುವುದು, ಅಕ್ಕಿಯ ದೋಸೆ ಮಾಡಿ ಮನೆಗೆ ಬಂದವರಿಗೆ ನೀಡುವ ಸಂಪ್ರದಾಯ ಮಾಡುತ್ತಾರೆ.

## 2.2.5 ವೈದಿಕ/ಪೌರಾಣಿಕ ಮೂಲ ಆಚರಣೆಗಳು

ತುಳುನಾಡಿನ ಮೂಲ ಕೃಷಿ ಹಬ್ಬಗಳ ಜತೆ ಬೆರೆತಿರುವ ಈ ಹಬ್ಬಗಳಲ್ಲದೆ ಇಲ್ಲಿನ ಜನ ಚೌತಿ, ನಾಗರಪಂಚಮಿ, ಸುಬ್ರಹ್ಮಣ್ಯ ಷಷ್ಠಿ, ಕೃಷ್ಣಾಷ್ಟಮಿ, ಮಹಾನವಮಿಗಳನ್ನೂ ಹಬ್ಬಗಳನ್ನಾಗಿ ಆಚರಿಸುತ್ತಾರೆ. ಇವು ಮೂಲ ಕೃಷಿ ಸಂಪ್ರದಾಯಕ್ಕಿಂತ ಭಿನ್ನವಾಗಿ ಕಂಡರೂ ಒಂದೊಮ್ಮೆ ಕೃಷಿ ಮೂಲವಾಗಿದ್ದಾಗ್ಯೂ ತರುವಾಯ ಪೌರಾಣಿಕ ಸಂಪ್ರದಾಯದ ಪ್ರಭಾವಕ್ಕೆ ಒಳಗಾದುವುಗಳಾಗಿವೆ.

### 2.2.5.1 ಚೌತಿ

ಚೌತಿ ಆಚರಣೆ ಎಂದಾಕ್ಷಣ ಗಣಪತಿಯ ಮೂರ್ತಿ, ಗಣಪತಿ ಬಪ್ಪ ಮೋರ್ಯಾ ಮುಂತಾದ ಆರಾಧನಾ ಕಲ್ಪನೆಗಳು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಆದರೆ ತುಳುನಾಡಿನ ಕೃಷಿಕರು ಚೌತಿ ದಿನ ತುಳಸಿಕಟ್ಟೆಯ ಸುತ್ತ ಕಬ್ಬಿನ ಜಲ್ಲೆಗಳನ್ನು ಕಟ್ಟಿ ಅದಕ್ಕೆ ಮಾವಿನಮರದ ಎಲೆಗಳಿಂದ ತಳಿರು ತೋರಣ ಕಟ್ಟಿ ಸಿಂಗರಿಸುತ್ತಾರೆ.

ತುಳಸಿಕಟ್ಟೆಯ ಬುಡದಲ್ಲಿ ದೀಪ ಬೆಳಗಿಸಿ ಬಾಳೆ ಎಲೆಯಲ್ಲಿ ಪೊರಿ, ಕಬ್ಬು, ಬೆಲ್ಲ, ತೆಂಗಿನಕಾಯಿಯ ಗಡಿಯೊಂದಿಗೆ ಉಪ್ಪು ಹಾಕದ ನೀರು ದೋಸೆ, ಚಪ್ಪೆ ಉಂಡುಲ್ಗ ಬಡಿಸುತ್ತಾರೆ.

### 2.2.5.2 ನಾಗರ ಪಂಚಮಿ

ನಾಗಾರಾಧನೆ ತುಳುನಾಡಿನ ಕೃಷಿ ಪದ್ಧತಿಯ ಅವಿಭಾಜ್ಯ ಅಂಗ. ತುಳುನಾಡಿನ ಪ್ರತಿ ಕಂಬಲ ಗದ್ದೆಯ ಪುಣಿಯಲ್ಲಿಯೂ ನಾಗಬನಗಳಿರುತ್ತವೆ. ದೈವಗಳಿಗೆ ವಾರ್ಷಿಕ ಪರ್ವ ನೀಡುವ ಸಂದರ್ಭ ನಾಗಾರಾಧನೆ ಮಾಡುತ್ತಾರೆ ಇತ್ತೀಚೆಗೆ ಪೌರಾಣಿಕ ಸಂಪ್ರದಾಯದ ಪ್ರಭಾವದಿಂದ ಸೋಣ ತಿಂಗಳಲ್ಲಿ ಬರುವ ಪಂಚಮಿಯಂದು ನಾಗನಿಗೆ ತನು ಎರೆಯುವ ಕಾರ್ಯ ನಡೆಯುತ್ತದೆ.

### 2.2.5.3 ಷಷ್ಠಿ

ಷಷ್ಠಿ ಇಲ್ಲವೆ ಸುಬ್ರಹ್ಮಣ್ಯ ಷಷ್ಠಿ ದೇಶದ ಎಲ್ಲಾ ಕಡೆ ಆಚರಿಸುವ ರೀತಿಯಲ್ಲಿ ತುಳುನಾಡಿನಲ್ಲಿಯೂ ಆಚರಿಸಲ್ಪಡುತ್ತದೆ. ಈ ದಿನದಂದು ಮಹಿಳೆಯುರ ವೃತಾಚರಣೆಯಲ್ಲಿರುತ್ತಾರೆ. ಒಂದೆಲಗ ಚಟ್ನಿ ಮತ್ತು ಬೆಳ್ತಕ್ಕಿ ಊಟ ನದಿ ತೋಡು ಇಲ್ಲವೆ ಕೆರೆಯ ಬದಿಯಲ್ಲಿ ಊಟ ತಯಾರಿಸಿ ಬಾಳೆಎಲೆಯಲ್ಲಿ ಊಟ ಮಾಡುತ್ತಾರೆ. ಕುಡುಪು, ಸುಬ್ರಹ್ಮಣ್ಯ, ಮಂಜೇಶ್ವರ, ಕೇಪು, ಸಜಿಪ, ಕಾರ್ಪಾಡಿ ಅಲ್ಲದೆ ಆಯಾಯ ಗ್ರಾಮದಲ್ಲಿ ಇರುವ ಇಲ್ಲವೆ ಹತ್ತಿರ ಇರುವ ಸುಬ್ರಹ್ಮಣ್ಯ ದೇಗುಲಗಳಿಗೆ ಭೇಟಿ ನೀಡಿ ವೃತಾಚರಣೆ ಪೂರ್ಣಗೊಳಿಸುತ್ತಾರೆ. ಷಷ್ಠಿ ವೃತಾಚರಣೆಯನ್ನು ಸಂತಾನ ಸಂಪತ್ತು ವೃದ್ಧಿ ಫಲಗಳಿಗಾಗಿ ಆಚರಿಸಲಾಗುತ್ತದೆ.

### 2.2.5.4 ಅಷ್ಟೆಮಿ

ಕೃಷ್ಣಾಷ್ಟಮಿಯ ದಿನ ತುಳುನಾಡಿನಲ್ಲಿ ಬಗೆಬಗೆಯ ಅಕ್ಕಿತಿಂಡಿಗಳನ್ನು ತಯಾರಿಸುತ್ತಾರೆ. ಅಕ್ಕಿಯ ಮೂಡೆ, ಮತ್ತು ಕೊಟ್ಟಿಗೆ (ಅಕ್ಕಿಯ ತಿಂಡಿ)ಗೆಗೆ ಈ ಸಂದರ್ಭದಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಮೊಸರು ಕುಡಿಕೆ ಉತ್ಸವದ ಹೆಸರಲ್ಲಿ ಆಟೋಟ ಸ್ಪರ್ಧೆ, ಜಾರುವ ಅಂಟುಗಳನ್ನು ಹಚ್ಚಿದ ಕಂಗಿನ ಮರಕ್ಕೆ ಹತ್ತಿ ಅಲ್ಲಿಕಟ್ಟಿರುವ ಬಾಳೆಗೊನೆ ಕೀಳುವ ಸ್ಪರ್ಧೆ, ಮೊಸರು ತುಂಬಿದ ಗಡಿಗೆಗಳನ್ನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಒಡೆಯುವುದು ಮುಂತಾದ ಸ್ಪರ್ಧೆಗಳನ್ನು ನಡೆಸುತ್ತಾರೆ.ಕೃಷ್ಣನ ಬಾಲಲೀಲೆಗಳನ್ನು ಈ ಆಚರಣೆಯ ಮೂಲಕ ಅನುಷ್ಠಾನಗೊಳಿಸುವ ಆಶಯ ವ್ಯಕ್ತವಾಗುತ್ತದೆ.

### 2.2.5.5 ಮಾರ್ನೇಮಿ/ ಮಹಾನವಮಿ/ ನವರಾತ್ರಿ ಆಚರಣೆ

ನವರಾತ್ರಿ ಇಲ್ಲವೆ ತುಳುವರು ಕರೆಯುವ ಮಾರ್ನೇಮಿಗೆ ಕೂಡಾ ತುಳುವರು ತಮ್ಮ ಹಬ್ಬ ಆರಾಧನೆಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ನೀಡುತ್ತಾರೆ. ಒಟ್ಟು ಒಂಭತ್ತು ದಿನ ನಡೆಯುವ ಹಬ್ಬದ ದಿನಗಳನ್ನು ಶುಭದಿನಗಳೆಂದು ನಂಬುತ್ತಾರೆ. ಅಮವಾಸ್ಯೆಯ

ರಾತ್ರಿ ಕೊಪ್ಪರಿಗೆ ದೀಪುನೆ ಎನ್ನುವ ಆಚರಣೆ ನಡೆಸುತ್ತಾರೆ. ಎಲ್ಲಾ ದೈವಸ್ಥಾನಗಳನ್ನು ಶುಚಿಗೊಳಿಸಿ ತಳಿರು ತೋರಣ ಕಟ್ಟಿ ರಾತ್ರಿಗೆ ದೀಪ ಬೆಳಗಿಸಿ ದೈವಗಳ ಪಾತ್ರಿಗಳ ಜೋಗ ಬರಿಸಿ ಮುಂಡ್ಯೆ, ಉಜ್ಜಾಲ್‌ಗೆ ಪೂಜೆ ಸಲ್ಲಿಸಿ ತಮ್ಮ ಗ್ರಾಮದೈವ, ಇಲ್ಲವೆ ಊರದೈವಕ್ಕೆ ಪೂಜೆ ಸಲ್ಲಿಸುತ್ತಾರೆ. ಕೊನೆಯ ದಿನವನ್ನು ಪವೊಂಜಿ ಎಂದು ಆಚರಿಸುತ್ತಾರೆ. ದೈವಕೇಂದ್ರದಲ್ಲಿ ಬಂದವರಿಗೆ ಒಂದೊಂದು ಪಾವು ಅಕ್ಕಿ ನೀಡುವ ಸಂಪ್ರದಾಯ ಇರುತ್ತದೆ. ಅಂದು ನವರಾತ್ರಿ ಆರಂಭದ ದಿನ ಏರ್ನ ಕೊಪ್ಪರಿಗೆ ಜಾಪುನ ಸಂಪ್ರದಾಯ ನಡೆಯುತ್ತದೆ.

## 2.3 ಕಂಬಲ ಗದ್ದೆಗಳು ಮತ್ತು ಅನನ್ಯತೆಗಳು

ಕಂಬುಲಗಳೆಂದು ಕರೆಯುವ ವಿಶಾಲವಾದ ಭತ್ತದ ಗದ್ದೆಗಳು ಪ್ರಾಕೃತಿಕ ಸೌಲಭ್ಯಗಳನ್ನು ಬಳಸಿಕೊಂಡು ನಿರ್ಮಿಸಿದುವುಗಳಾಗಿರುತ್ತವೆ. ಇವುಗಳು ಕೋಣಗಳ ಓಟಕ್ಕೂ ಅನುಕೂಲವಾಗಿರುವಂತವುಗಳಾಗಿವೆ. ಇವುಗಳು ಮಹತಿನಿಂದ ಗುರುತಿಸಿಕೊಳ್ಳುವುದಕ್ಕೆ ಯೋಗ್ಯವಾದ ಪರಿಸರವನ್ನೇ ಹೊಂದಿರುತ್ತವೆ. ಒಟ್ಟಾರೆ ಕಂಬುಲ ಗದ್ದೆಗಳ ಇರುವಿಕೆ ಆರಾಧನಾ ಭಾವ ಸಹಜವಾಗಿ ಅಂಕುರುವುದಕ್ಕೆ ಪೂರಕವಾಗಿರುತ್ತವೆ.

ಊರಿನ ಇತರ ಗದ್ದೆಗಳಿಗೆ ಹೋಲಿಸಿದರೆ ಕಂಬಳ ಗದ್ದೆ ಹೆಚ್ಚು ವಿಶಾಲವಾಗಿರುತ್ತದೆ. ಕೆಲವೊಂದು ಕಂಬಲಗದ್ದೆಗಳು ವೃತ್ತಾಕಾರದಲ್ಲಿ ಆಯತಾಕಾರದಲ್ಲಿ ಇಲ್ಲವೆ ಚೌಕಾಕಾರದಲ್ಲಿರುತ್ತದೆ. ಇದು ಸುಮಾರು ಐದು ಎಕ್ರೆಯಿಂದ ಹತ್ತು ಎಕ್ರೆಗೂ ಮೇಲ್ಪಟ್ಟು ವಿಸ್ತಾರವಾಗಿರುತ್ತದೆ. ಇವುಗಳನ್ನು ಅಜಲೆ ಹೆಸರಲ್ಲಿ ಲೆಕ್ಕ ಹಾಕಲಾಗುತ್ತದೆ. ನಾಲ್ಕು ಅಜಲೆ ಕಂಬುಲ, ಎಂಟು ಅಜಲೆ ಕಂಬಲ ಹೀಗೆ ಲೆಕ್ಕಹಾಕಲಾಗುತ್ತದೆ. ಒಂದು ಅಜಲೆ ಎಂದರೆ ನಾಲ್ಕು ಕಳಸಿಗೆ ಭತ್ತದ ಬೀಜ ಪಸರಿಸುವ ಪ್ರದೇಶವಾಗಿರುತ್ತದೆ. ಪೂಕರೆ ಕಂಬಳಗಳನ್ನು ಅಲ್ಲಿನ ಜನ ತಮ್ಮ ಊರಿನ ಸಮೃದ್ಧಿ ಮತ್ತು ಗೌರವದ ಸಂಕೇತಗಳಾಗಿ ಪರಿಗಣಿಸುತ್ತಾರೆ. ವಿಶಾಲವಾದ ಈ ಕಂಬುಲಗದ್ದೆಯ ಬದುಗಳು ಎತ್ತರ ಮತ್ತು ಅಗಲವಾಗಿರುತ್ತದೆ. ಬದುವಿನ ಮೇಲೆ ಸಾಲಾಗಿ ತೆಂಗಿನ ಮರಗಳನ್ನು ಸಮಾನಾಂತರದಲ್ಲಿ ಬೆಳೆಸಿರುವುದು ಕಂಡು ಬರುತ್ತದೆ.

ಸಾಮಾನ್ಯವಾಗಿ ಕಂಬಲಗದ್ದೆಯಲ್ಲಿ ಎತ್ತುಗಳು ಇಲ್ಲವೆ ಕೋಣಗಳು ಬಂದಿಳಿಯುವ ಪ್ರದೇಶದಲ್ಲಿ ತಗ್ಗು ಪ್ರದೇಶ ನಿರ್ಮಿಸಿರುತ್ತಾರೆ. ಈ ಪ್ರದೇಶದ ಬದು ಹೆಚ್ಚು ಎತ್ತರವಾಗಿರುವುದಿಲ್ಲ. ಅದು ಜನ ಹಾಗೂ ಎತ್ತು ಕೋಣಗಳು ಇಳಿಯಲು ಸುಲಭವಾಗಿರುವಂತೆ ರಚಿಸಿರುತ್ತಾರೆ. ಈ ರಚನೆಯನ್ನು 'ಮಂಜೊಟ್ಟಿ' ಎಂದು ಕರೆಯುತ್ತಾರೆ.

### 2.3.1 ಕಂಬುಲಗಳ ಹೆಸರು

ಕಂಬುಲಗಳು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತವೆ. ಮುಖ್ಯವಾಗಿ ದಂಡೆತ್ತಿಮಾರ್, ಅಗೋಲ್ತಿಮಾರ್ ಬಾಕಿಲ್ತಿಮಾರ್, ಕುಡೋಲ್ದಿಮಾರ್, ಕುರ್ಲೆತ್ತಿಮಾರ್, ದೇರೆಮಾರ್, ಏರಿಮಾರ್, ತಿಮಾರ್, ಮದಿಮೆಮಾರ್, ಗುಂಡೆತ್ತಿಮಾರ್, ಬೆಂಜಂತಿಮಾರ್. ಇಲ್ಲಿ ಮಾರ್ ಎನ್ನುವ ಶಬ್ದಪ್ರಯೋಗವನ್ನು ವಿಶಾಲ ಗದ್ದೆಗಳು

ಇಲ್ಲವೆ ಕಂಬುಲಗಳೆಂದು ಅರ್ಥೈಸಬಹುದಾಗಿದೆ. ಸ್ಥಳೀಯ ಭೌಗೋಳಿಕ ಸ್ಥಿತಿ ಮತ್ತು ಭೂಮಿಯ ಆಕಾರ, ಏರು-ಪೇರು ಮುಂತಾದ ವಿಚಾರಗಳ ಆಧಾರದ ಮೇಲೆ ತುಳುಭಾಷೆಯಡಿಯಲ್ಲಿ ಈ ಹೆಸರುಗಳು ಇರುವುದನ್ನು ಕಾಣಬಹುದು. ಕಂಬುಲ ಗದ್ದೆಗಳು ಒಂದು ಕಂಬುಲದಿಂದ ಕಂಬುಲಕ್ಕೆ ಮತ್ತು ಊರಿನಿಂದ ಊರಿಗೆ ವಿಸ್ತಾರದಲ್ಲಿ ವ್ಯತ್ಯಾಸಗೊಂಡಿರುತ್ತವೆ. ಕಂಬುಲಗದ್ದೆಗಳು ಅವುಗಳನ್ನು ನಿರ್ವಹಿಸಿಕೊಂಡು ಬಂದ ಹಿನ್ನೆಲೆಯಲ್ಲಿ ಮತ್ತು ಆಚರಣೆಯಲ್ಲಿ ವ್ಯತ್ಯಯದಲ್ಲಿ ಭಿನ್ನ ಭಿನ್ನ ನೆಲೆಯನ್ನು ಹೊಂದಿವೆ.

### 2.3.2 ಬಾರೆ ಕಂಬುಲ

ಸುಗ್ಗಿ ನೇಜಿ ನಾಟಿ ಮಾಡಿದ ಎಂಟು ದಿನಗಳ ಒಳಗೆ ಕಂಬಲ ಗದ್ದೆಯ ನಡುವಿನಲ್ಲಿ ಕದಳಿ ಬಾಳೆಗಿಡನೆಟ್ಟು ಅದಕ್ಕೆ ಸುತ್ತಲು ಆಧಾರವಾಗಿ ಕೋಲುಗಳನ್ನು ನೆಡುತ್ತಾರೆ. ಈ ಕಂಬುಲಗಳು ತುಳುನಾಡಿನ ಮೂಲನಿವಾಸಿಗಳಾದ ಮೇರರು, ಮುಂಡಾಲರು, ಬೈರಜನಾಂಗ, ಆದಿ ದ್ರಾವಿಡ ಮುಂತಾದ ಸಮುದಾಯದವರು ನೆರವೇರಿಸುತ್ತಾರೆ. ಬಾಳೆ ಕಂಬುಲಗಳು ಬಹುತೇಕ ಗುತ್ತು ಮನೆಯವರ, ಜಮೀನ್ದಾರಿ ಒಕ್ಕಲುಗಳ ಅಧೀನದಲ್ಲಿರುತ್ತಿದ್ದವು. ಈ ಬಾಳೆ ನೆಡುವ ಗದ್ದೆಗಳನ್ನು ಕೂಡಾ ದೈವದ ಗದ್ದೆಗಳೆಂದು ಪರಿಗಣಿಸಲಾಗುತ್ತದೆ. ಪೂಕರೆ ಗದ್ದೆಗಳಂತೆ ಈ ಗದ್ದೆಗಳಿಗೆ ಮುಟ್ಟಾದ ಹೆಂಗಸರು, ಸೂತಕದಲ್ಲಿರುವವರು ಇಳಿಯಬಾರದು ಎಂಬ ನಂಬಿಕೆ ಇದೆ.

### 2.3.3 ಅರಸು ಕಂಬಲ

ಈ ಕಂಬುಲಗಳಲ್ಲಿ ಕೆಲವನ್ನು ಅರಸು ಕಂಬಲಗಳೆಂದು ಕರೆಯಲಾಗುತ್ತದೆ. ತುಳುನಾಡಿನಲ್ಲಿ ಈಗಿನ ತಾಲೂಕು ವ್ಯಾಪ್ತಿಯ ವಿಸ್ತಾರ ಹೊಂದಿರುವ ಭೂ ಪ್ರದೇಶಗಳು ಸಾಮಾನ್ಯವಾಗಿ ಅರಸರು ಎಂದು ಕರೆಯಲ್ಪಡುವ ಪಾಳೇಗಾರರ ಆಡಳಿತಕ್ಕೊಳಪಡುತ್ತಿದ್ದವು. ಬ್ರಿಟಿಷ್ ಆಳ್ವಿಕೆ ಆರಂಭವಾದ ನಂತರವೂ ತುಳುನಾಡಿನಾದ್ಯಂತ ಉಳ್ಳಾಲ, ಬೆದ್ರ, ಬಾರ್ಕೂರ್, ಮೂಲ್ಕಿ, ಮಾಯಿಪಾಡಿ, ಪೆರ್ಮಳೆ, ಅರುವ, ಬಂಗಾಡಿ, ವಿಟ್ಲ, ಹೀಗೇ ಅನೇಕ ಅರಸು ಬಲ್ಲಾಳರ ಬೀಡುಗಳಿದ್ದವು. ಈ ಮನೆತನಗಳ ಸುಪರ್ದಿಯಲ್ಲಿದ್ದ ಕಂಬುಲಗಳನ್ನು ಅರಸು ಕಂಬುಲಗಳೆಂದು ಗುರುತಿಸಲಾಗಿದೆ. ಈ ಕಂಬುಲಗಳು ಸಾಮಾನ್ಯವಾಗಿ ಪೂಕರೆ ಕಂಬುಲಗಳಾಗಿಯೇ ಗುರುತಿಸಲ್ಪಡುತ್ತವೆ.

### 2.3.4 ಆಧುನಿಕ ಕಂಬಲ

ಪೂಕರೆ ಉತ್ಸವದ ದಿನ ಕುಶಾಲಿಗಾಗಿ ಉಳುಮೆಗೆ ಬಳಸುತ್ತಿದ್ದ ಕೋಣಗಳನ್ನು ಓಡಿಸುವ ಪದ್ಧತಿ ಇತ್ತು. ತುಳುನಾಡಿನ ಕೊಕ್ಕಡದ ಕೋರಿ ಜಾತ್ರೆಯಲ್ಲಿ ಈಗಲೂ ಈ ಬಗೆಯ ಕೋಣಗಳ ಓಟ ಸಂಕೇತವಾಗಿ ನಡೆಯುತ್ತದೆ. ಆರಂಭದಲ್ಲಿ-ಪೂಕರೆ ಆಚರಣೆಯ ಭಾಗವಾಗಿದ್ದ ಕೋಣಗಳ ಓಟ ವರ್ತಮಾನದಲ್ಲಿ ಸ್ಪರ್ಧೆಯಾಗಿ ವಿಕಸನಗೊಂಡಿದೆ. ಇವುಗಳೂ ಕಂಬುಲಗಳೇ ಆದರೂ ಇವುಗಳಿಗೆ ಪೂಕರೆ ಕಂಬುಲ ಅಥವ ಅರಸು ಕಂಬುಲಗಳಷ್ಟು ಮಹತ್ವ ಇಲ್ಲ.

# ಅಧ್ಯಾಯ–3
# ಪೂಕರೆ ಆಚರಣೆಯ ಭೌಗೋಳಿಕತೆ

3.1 ಬಂಟ್ವಾಳ

3.2 ಮಂಗಳೂರು

3.3 ಪುತ್ತೂರು

3.4 ಬೆಳ್ತಂಗಡಿ

3.5 ಪ್ರಾದೇಶಿಕ ಸಾದೃಶ್ಯ ಮತ್ತು ವೈದೃಶ್ಯ

# ಅಧ್ಯಾಯ–೩

# ಪೂಕರೆ ಆಚರಣೆಯ ಭೌಗೋಳಿಕತೆ

**ಕಂಬುಲ ಕೋರಿ ಆಚರಣೆಯ ಮೂಲ ಆಶಯ ಒಂದೇ ಆಗಿದ್ದರೂ ಆಚರಣಾ ವಿಧಿ ವಿಧಾನಗಳು ಒಂದು ತಾಲೂಕು ವ್ಯಾಪ್ತಿಯಿಂದ ಇನ್ನೊಂದು ತಾಲೂಕಿಗೆ ಭಿನ್ನವಾಗಿ ಗೋಚರಿಸುತ್ತದೆ. ಆಯಾ ಊರಿನ ಭೌಗೋಳಿಕ ಹಿನ್ನೆಲೆ, ಆಚರಣೆ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದವರ ದೂರದೃಷ್ಟಿ, ಪ್ರಸಕ್ತ ಆಚರಣೆ ಮಾಡುತ್ತಿರುವವರ ಚಿಂತನೆ, ಆಚರಣೆಗೆ ಪರಿಸರದಲ್ಲಿ ಸಿಗುವ ವಸ್ತುಗಳು, ಆರ್ಥಿಕ ವ್ಯವಸ್ಥೆ, ನಂಬಿಕೆಗಳು ಮುಂತಾದ ವಿಚಾರಗಳು ಒಟ್ಟು ಆಚರಣಾ ಪದ್ಧತಿ ಮೇಲೆ ಪರಿಣಾಮ ಬೀರಿರುವುದು ಕಂಡು ಬರುತ್ತದೆ.**

ಕಟ್ಟಳೆಯಾಗಿ, ಊರಿನಜಾತ್ರೆಯಾಗಿ, ನಾಗಾರಾಧನೆಯ ಪ್ರಮುಖ ಅಂಗವಾಗಿ, ದೈವಾರಾಧನೆಯೊಂದಿಗೆ ಸಮ್ಮಿಳಿತವಾಗಿ ಕಾಸರಗೋಡು ಜಿಲ್ಲೆಯ ಅರಿಬೈಲ್, ಅಡೆಕಳ ಸೇರಿದಂತೆ ಅವಿಭಜಿತ ತುಳುನಾಡಿನಾದ್ಯಂತ ಅಲ್ಲಲ್ಲಿ ಪೂಕರೆ ಆಚರಣೆ ನಡೆಯುತ್ತದೆ.

## ೩.೧ ಬಂಟ್ವಾಳ

ಅನಂತಾಡಿ, ಮಾಣಿ, ಅರೆಬೊಟ್ಟು, ಕಾಂಪ್ರಬೈಲ್, ನಡಿಬೈಲ್, ಮೋರ್ಲ, ಅಮ್ಮೆಳ ಕುದ್ಕೋಳಿ, ಮುಂತಾದೆಡೆ ಪೂಕರೆ ಆಚರಣೆ ನಡೆಯುತ್ತದೆ. ಬಂಟ್ವಾಳ ವ್ಯಾಪ್ತಿಯ ಈ ಆಚರಣೆ ನವೆಂಬರ್, ಡಿಸೆಂಬರ್ ಇಲ್ಲವೆ ಜನವರಿ ತಿಂಗಳ ಮೊದಲ ವಾರದಲ್ಲಿ ನಡೆಯುತ್ತದೆ.

ಆಚರಣೆಗೆ ಊರಿನ ಪ್ರಮುಖ ಗುತ್ತಿನ ಮನೆಗಳವರು ಊರಿನವರೊಂದಿಗೆ ಸೇರಿ ದೈವದ ಚಾವಡಿಯೆದುರು ಪ್ರಾರ್ಥನೆ ಮಾಡಿ ಕಂಬಲಕೋರಿ ಆಚರಣೆಗೆ ದಿನ ನಿಗದಿ ಮಾಡುತ್ತಾರೆ. ನಂತರ ಕೈಲು ಕಡಿಯುವ ಮಹೂರ್ತ ನಡೆಸುತ್ತಾರೆ. ಕದಳಿ ಬಾಳೆಯ ಗೊನೆಯೊಂದನ್ನು ಕಡಿದು ತಂದು ಚಾವಡಿಯಲ್ಲಿ ಕಟ್ಟುತ್ತಾರೆ. ಈ ದಿನದಿಂದ ಆರಂಭಿಸಿ ಪೂಕರೆ ಆಚರಣೆಯ ಕೆಲಸಗಳು ನಡೆಯುತ್ತವೆ. ಸಾಮಾನ್ಯವಾಗಿ ಕೈಲು ಕಡಿದಂದಿನಿಂದ ಪೂಕರೆ ಆಚರಣೆಗೆ ಎಂಟು ದಿನಗಳ ಗಡುವು ಇರುತ್ತದೆ.

ಕೈಲು ಕಡಿದ ತರುವಾಯ ಪೂಕರೆ ಆಚರಣೆಗೆ ಮೂರು ದಿನ ಇರುವಾಗ ಕೊರಗತನಿಯನಿಗೆ ಕಟ್ಟುವ ವ್ಯಕ್ತಿ ಕೊರಗತನಿಯನ ವೇಷಹಾಕಿ ಗಗ್ಗರ ಇಟ್ಟುಕೊಂಡು ಗುತ್ತಿನ ಮನೆಯವರಿಗೆ ವಿಚಾರ ತಿಳಿಸಿ ದೈವದ ಚಾವಡಿಯೆದುರು ಅನುಮತಿ ಪಡೆಯುತ್ತಾನೆ. ನಂತರ ಕೊರಗತನಿಯ ಊರಿನ ಎಲ್ಲಾ ಮನೆ ಮನೆಗೆ ಹೋಗಿ ಕಂಬಲಕೋರಿ ಆಚರಣೆಯ ಬಗ್ಗೆ ಸಂಪ್ರದಾಯಬದ್ದ ಕರೆನೀಡುತ್ತಾನೆ. ಪ್ರತೀ ಮನೆಯವರು ಅಕ್ಕಿ, ಭತ್ತ, ತೆಂಗಿನಕಾಯಿ ಮತ್ತು ಹಣ ನೀಡಿ ಆತನನ್ನು

ಕಳುಹಿಸಿಕೊಡುತ್ತಾರೆ. ಈತ ಈ ಪೂಕರೆ ಆಚರಣೆಗೆ ಕರೆಯುವ ಕಾರ್ಯವನ್ನು ಮರುದಿನವೂ ಮುಂದುವರಿಸುತ್ತಾನೆ.

ಇದೇ ಸಂದರ್ಭದಲ್ಲಿ ಕಂಬಲಗದ್ದೆಯ ಬದುಗಳನ್ನು ಸವರಿ ಸ್ವಚ್ಛಗೊಳಿಸುತ್ತಾರೆ. ಗದ್ದೆಯ ಬದುಗಳನ್ನು ಕೆಸರು ಮಣ್ಣಿನಿಂದ ಸವರಿ ಸುಂದರಗೊಳಿಸುತ್ತಾರೆ. ಇದಕ್ಕೆ ಪುಣಿ ಪೂಜುನೆ ಎಂದು ಕರೆಯುತ್ತಾರೆ. ಗದ್ದೆಯನ್ನು ಒರ್ಲ, ರಡ್ಡ್‌ಸಾಲ್, ಮೂಜಿಸಾಲ್ ಹೀಗೆ ಒಂದು ಎರಡು ಮೂರು ಸರ್ತಿ ಉತ್ತು ಹದ ಮಾಡಿಕೊಂಡಿರುತ್ತಾರೆ. ಈ ರೀತಿ ಕಂಬುಲವನ್ನು ಅಗತ್ಯದಂತೆ ಮೊದಲ ಹಂತದಲ್ಲಿ ಸಿದ್ಧಪಡಿಸಲಾಗುತ್ತದೆ.

ಕೈಲು ಕಡಿಯುತ್ತಿದ್ದಂತೆ ಊರವರು ಬಂದು ಸಂಜೆಯ ಹೊತ್ತಿಗೆ ದೈವದ ಚಾವಡಿಯೆದುರಿನ ಅಂಗಳಕ್ಕೆ ಚಪ್ಪರ ಹಾಕುತ್ತಾರೆ. ರಾತ್ರಿಗೆ ಒಟ್ಟಾಗಿ ಊಟ ಮಾಡುತ್ತಾರೆ. ಈ ಚಪ್ಪರದೊಂಪದಲ್ಲಿ ಊರಿನ ಪೂಕರೆ ಕೆಲಸ ಮಾಡುವ ಆಚಾರಿ ಮತ್ತು ಊರಿನ ಮಡಿವಾಳ ಪೂ ಸಿಂಗಾರ್ದನ ಎನ್ನುವ ವಿಶಿಷ್ಟ ಅಲಂಕಾರವನ್ನು ಮಾಡುತ್ತಾರೆ. ಇದನ್ನು ಕೊಡಿಯಡಿ ಎಂದೂ ಕರೆಯುತ್ತಾರೆ. ಪೂಕರೆ ಆಚರಣೆಯಂದು ತಮ್ಮ ಆರಾಧಿಸುವ ದೈವದ ಆರಾಧನಾಮುಖ, ಆಯುಧಗಳು ಮತ್ತು ಸಂಬಂಧಿತ ವಸ್ತುಗಳ ಭಂಡಾರ ಇಡಲು ಈ ವ್ಯವಸ್ಥೆ ಉಪಯೋಗವಾಗುತ್ತದೆ.

ಪೂಕರೆ ಆಚರಣೆಗೆ ಎರಡು ದಿನಗಳಿರುವಾಗ ಊರಿನ ಆಚಾರಿ ಕಂಬಲಗದ್ದೆಗೆ ಹತ್ತಿರ ಇರುವ ನಿರ್ದಿಷ್ಟ ಜಾಗದಲ್ಲಿ ಪೂಕರೆ ತಯಾರಿಸುವ ಕೆಲಸವನ್ನು ತನ್ನ ಸಹಾಯಕರ ನೆರವಿನಿಂದ ಮಾಡುತ್ತಿರುತ್ತಾನೆ.

ಕಂಬಳಕೋರಿ ಆಚರಣೆಯ ಹಿಂದಿನ ದಿನ ಪೂಕರೆ ಆಚರಿಸುವ ಕಂಬುಲದ ಬದುಗಳು ಮತ್ತು ಸುತ್ತಲೂ ಇರುವ ತೆಂಗಿನ ಮರಗಳಿಗೆ ಸೇಡಿ ಪೂಜುನೆ ಸಂಪ್ರದಾಯ ನಡೆಯುತ್ತದೆ. ಇದನ್ನು ಮೊಗೇರ ಸಮುದಾಯ ಮಾಡುತ್ತದೆ. ಪೂಕರೆ ಕಂಬುಲದಲ್ಲಿ ನೀರು ನಿಲ್ಲದಂತೆ ನೀರುಕಣಿ ಮಾಡಲಾಗುತ್ತದೆ. ಇದನ್ನು ವೃತ್ತಾಕಾರದ ರಂಧ್ರ ಇರುವ ಕಲ್ಲೊಂದಕ್ಕೆ ಹಗ್ಗ ಕಟ್ಟಿ ಎಳೆದು ನಿರ್ಮಿಸಲಾಗುತ್ತದೆ. ಇದಕ್ಕೆ ಕುರುಂಟು ಒಯ್ಯುಪುನೆ ಎನ್ನುತ್ತಾರೆ. ಈ ಕೆಲಸವನ್ನೂ ಇದೇ ಸಮುದಾಯ ನೆರವೇರಿಸುತ್ತದೆ.

ಪೂಕರೆ ಆಚರಣೆಯ ದಿನ ಬೆಳ್ಳಂಬೆಳಗ್ಗೆ ದೈವದ ಚಾವಡಿಯಲ್ಲಿ ಚಾವಡಿ ಶುದ್ಧ ಮಾಡುವ ಕೆಲಸ ನಡೆಯುತ್ತದೆ. ಈ ನಿಟ್ಟಿನಲ್ಲಿ ಗಣಹೋಮ ನಡೆಯುತ್ತದೆ.ಇದರಲ್ಲಿ ಊರವರು ಭಾಗವಹಿಸುತ್ತಾರೆ. ನಂತರ ತಿರುಪತಿ ವೆಂಕಟರಮಣ ಕ್ಷೇತ್ರಕ್ಕೆ ತೆಗೆದಿರಿಸಿರುವ ಮುಡಿಪನ್ನು ತೆಗೆದು ಅದಕ್ಕೆ ಎಲ್ಲರೂ ಕಾಣಿಕೆ ಹಾಕಿ ಮತ್ತೆ ಅದೇ ರೀತಿಯಲ್ಲಿ ಚಾವಡಿಯಲ್ಲಿ ಕಟ್ಟುತ್ತಾರೆ. ಈ ವಿಧಿಗಳು ಊರಿನ ದೈವದ ತಂತ್ರಿಯ ಮೂಲಕ ನಡೆಯುತ್ತದೆ.

ಮುಡಿಪು ಕಟ್ಟಿದ ನಂತರ ಊರಿನ ಪ್ರಮುಖರು ಮತ್ತು ಊರವರು ದೈವದ ಮುಗ ಆಯುಧ, ಚಿನ್ನಾಭರಣ ಪರಿಕರ ಇಟ್ಟಿರುವ ಭಂಡಾರ ಮನೆಯಿಂದ ಭಂಡಾರ ತೆಗೆಯಲು ಹೋಗುತ್ತಾರೆ. ಅಲ್ಲಿ ಊರಿನ ಪ್ರಮುಖ ದೈವಗಳ ಮಾಣಿಗಳ ಜೋಗ ನಡೆಯುತ್ತದೆ. ಈ ಜೋಗದಲ್ಲಿ ದೈವಗಳ ಅಪ್ಪಣೆ ಪಡೆದು ಪಲ್ಲಕ್ಕಿಯಲ್ಲಿ ದೈವಗಳ

ಮುಖವಾಡವನ್ನು ಇರಿಸುತ್ತಾರೆ. ಈ ಪಲ್ಲಕ್ಕಿಯನ್ನು ಬಿರುದು ಬಾವಲಿಗಳನ್ನು ಹಿಡಿದವರು ಹಿಂಬಾಲಿಸುತ್ತಾರೆ. ಮೆರವಣಿಗೆಯ ಎದುರು ದೈವದ ಬಸವ ನಡೆಯುತ್ತದೆ. ಅದರ ಹಿಂದೆ ದೈವದ ಮಾಣಿಗಳು ಕೈಯ್ಯಲ್ಲಿ ಆಯುಧ ಗಂಟೆಮಣಿ ಚಾಮರ ಹಿಡಿದುಕೊಂಡು ನಡೆಯುತ್ತಾರೆ. ಇದಕ್ಕೆ ಭಂಡಾರ ಪೋಪುನೆ ಎನ್ನುತ್ತಾರೆ. ಈ ಭಂಡಾರ ದಾರಿ ನಡುವೆ ಹಾಕಿರುವ ದರಿಗಳ ನಡುವೆ ನಡೆಯುತ್ತದೆ. ಈ ಸಂದರ್ಭದಲ್ಲಿ ದರಿಕೈಕೊನ್ನೆ ಸಂಪ್ರದಾಯ ನಡೆಯುತ್ತದೆ. ಪಂಚಜೀಟಿಗೆಗಳು ಸುಡುಮದ್ದು ಗೌಜಿಯೊಂದಿಗೆ ಕಹಳೆ, ನಗಾರಿ, ನಾಗಸ್ವರ ವಾಲಗದಲ್ಲಿ ಭಂಡಾರ ನಡೆದು ದೈವದ ಚಾವಡಿಗೆ ಬಂದು ಸೇರುತ್ತದೆ. ಅಲ್ಲಿ ಭಂಡಾರವನ್ನು ಚಾವಡಿಯ ಉಜ್ಜಾಲ್‌ನಲ್ಲಿ ಕೆರ್ಪುನ ಸಂಪ್ರದಾಯ ನಡೆಯುತ್ತದೆ. ನಂತರ ಚಾವಡಿಯಲ್ಲಿ ದೈವದ ಪಾತ್ರಿಗಳ ಜೋಗ ನಡೆಯುತ್ತದೆ. ಅಲ್ಲಿಗೆ ಭಂಡಾರ ಬರ್ಪುನೆ ಕಾರ್ಯಕ್ರಮ ಮುಗಿಯುತ್ತದೆ.

ಭಂಡಾರ ಬಂದ ನಂತರ ಕಂಬಲ ಗದ್ದೆಯಲ್ಲಿ ನಾಲೆರು ಕುರಿ ಮೀಪವುನೆ ಕಾರ್ಯಕ್ರಮ ನಡೆಯುತ್ತದೆ. ಗದ್ದೆಯಲ್ಲಿ ದೀಪ ಬೆಳಗಿಸುತ್ತಾರೆ ನೊಗಕಟ್ಟಿದ ಹಲವು ಜತೆ ಎತ್ತುಗಳಿಗೆ ನೇಗಿಲುಗಳನ್ನು ಕಟ್ಟಿ ಕಂಬುಲಗದ್ದೆಗೆ ಇಳಿಸುತ್ತಾರೆ. ಈ ಸಂದರ್ಭದಲ್ಲಿ ಬೆಮ್ಮೆರ್‌ಗೆ ಕಟ್ಟುವ ಕಾರ್ಯ ನಡೆಯುತ್ತದೆ. ಕಂಬಲಗದ್ದೆಯ ಬದುವಿನಲ್ಲಿ ಬೆಮ್ಮೆರ್ ಕಾಣಿಸಿಕೊಳ್ಳುತ್ತಾನೆ. ಕೊರಗತನಿಯ ದೈವವೂ ಅಲ್ಲಿ ಇರುತ್ತಾನೆ. ಆತನಿಗೆ ಇದು ಮೂರನೇ ದಿನ. ಪೂಕರೆಯ ಮೇಲುಸ್ತುವಾರಿಯನ್ನು ತನ್ನದೇ ಕೂ...ಗಳ ಮೂಲಕ ಗಗ್ಗರದ ಗೆಜ್ಜೆಯ ದನಿಯೊಂದಿಗೆ ಕೋಲು ಹಿಡಿದು ನಿರ್ವಹಿಸುತ್ತಿರುತ್ತಾನೆ.

ಈ ಸಂದರ್ಭದಲ್ಲಿ ಎತ್ತುಗಳ ಜೋಡಿಗಳನ್ನು ನೊಗ ನೇಗಿಲು ಕಟ್ಟಿ ಗದ್ದೆಗಿಳಿಸುತ್ತಾರೆ. ಇದರಲ್ಲಿ ಊರಿನ ಪ್ರಮುಖ ಮನೆಗಳ ಎತ್ತುಗಳಿರುತ್ತವೆ. ಜೊತೆಗೆ ಹರಕೆ ಹೊತ್ತುಕೊಂಡ ಮನೆಯವರ ಎತ್ತುಗಳೂ ಇರುತ್ತವೆ. ಇವುಗಳ ಎದುರು ಗದ್ದೆಯಲ್ಲಿ ದೀಪ ಬೆಳಗಿಸಲಾಗುತ್ತದೆ. ನಂತರ ಸಾಂಕೇತಿಕ ಉಳುಮೆ ನಡೆಯುತ್ತದೆ. ಸಾಂಕೇತಿಕ ಉಳುಮೆ ನಡೆದ ನಂತರ ಕಂಬಲ ಗದ್ದೆಯಲ್ಲಿ ತೆಂಗಿನ ಗರಿಯಿಂದ ಮಾಡಿದ ಬಲಿಪಾತ್ರೆಯಲ್ಲಿ ಅನ್ನ ಇಟ್ಟು ಅದರ ಸುತ್ತಲೂ ಕೊಳ್ತುರಿದೀಪಗಳನ್ನು ಹಚ್ಚುತ್ತಾರೆ. ಬಲಿಗೆ ಸುತ್ತು ಬಂದು ಅರಿಶಿನ ಸುಣ್ಣ ಮಿಶ್ರಿತ ಕುರ್ದಿ ನೀರನ್ನು ಗದ್ದೆಗೆ ಇಳಿದಿರುವ ಎತ್ತುಗಳ ಸಮೇತ ಕಂಬಲ ಗದ್ದೆಯ ಬದುವಲ್ಲಿ ನಿಂತಿರುವ ಎಲ್ಲರಿಗೂ ತಳಿಪು ಕಾರ್ಯ ನಡೆಯುತ್ತದೆ. ಇದನ್ನು ಊರಿನ ಪ್ರಮುಖ ದೈವದ ಪಾತ್ರಿ ನಿರ್ವಹಿಸುತ್ತಾನೆ. ಇದನ್ನು ನಾಲೆರು ಕುರಿ ಮೀಪವುನೆ ಎನ್ನುತ್ತಾರೆ . ಈ ವಿಧಿಯ ನಂತರ ಕಂಬಲ ಗದ್ದೆಗೆ ಬೀಜ ಬಿತ್ತುವ ಕೆಲಸ ನಡೆಯುತ್ತದೆ. ನಂತರ ಪೂಕರೆ ಹಾಕುವುದಕ್ಕೆ ಕ್ಷಣಗಣನೆ ಆರಂಭವಾಗುತ್ತದೆ.

ಊರಿನ ಯುವಕರು ತಮ್ಮ ಹೆಗಲಿನಲ್ಲಿ ಪೂಕರೆಯನ್ನು ಹೊತ್ತುಕೊಂಡು ಕಂಬಲ ಗದ್ದೆಯ ನಡುವೆ ಇರುವ ಪೂಕರೆ ಕುತ್ತಿಯಲ್ಲಿಗೆ ಕೊಂಡು ಹೋಗುತ್ತಾರೆ. ಈ ಸಂದರ್ಭದಲ್ಲಿ ಪೂಕರೆ ಕುತ್ತಿಗೆ ಹಾಲು ಎರೆಯುವ ಸಂಪ್ರದಾಯ ನಡೆಯುತ್ತದೆ. ಇದನ್ನು ಗುತ್ತಿನ ಮನೆಯ ಒಬ್ಬ ಸದಸ್ಯ ನೆರವೇರಿಸುತ್ತಾನೆ. ಕೊರಗತನಿಯನಿಗೆ

ಕಟ್ಟಿದ ದೈವ ಪೂಕರೆ ಸಾಗುವ ಎದುರಿನ ಕಟ್ಟಪುಣಿಯಲ್ಲಿ ನಿಂತುಕೊಂಡು ದೂರದಿಂದಲೇ ಪೂಕರೆಯ ಮೇಲೆ ಗಮನ ಇಡುತ್ತದೆ.

ಪೂಕರೆ ಕುತ್ತಿಗೆ ಪೂಕರೆಯನ್ನು ಮೂರು ಸುತ್ತು ಬರಿಸಿದ ನಂತರ ಪೂಕರೆಯನ್ನು ಪೂಕರೆ ಕುತ್ತಿಯಲ್ಲಿ ನೇರವಾಗಿ ನಿಲ್ಲಿಸುವ ಕೆಲಸ ನಡೆಯುತ್ತದೆ. ಪೂಕರೆ ಕೆಲಸ ನಿರ್ವಹಿಸಿದ ಆಚಾರಿ ಪೂಕರೆ ಕುತ್ತಿಯಲ್ಲಿ ನಿಲ್ಲಿಸಿದ ಪೂಕರೆಗೆ ಕುಟ್ಟಿಗಳನ್ನು ಬಡಿದು ಗಟ್ಟಿಗೊಳಿಸುತ್ತಾನೆ. ನಂತರ ಪೂಕರೆ ಹಾಕಿದವರು ಗೋವಿಂದ.. ಗೋವಿಂದ ... ಕೂಗಿಕೊಂಡು ಪೂಕರೆಗೆ ಮೂರು ಸುತ್ತು ಬಂದು ಪೂಕರೆಗೆ ಕೇಪುಲ ಹೂ ಎಸೆದು ಕಂಬಲ ಗದ್ದೆಯ ಬದುವಿಗೆ ಓಡಿಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಕೊರಗನಿಗೆ ಕಟ್ಟಿದ ವ್ಯಕ್ತಿ ಪೂಕರೆ ಹಾಕಿದ ವ್ಯಕ್ತಿಗಳು ಗದ್ದೆಯ ಬದುವಿಗೆ ಬಂದು ಸೇರುವ ಮೊದಲು ಓಡಿಬಂದು ಪೂಕರೆ ಸಿಂಗರಿಸಿದಲ್ಲಿಗೆ ಬಂದು ಸೇರುತ್ತಾನೆ. ಈ ಕ್ಷಣವನ್ನು ಸೇರಿರುವ ಮಕ್ಕಳು ಹಿರಿಯರು ಹೆಚ್ಚು ಖುಷಿಯಿಂದ ಮನತುಂಬಿಕೊಳ್ಳುತ್ತಾರೆ.

ಪೂಕರೆ ಹಾಕಿದ ನಂತರ ನಾಗಬನದಲ್ಲಿ ನಾಗನಿಗೆ ತನು ಎರೆಯುವ ಕೆಲಸ ನಡೆಯುತ್ತದೆ. ಇದಕ್ಕೆ ನಾಗಣಿಪುಣಿ ಎಂದು ಕರೆಯುತ್ತಾರೆ. ಕೆಲವೊಮ್ಮೆ ಇದು ಮುಸ್ಸಂಜೆ ಸಮಯದಲ್ಲೂ ನಡೆಯುತ್ತದೆ. ನಾಗನಿಗೆ ತನು ಎರೆದ ನಂತರ ಕೊರಗತನಿಯ ಮತ್ತು ಬಿರ್ಮೆರ್‌ಗೆ ಕಟ್ಟಿದ ಕೋಲ ಕೊನೆಗೊಳ್ಳುತ್ತದೆ.

ನಂತರ ರಾತ್ರಿಗೆ ಸಾಮೂಹಿಕ ಊಟವಾದ ನಂತರ ರಾತ್ರಿ ದೈವಗಳಿಗೆ ಮಾರಿ ಸೂಟೆಯ ಬೆಳಕಿನಲ್ಲಿ ಜೀಟಿಗೆ ಪಂಚಜೀಟಿಗೆಯ ಬೆಳಕಿನಲ್ಲಿ ನೇಮ ನಡೆಯುತ್ತದೆ. ದೈವಗಳಿಗೆ ಆವಾರ ನೀಡಲಾಗುತ್ತದೆ. ಕಂಬಲಕೋರಿ ಆಚರಣೆಯಲ್ಲಿ ಭಾಗವಹಿಸಿದ ಎಲ್ಲರಿಗೂ ದೈವ ಗಂಧ ಪ್ರಸಾದ ನೀಡುತ್ತದೆ. ನೇಮದಲ್ಲಿ ಗಂಡಗಣಗಳಿಗೆ ಬಳಸುನೆಗೆ ದಿನನಿಗದಿಯಾಗುತ್ತದೆ. ಅರೆಬೊಟ್ಟುವಿನಲ್ಲಿ ಗುಡ್ಡಜಂಡಿ, ಅಣ್ಣಪ್ಪ ಪಂಜುರ್ಲಿ ಮಲೆಕೊರತಿ ಮತ್ತು ಗುಳಿಗ ನೇಮ ನಡೆಯುತ್ತದೆ. ನಂತರ ದೈವ ಊರಿನ ಎಲ್ಲರಿಗೂ ಅಭಯ ನೀಡುತ್ತದೆ.

ನೇಮ ಕಟ್ಟಿದ ಊರ ರಾಜಂದೈವ ಗುಡ್ಡಜಂಡಿಯ ನುಡಿ ಇದು –

'ಪತ್ತ್‌ಬಂಗಾರ್ ಮುತ್ತು ಪಲ್ಲೆಂಕಿ ಕೊನತ್‌ದ್ ಉಜ್ಜಾಲ್‌ಡ್ ಕೆರ್ತೊಂಡರ್,
ನಾಲೆರು ಕುರಿ ಮೀಪವೊಂಡರ್,
ಕೋರಾಯಿಂಚಿ ಕಂಬುಲಗ್ ಸಿಂಗಾರದ ಪೂಕರೆ ಪಾಡ್ಪವೊಂಡರ್,
ಮಿತ್ತ್ ಸೂರ್ಯನಾರಾಯಣನ್ ಅಂದ್ ಮಲ್ತೊಂಡೆ,
ತಿರ್ತ್ ಭೂಮಿಯಪ್ಪೆಗೆ ವಂದನೆ ಮಲ್ತೊಂಡೆ.
ಆಣ ತರೆಕ್ ಪೊಣ್ಣ ನೆರಿಕ್ ಬೆರಿಸಾಯವಾದ್ ಉಂತುಬೆ,
ವಿಷ ಬತ್ತ್‌ಂಡ ಕಡಪ ರಾಜ್ಯೊಗ್ ಪಾಡ್ದ್ ಅಮೃತೊನ್ ನಿಕ್ಲೆ ಜಾಗ್‌ಗ್ ಪಾಡುಬೆ.

ನ್ಯಾಯ ಹೇಳಬೇಕಾದ ಗುತ್ತಿನ ಗಡಿಹಿಡಿದವನಿಗೆ ಊರ ರಕ್ಷಣೆಯ ಹೊಣೆಯನ್ನು

ಹೊರಿಸುವ ಮಾತುಗಳು ಇವು –

'ತೊರಿತಿನಾಯನ ಕಾರ್ ಕಡ್ಪಡ,
ತಾಡ್‌ನಾಯನ ಕೊಂಬು ಪೊಲಿಪಡ,
ಕೋಪೆದ ಬಂಗಾರ್‌ನ್ ಕೋಪೆಗೆ ತುರಿಪೆ,
ಕೋಪೆದ ಬಂಗಾರ್‌ನ್ ಕೋಪೆಗ್ ತುರಿಪೆ.'

ಎಂದು ನುಡಿ ನೀಡಿದ ದೈವ 'ಪೂರಕಟ್ಟಾಪೆ' ಎಂದು ಮೂರು ಸಾರಿ ಹೇಳಿ ನೇಮದಿಂದ ಇಡೆಬುಡ್ಪುನೆ ಮೂಲಕ ನೇಮ ಕೊನೆಗೊಳ್ಳುತ್ತದೆ. ದೈವಗಳ ನೇಮ ನಡೆದ ನಂತರ ದೈವಗಳ ಭಂಡಾರ ಮತ್ತೆ ದೈವದ ಭಂಡಾರ ಮನೆಗೆ ಅಂದರೆ ಸ್ವಸ್ಥಾನಕ್ಕೆ ಹಿಂದಿರುಗುತ್ತದೆ.

ನೇಮ ನಡೆದ ಒಂದು ಪಕ್ಷದ ಅಂತರದಲ್ಲಿ ಗಂಡಗಣಗಳಿಗೆ ಬಳಸುನೆ ಕಾರ್ಯಕ್ರಮ ನಡೆಯುತ್ತದೆ.ಇಲ್ಲಿಗೆ ಪೂಕರೆ ಉತ್ಸವ ಪೂರ್ಣಗೊಳ್ಳುತ್ತದೆ. ಪೂಕರೆ ಕಂಬವನ್ನು ಬಿಸುದಿನದ ಹಿಂದಿನ ದಿನ ತೆಗೆದಿರಿಸಲಾಗುತ್ತದೆ. ಮರುವರ್ಷ ಅದೇ ಕಂಬವನ್ನು ಉಪಯೋಗಿಸಲಾಗುತ್ತದೆ.

ಬಂಟ್ವಾಳ ತಾಲೂಕಿಗೆ ಸಂಬಂಧಿಸಿದ ಅರೆಬೊಟ್ಟು, ಮಾಣಿ, ಕಾಂಪ್ರಬೈಲ್, ಅನಂತಾಡಿ, ನಡಿಬೈಲು, ಮೋರ್ಲಗಳಲ್ಲಿ ನಡೆಯುವ ಪೂಕರೆ ಆಚರಣೆಯಲ್ಲಿ ಕಂಬಲಗದ್ದೆಗೆ ಪೂಕರೆ ಹಾಕುವ ಆಚರಣೆಯಲ್ಲಿ ಕಂಬಲಕ್ಕೆ ನೇರವಾಗಿ ಸಂಬಂಧಿಸಿದ ಬೆಮ್ಮೆರ್ ಮತ್ತು ಕೊರಗಜ್ಜ ದೈವಗಳಲ್ಲದೆ ಊರಿನ ದೈವಗಳಿಗೂ ನೇಮ ನಡೆಯುತ್ತದೆ. ಇಲ್ಲಿ ಉಳ್ಳಾಳ್ದಿ ದೈವಕ್ಕೆ ಪ್ರಾಮುಖ್ಯವಾಗಿ ಆರಾಧನೆ ನಡೆಯುತ್ತದೆ.

ಬೆಮ್ಮೆರ್ ಮತ್ತು ಕೊರಗಜ್ಜ ಪುರಷರೂಪದ ದೈವವಾದರೆ ಉಳ್ಳಾಳ್ದಿ ಸ್ತ್ರೀರೂಪಿ ದೈವ ಎಂಬುದು ಗಮನಾರ್ಹ ಇಲ್ಲಿ ಉಳ್ಳಾಳ್ದಿಗೆ ನೇಮ ಇರುವುದಿಲ್ಲ. ಊರಿನ ರಾಜಂದೈವಗಳಿಗೆ ನೇಮ ಇರುತ್ತದೆ.

ಬಂಟ್ವಾಳ ತಾಲೂಕಿನ ಅರೆಬೆಟ್ಟು, ಮಾಣಿ, ಅನಂತಾಡಿಗಳಲ್ಲಿ ನಡೆಯುವ ಪೂಕರೆ ಉತ್ಸವ ಗದ್ದೆಗಳು ಪಶ್ಚಿಮ ಘಟ್ಟಗಳ ಸುಳ್ಳಮಲೆ ಬಳ್ಳಮಲೆಯಂತಹ ದಟ್ಟಕಾಡುಗಳ ಹಿನ್ನೆಲೆಯನ್ನು ಹೊಂದಿವೆ. ಹಾಗಿದ್ದೂ ಒಂದೇ ರೀತಿಯ ದೈವ ಶಕ್ತಿಗಳ ಆರಾಧನೆ ಈ ಎರಡೂ ಊರುಗಳಲ್ಲಿ ನಡೆಯುತ್ತಿದ್ದರೂ ಅರೆಬೆಟ್ಟು ಮಾಣಿಗಳಲ್ಲಿ ಒಂದು ಕಂಬಳದಲ್ಲಿ ಪೂಕರೆ ಉತ್ಸವ ನಡೆದರೆ ಅನಂತಾಡಿಯಲ್ಲಿ ಎರಡು ಕಂಬುಲ ಗದ್ದೆಗಳಲ್ಲಿ ಪೂಕರೆ ಉತ್ಸವ ಆಚರಿಸುವ ಸಂಪ್ರದಾಯ ಇದೆ. ಈ ಕಾರಣದಿಂದ ಅನಂತಾಡಿಯಲ್ಲಿ ಎರಡು ಪೂಕರೆಗಳನ್ನು ಆಚರಿಸುತ್ತಾರೆ.

ಅರೆಬೆಟ್ಟುವಿನಲ್ಲಿ ಪೂಕರೆ ಆಚರಣೆಯ ನೇಮ ನಡೆಯುವಾಗ ದೈವದ ನುಡಿಯಲ್ಲಿ 'ಅರೆಬೊಟ್ಟುಡ್ ಮದುಪುದ್ವಾರ್' ಮತ್ತು 'ಮಾಣಿಡ್ ಪುದ್ವಾರ್' ಎಂಬ ಮಾತು ಬರುತ್ತದೆ.

ಅರೆಬೆಟ್ಟು ಮಾಣಿಗಳಲ್ಲಿನ ಪೂಕರೆ ತಯಾರಿಸಲು ತೆಕ್ಕಿ ಮರದ ಕಂಬಗಳನ್ನು ಬಳಸುತ್ತಾರೆ. ಈ ಕಾರಣದಿಂದ ಇಲ್ಲಿನ ಪೂಕರೆಗಳು ಎತ್ತರವಾಗಿರುತ್ತದೆ. ಹಾಕಿದ

ಪೂಕರೆ ತೆಗೆಯುವವರೆಗೂ ಒಂದೇ ಸ್ಥಿತಿಯನ್ನು ಕಾಯ್ದುಕೊಳ್ಳುತ್ತವೆ. ಅನಂತಾಡಿಯಲ್ಲಿ ಕಂಗಿನ ಪೂಕರೆ ಇದೆ.

ಅರೆಬೊಟ್ಟುವಿನಲ್ಲಿ ದೈವಗಳಿಗೆ ನೀಡುವ ಆವಾರ್ನೆಯಲ್ಲಿ ಶೇಂದಿ ಇರುತ್ತದೆ. ಸಾಮೂಹಿಕ ಊಟ ಸಸ್ಯಾಹಾರವಾಗಿರುತ್ತದೆ. ಕಂಬಲ ಆಚರಣೆಯ ಎಂಟು ದಿನಗಳ ಬಳಿಕ ನಡೆಯುವ ಗಂಡಗಣೊಕುಳೆಗ್ ಬಳಸುನೆ ಆಚರಣೆ ಕಾಡಿನಬದಿಯಲ್ಲಿ ನಡೆಯುತ್ತದೆ. ಈ ಸಾಮೂಹಿಕ ಊಟ ಕೋಳಿ ಮೀನು ಊಟದಿಂದ ಸಂಪನ್ನಗೊಂಡಿರುತ್ತದೆ. ಬಂಟ್ವಾಳ ತಾಲೂಕಿನ ಸಜಿಪ, ಮೋರ್ಲಗಳಲ್ಲಿ ಕೋಳಿ ಮೀನು ಇರುವ ಮದುಪುದ್ವಾರ್ ಊಟ ಇರುತ್ತದೆ.

ಬಿರ್ಮ್ಮೆರೆಗ್ ಕಟ್ಟುನೆ ಮತ್ತು ಕೊರಗಜ್ಜ ಕೋಲಗಳಲ್ಲದೆ ಊರಿನ ಪ್ರಮುಖ ದೈವಗಳ ನೇಮ ಬಂಟ್ವಾಳ ತಾಲೂಕಿನ ಪೂಕರೆ ಆಚರಣೆಯ ವಿಶೇಷತೆಯಾಗಿ ಗೋಚರಿಸುತ್ತದೆ.

ಅನಂತಾಡಿಯಲ್ಲಿನ ಕಂಬುಲಗದ್ದೆಗಳಿಗೆ ಹಾಕುವ ಜೋಡಿ ಪೂಕರೆಗಳಲ್ಲಿ ಒಂದು ಪೂಕರೆಯನ್ನು ಕಲ್ಲಿನ ಬಂಡಿಯಲ್ಲಿ ನಿಲ್ಲಿಸಲಾಗುತ್ತದೆ. ಇದು ನಾಲ್ಕು ಚಕ್ರಗಳಿಂದ ಕೂಡಿದ್ದು ಆರು ಅಡಿ ಅಗಲ, ನಾಲ್ಕು ಅಡಿಯಷ್ಟು ಎತ್ತರದ ಬಂಡಿಯಾಗಿರುತ್ತದೆ. ಹಲಗೆ ಮತ್ತು ಆಧಾರಕ್ಕೆ ಮರದ ಕಂಬಗಳಿಂದ ಹೊಂದಿಸಲಾಗುತ್ತದೆ. ಮರದ ಜೋಡಣೆಯಿಂದಾಗುವ ಪೂಕರೆಯನ್ನು ಕಲ್ಲಿನ ಚಕ್ರಗಳು ಕೆಸರಿನಿಂದ ಕೆಡದಂತೆ ಆಧರಿಸುತ್ತವೆ. ಬಂಡಿಯ ನಾಲ್ಕಡಿ ಎತ್ತರದ ಪೀಠದ ಭಾಗದ ಮಧ್ಯದಲ್ಲಿ ಪೂಕರೆಯನ್ನು ಹೊಂದಿಸಲಾಗುತ್ತದೆ. ಇನ್ನೊಂದು ಪೂಕರೆಯನ್ನು ಕಂಗಿನಿಂದ ತಯಾರಿಸಿ ಗದ್ದೆಯ ನಡುವೆ ನೆಡಲಾಗುತ್ತದೆ.

### ೩.೨ ಮಂಗಳೂರು

ಮಂಗಳೂರು ತಾಲೂಕು ಮುಖ್ಯವಾಗಿ ಸಮುದ್ರ ತೀರ ಮತ್ತು ನೇತ್ರಾವತಿ, ಗುರುಪುರ ನದಿ ತಟದಲ್ಲಿರುವ ಪ್ರದೇಶವಾಗಿರುವುದರಿಂದ ಇಲ್ಲಿ ನೆರೆಹಾವಳಿ ಹೆಚ್ಚು. ಈ ಕಾರಣದಿಂದ ಈ ಭೂಭಾಗದಲ್ಲಿ ಪಟ್ಲ ಬೆಳೆ ಬೆಳೆಯುತ್ತಿತ್ತು.

ಉಳ್ಳಾಲಗುತ್ತು, ಪರಿಯಾಲ್ದ ಗುತ್ತು, ಕಿನ್ಯಗುತ್ತು, ತಿರುವೈಲ್‌ಗುತ್ತು, ಎಕ್ಕಾರ್, ಮಿಜಾರ್, ಕಾವೇರ ಮನೆ ಮತ್ತು ಸೂರಿಂಜೆಯಲ್ಲಿ ಪೂಕರೆ ಆಚರಣೆ ನಡೆಯುತ್ತಿದೆ. ಕೋಟೆಕಾರ್‌ಗುತ್ತು, ಉಳ್ಳಾಲ ಬೈಲ್, ಮಕ್ಕೇರ ಮಂಟಮೆ, ಉಳ್ಳಾಲ ಬೈಲ್, ಪಡು ಪಣಂಬೂರು ಮುಂತಾದ ಕಡೆ ನಡೆಯುತ್ತಿದ್ದ ಪೂಕರೆ ಆಚರಣೆಗಳು ನಿಂತುಹೋಗಿವೆ.

ಉಳ್ಳಾಲ ಬೈಲಿನ ಪೂಕರೆ ಉತ್ಸವ ತೊಕ್ಕೊಟ್ಟು ಬಳಿಯ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ನಡೆಯುತ್ತಿದೆ. ಇಲ್ಲಿನ ಕಂಬುಲ ಗದ್ದೆ ರಾಷ್ಟ್ರೀಯ ಹೆದ್ದಾರಿಗೆ ಹೋಗಿರುವುದರಿಂದ ಕಂಬಲ ಗದ್ದೆ ಇಲ್ಲದ ಸ್ಥಿತಿಯಲ್ಲಿ ಪೂಕರೆ ಆಚರಣೆ ನಡೆಯುತ್ತಿದೆ. ರಸ್ತೆಯ ಪಕ್ಕದಲ್ಲಿ ಮಲರಾಯ ಬಂಟ ದೈವದ ಚಾವಡಿಯ ಎದುರು ಹಿಂದೆ ಕಂಬುಲ ಇದ್ದ ಸ್ಥಳದ ಒಂದು ಮೂಲೆಯಲ್ಲಿ ಪೂಕರೆ ಹಾಕುತ್ತಾರೆ. ಇಕ್ಕಟ್ಟಾದ

ಸ್ಥಳದಲ್ಲಿ ಸಿಮೆಂಟ್ ಕಟ್ಟೆಯ ಮೇಲೆ ಗಿಡ್ಡ ಪೂಕರೆ ಕಂಡುಬರುತ್ತದೆ.

ಇಲ್ಲಿನ ಕಂಬುಲ ಮೂಲತ:ವಾಗಿ ಮೂರು ಎಕ್ರೆ ೮೦ ಸೆಂಟ್ಸ್ ಸ್ಥಳಾವಕಾಶ ಹೊಂದಿತ್ತು. ಈಗ ಈ ಕಂಬುಲ ಇದ್ದ ಸ್ಥಳದಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ಕಟ್ಟಡಗಳು ಆವರಿಸಿವೆ. ಮೊದಲು ಹನ್ನೊಂದು ಗೆಣೆಗಳಿದ್ದ ಪೂಕರೆ ಈಗ ಏಳು ಗೆಣೆಗಳ ಪೂಕರೆಯಾಗಿ ಆಚರಣೆಗೊಳ್ಳುತ್ತಿದೆ.

ದೈವದ ಚಾವಡಿಯಲ್ಲಿ ಪೂಕರೆ ಆಚರಣೆಗೆ ದಿನ ನಿಗದಿ ಮಾಡಲಾಗುತ್ತದೆ. ಜನವರಿ ತಿಂಗಳ ಮೊದಲ ವಾರದಲ್ಲಿ ಪೂಕರೆ ಹಾಕಲಾಗುತ್ತದೆ.ಪೂಕರೆ ಆಚರಣೆ ಹಿಂದಿನ ದಿನ ಸೇಡಿ ಪೂಜುನೆ ವಿಧಿ ನಡೆಯುತ್ತದೆ. ಈ ವಿಧಿಯನ್ನು ಆದಿದ್ರಾವಿಡ ಜನಾಂಗದವರು ಬಂದು ನೆರವೇರಿಸುತ್ತಾರೆ. ಹಿಂದೆ ಈ ಸಂದರ್ಭದಲ್ಲಿ ಡೋಲು ಬಾರಿಸುವ ಕ್ರಮ ಇದ್ದು ಡೋಲು ಬಾರಿಸಿಕೊಂಡು ಊರಿನ ಮನೆಗಳಿಗೆ ಹೋಗಿ ಅವರಿಂದ ವಂತಿಗೆ ಪಡೆಯುವ ಕ್ರಮ ಇತ್ತು. ಈಗ ಈ ಕ್ರಮ ಇಲ್ಲ.

ಬೆಳಗ್ಗೆ ದೈವದ ಚಾವಡಿಯಲ್ಲಿ ಮುಡಿಪು ಶುದ್ದ ಮಾಡುವ ವಿಧಿ ನಡೆಯುತ್ತದೆ. ನಂತರ ಆಚಾರಿ ಬಂದು ಪೂಕರೆ ಕಂಬವನ್ನು ಹೊರಗೆ ತೆಗೆದು ಪೂಕರೆ ರಚಿಸುವ ಕೆಲಸ ಆರಂಭಿಸುತ್ತಾನೆ. ಪೂಕರೆ ರಚನೆಯಾದ ಕೂಡಲೇ ಉರವೆ ಜಪ್ಪುನೆ ನಡೆಯುತ್ತದೆ.

ನಂತರ ಎರುಬಂಟೆ ಕೋಲ ನಡೆಯುತ್ತದೆ. ಇಲ್ಲಿ ಪೂಕರೆ ಆಚರಣೆ ದಿನದಂದು ಉರವೆ ಮತ್ತು ಎರುಬಂಟ ಕೋಲಗಳು ಮಾತ್ರ ನಡೆಯುತ್ತದೆ. ದೈವಗಳಿಗೆ ಪೂಕರೆ ದಿನದಂದು ನೇಮ ಇಲ್ಲ. ಬದಲಿಗೆ ಒಂದು ವಾರ ಇಲ್ಲವೆ ಪಕ್ಷದ ನಂತರ ದೈವಗಳ ನೇಮ ನಡೆಯುತ್ತದೆ.

ಪೂಕರೆಯನ್ನು ಪಾದೆ ಪೂ, ಪಿಂಗಾರದಿಂದ ಭಂಡಾರಿ ಸಮುದಾಯದ ಊರ ಭಂಡಾರಿ ಅಲಂಕಾರ ಮಾಡುತ್ತಾನೆ. ಪೂಕರೆ ಕುತ್ತಿಗೆ ಮನೆಯ ಯಜಮಾನ ಹಾಲು ಎರೆಯುವ ಕ್ರಮ ಇದೆ. ಪೂಕರೆ ಆಚರಣೆ ಸಂದರ್ಭದಲ್ಲಿಯೇ ಬಲಿಯೇಂದ್ರಗ್ ಮರಪಾಡುನೆ ಕ್ರಮ ನಡೆಸಲಾಗುತ್ತದೆ. ಬಲಿಯೇಂದ್ರನಿಗೆ ಅರಳು ಅವಲಕ್ಕಿ ಸಮರ್ಪಿಸಿ ಆತನನ್ನು ಕರೆಯುವ ಕ್ರಮ ಇದೆ. ಈ ಕ್ರಮ ದೀಪಾವಳಿ ಪರ್ಬಕ್ಕೆ ನಡೆಯುವ ವಿಧಿ ಇದನ್ನು ಕಂಬುಲಕೋರಿಯೊಂದಿಗೆ ನಡೆಸುತ್ತಿರುವುದು ಕಂಡು ಬರುತ್ತದೆ.

ಪೂಕರೆ ಹಾಕುವ ಮೊದಲು ಬಲಿದೀದ್ ಮುದ್ರೆ ಇಡುವ ಕ್ರಮ ಇದೆ. ಅನ್ನಕ್ಕೆ ಅರಿಶಿನ ಕುಂಕುಮ ಬೆರೆಸಿ ತೆಂಗಿನಗರಿಯ ಸಣ್ಣ ಹೆಡಿಗೆಯಲ್ಲಿ ಬಲಿ ತಯಾರಿಸುತ್ತಾರೆ. ಅದಕ್ಕೆ ಸುತ್ತಲೂ ಕೊಲ್ತುರಿ ದೀಪ ಇಡುತ್ತಾರೆ. ಆದರೆ ಕಂಬುಳಕ್ಕೆ ಎರುಜಪ್ಪುನೆ, ನಾಲೆರು ಕುರಿ ನೀರ್ ಮೀಪವುನೆ ಕ್ರಮ ನಡೆಯುವುದಿಲ್ಲ.

ಪೂಕರೆ ಹಾಕಿದ ನಂತರ ಎರುಬಂಟನಿಗೆ ಹಾಲು ಕೊಡುವ ಕ್ರಮ ಇದೆ. ಪೂಕರೆ ಆಚರಿಸಿದ ನಂತರ ನಾಗನಿಗೆ ತನುಹಾಕುವ ನಾಗರ್ಪುನೆ ಕ್ರಮ ಇಲ್ಲ. ಪೂಕರೆ ಹಾಕಿ ದೈವಗಳ ನೇಮಕ್ಕೆ ದಿನ ಇಡಲಾಗುತ್ತದೆ. ನಂತರ ಬಲ್ಯಾರ್

ಕಡ್ಲೆ ಪದಾರ್ಥ ಇರುವ ಸಾಮೂಹಿಕ ಊಟ ನಡೆಯುತ್ತದೆ. ಇಲ್ಲಿ ಮಲರಾಯಿ ಮತ್ತು ಬಂಟದೈವಗಳಿಗೆ ನೇಮ ಇದೆ. ಭಂಡಾರದ ಮನೆ ಉಳ್ಳಾಲ ಆಳಿಯಾರ್ ಕೊಟ್ಟಾರ ಸಾನದಿಂದ ಭಂಡಾರ ಬರುತ್ತದೆ. ಭಂಡಾರದ ಜತೆಗೆ ಮಲರಾಯ ಮಾಣಿ ಜೋಗದಲ್ಲಿ ಬರುವ ಕ್ರಮ ಇದೆ. ಇಲ್ಲಿನ ಕಂಬುಲ ಇದ್ದ ಜಾಗವನ್ನು ಕಟ್ಟಡಗಳು ಮತ್ತು ರಾಷ್ಟ್ರೀಯ ಹೆದ್ದಾರಿ ಆವರಿಸಿದೆ. ಕಂಬುಲ ಇಲ್ಲದ ಸ್ಥಿತಿಯಲ್ಲಿ ಪೂಕರ ಆಚರಣೆ ನಂಬಿಕೆ, ಕಟ್ಟಳೆಯಾಗಿ ಆಚರಿಸಲ್ಪಡುತ್ತಿರುವುದು ಕಂಡು ಬರುತ್ತಿದೆ.

**೩.೩ ಪುತ್ತೂರು**

ಪುತ್ತೂರು ತಾಲೂಕಿನ ಭತ್ತದ ಗದ್ದೆಗಳಲ್ಲಿ ಅಡಿಕೆ ತೋಟಗಳು ವ್ಯಾಪಿಸಿರುವುದರಿಂದ ಕೆಲವೇ ಕೆಲವು ಕಂಬುಲಗಳಲ್ಲಿ ಪೂಕರೆ ಆಚರಣೆ ನಡೆಯುತ್ತದೆ.

ಪೂಕರೆಗೆ ದಿನ ನಿಗದಿ ಮಾಡುವ ಮೊದಲೇ ಗದ್ದೆಯ ಬದುಗಳನ್ನು ಕೆತ್ತಿ ಮಣ್ಣು ಮೆತ್ತಿ ಅದನ್ನು ಸಮತಟ್ಟಾಗಿರುವಂತೆ ಸವರುತ್ತಾರೆ. ಗದ್ದೆಯನ್ನು ಹದ ಮಾಡಿರುತ್ತಾರೆ. ಪೂಕರೆ ದಿನ ಮಾಡುವ ಉಳುಮೆ ಕೊನೆಯದು. ಪೂಕರೆ ಹಾಕುವ ಹಿಂದಿನ ದಿನ ಕಂಬುಲದ ಹುಣಿಗೆ ಮಣ್ಣಿನ ಲೇಪನ ಮಾಡುತ್ತಾರೆ. ಈ ಕಟ್ಟಪುಣಿಯ ಮೂಲೆಗಳಲ್ಲಿ ಮಧ್ಯ ಭಾಗಗಳಲ್ಲಿ ತ್ರಿಶೂಲಾಕಾರದಲ್ಲಿ ಚಿತ್ರ ಬರೆಯುತ್ತಾರೆ. ಕಟ್ಟಪುಣಿಯ ಸುತ್ತಲೂ ಇರುವ ತೆಂಗಿನ ಮರಗಳಿಗೂ ಸೇಡಿ ಪೂಜುತ್ತಾರೆ. ತೆಂಗಿನ ಮರಕ್ಕೆ ಸುತ್ತು ಇರುವಂತೆ ಮೂರು ಗೆರೆಗಳನ್ನು ಬಳಿಯುತ್ತಾರೆ. ಇವುಗಳು ಕೆಂಪು ಮತ್ತು ಹಳದಿ ಬಣ್ಣದಿಂದ ಕೂಡಿರುತ್ತದೆ. ಈ ಕೆಲಸಗಳನ್ನು ಊರಿನ ಮೇರ ಜನಾಂಗದ ಮುಖ್ಯಸ್ಥ ಕಾಪಡ ನೆರವೇರಿಸುತ್ತಾನೆ.

ಪೂಕರೆ ಆಚರಣೆಯಂದು ಬೆಳಿಗ್ಗೆ ಭಂಡಾರದ ಮನೆಯಿಂದ ಕೊಂಬು ವಾಲಗಗಳೊಂದಿಗೆ ದೈವಗಳ ಭಂಡಾರ ಬರುತ್ತದೆ. ತಂದ ಭಂಡಾರವನ್ನು ದೈವದ ಚಾವಡಿಯ ಸಿಂಗರ್ತನದ ದೊಂಪದಲ್ಲಿ ಇರಿಸುತ್ತಾರೆ. ಈ ಸ್ಥಳವನ್ನು ಕೊಡಿಯಡಿ ಎಂದು ಗುರುತಿಸುತ್ತಾರೆ. ಪೂಕರೆ ಗದ್ದೆಯ ಪಕ್ಕದಲ್ಲಿ ಅಥವಾ ಹುಣಿಯಲ್ಲಿ ನಾಗಬನವಿರುತ್ತದೆ. ಭಂಡಾರ ಏರಿಸಿದ ತರುವಾಯ ರಾತ್ರಿ ನಾಗನಿಗೆ ತಂಬಿಲ ಕೊಡುವ ಕ್ರಮ ಇದೆ. ಇದಕ್ಕೆ ನಾಗರ್ಪುನೆ ಎನ್ನುತ್ತಾರೆ. ಇಲ್ಲಿ ನಾಗನಿಗೆ ಬಿನ್ನಹವನ್ನು ನಲ್ಕೆ ಜನಾಂಗದ ಮುಖ್ಯಸ್ಥ ಹೇಳುತ್ತಾನೆ. ಈ ಸಂದರ್ಭದಲ್ಲಿ ಬಿಲ್ಲವ ಜನಾಂಗದ ಮುಖ್ಯಸ್ಥ ಊರ ಬೋಂಟ್ರ, ಊರ ಮಡಿವಾಳ, ಊರ ಭಂಡಾರಿ ಸಹಕರಿಸುತ್ತಾರೆ. ನಾಗನ ಪಾರಿಯ ಕೊನೆಗ ಆಳ್ ಏ ಕೂ... ಎಂದು ಕೂಗುತ್ತಾರೆ. ಸೇರಿದ ಜನರು ಕೊಲ್ತುರಿ ಉರಿಸಿಕೊಂಡು ಆಳ್ ಏ ಕೂ... ಎನ್ನುತ್ತಾ ಗದ್ದೆಗೆ ಸುತ್ತು ಬರುತ್ತಾರೆ. ಕೈಯ್ಯಲ್ಲಿನ ಕೊಲ್ತುರಿಗಳನ್ನು ಅಲ್ಲಲ್ಲಿ ಗದ್ದೆಯ ಹುಣಿಗೆ ಕುತ್ತುತ್ತಾರೆ. ಈ ದಿನ ಬೆಳಿಗ್ಗೆಯಿಂದ ಊರ ಅಜಿಲ ಮನೆಮನೆಗೆ ಹೋಗಿ ತೆಂಬರೆ ನುಡಿಸಿ ಪೂಕರೆಯ ಹೇಳಿಕೆ ಕೊಡುತ್ತಾನೆ.

ನಾಗನಿಗೆ ತಂಬಿಲವಾದ ನಂತರ ಅಲ್ಲಿ ಸೇರಿರುವ ಆದಿ ದ್ರಾವಿಡ ಸಮುದಾಯ ಡೋಲು ಹಲಗೆ ಬಾರಿಸುತ್ತಾ ಕುಣಿಯುತ್ತಾರೆ. ಉರಲ್‌ಗಳನ್ನು ಹಾಡುತ್ತಾರೆ. ಆದಿ ದ್ರಾವಿಡ ಜನಾಂಗದವರ ಕುಣಿತ ನಡೆಯುತ್ತದೆ. ರಾತ್ರಿ ಕಾಪಡಇಲ್ಲವೆ ಕಂಬಳದ ಮುಖ್ಯಸ್ಥ ಜಾಗರಣೆ ಕುಳಿತಿರುತ್ತಾನೆ. ಇದಕ್ಕೆ ಇಲ್ಲಿ ಪನಿಕ್ ಕುಲ್ಲುನೆ ಎನ್ನುತ್ತಾರೆ.

ಪೂಕರೆ ದಿನ ಕುದಿ ಎರ್ಲ್‌ಗಳನ್ನು ಗದ್ದೆಗೆ ಕೊಂಬು ವಾಲಗದೊಂದಿಗೆ ಇಳಿಸುತ್ತಾರೆ. ಆರಂಭದಲ್ಲಿ ಎರಡು ಜೋಡೆತ್ತುಗಳು ವರ್ಷಕ್ಕೊಮ್ಮೆ ಸರದಿಯಲ್ಲಿ ಪೂಕರೆ ಗದ್ದೆಗೆ ಮಾತ್ರ ಉಳುಮೆಗೆ ಇಳಿಸುವ ಎತ್ತುಗಳಾಗಿದ್ದು ದೈವದ ಎತ್ತುಗಳೆಂದು ಇವುಗಳನ್ನು ಕುದಿಎರ್ಲು ಎಂದು ಗುರುತಿಸುತ್ತಾರೆ. ಗದ್ದೆಗೆ ಇಳಿಯು ಜೋಡೆತ್ತುಗಳು ಮೂರು ಸುತ್ತು ಬಂದು ಉಳುಮೆ ಆರಂಭವಾಗುತ್ತದೆ. ಈ ಎತ್ತುಗಳು ಪೂಕರೆ ಹಾಕುವ ಕಾರ್ಯ ಮುಕ್ತಾಯವಾಗುವವರೆಗೆ ಗದ್ದೆಯ ಒಂದು ಮೂಲೆಯಲ್ಲಿ ಇರುತ್ತವೆ. ಈ ಎತ್ತುಗಳನ್ನು ಗದ್ದೆಗೆ ಇಳಿಸುವ ಕಾರ್ಯವನ್ನು ಗುತ್ತು ಮನೆಗೆ ಮೂಲದ ಆಳುಗಳಾಗಿ ದುಡಿಯುವ ಆದಿದ್ರಾವಿಡ ಜನಾಂಗದ ವ್ಯಕ್ತಿ ಮಾಡುತ್ತಾನೆ. ಈತನನ್ನು ಬೊಟ್ಟದ ಎಂದು ಗುರುತಿಸುತ್ತಾರೆ. ಪೂಕರೆ ದಿನ ಮಾಡುವ ಉಳುಮೆ ಕೊನೆಯದಾಗಿರುತ್ತದೆ. ದೈವದ ಗದ್ದೆಯಾದುದರಿಂದ ಊರಿನ ಪ್ರತಿ ಮನೆಯ ಜೋಡು ಎತ್ತು ಕೋಣಗಳು ಉಳುಮೆಗೆ ಇಳಿಯುತ್ತವೆ. ಒಂದು ಕಡೆ ಗದ್ದೆ ಕೋರುವ ಕೆಲಸ ನಡೆಯುತ್ತಿದ್ದರೆ ಇನ್ನೊಂದೆಡೆ ಪೂಕರೆ ಕಂಬದ ತಯಾರಿ ನಡೆಯುತ್ತಿರುತ್ತದೆ.

ಪುತ್ತೂರು ತಾಲೂಕಿನ ಪೂಕರೆ ಆಚರಣೆಯಲ್ಲಿ ಕಂಬವನ್ನು ಗದ್ದೆಯಲ್ಲಿ ನೆಡುವ ಕ್ರಮ ಇದೆ. ಪೂಕರೆ ಕಂಬವನ್ನು ಕಂಬುಲದ ಮಧ್ಯ ಭಾಗದಲ್ಲಿ ನಿಲ್ಲಿಸುತ್ತಾರೆ.

ಕೊಂಡೆಪ್ಪಾಡಿ ಮತ್ತು ಇರಂತಾಜೆಯಲ್ಲಿ ಪೂಕರೆ ಆಚರಣೆ ವೇಳೆ ಬಿರ್ಮೆರ್ ದೈವಕ್ಕೆ ನೇಮ ನಡೆಯುತ್ತದೆ. ಇಲ್ಲಿ ಬಿರ್ಮೆರ್ ದೈವವನ್ನು ಪ್ರಮುಖ ದೈವವಾಗಿ ಗುರುತಿಸುತ್ತಾರೆ. ಸವಣೂರು ಪೂಕರೆಯಲ್ಲಿ ಸಾಂಕೇತಿಕ ಕೋಣಗಳ ಓಟ ಇದೆ.

ಇರಂತಾಜೆಯಲ್ಲಿ ನಡೆಯುವ ಪೂಕರೆ ಆಚರಣೆಯಲ್ಲಿ ಮಂಗನಿಗೆ ಕೋಲ ರೂಪದಲ್ಲಿ ಆರಾಧನೆ ನಡೆಯುತ್ತದೆ. ಇದನ್ನು ಹನುಮಂತನ ಕೋಲ ಎಂದು ಕರೆಯುತ್ತಾರೆ.

**೩.೪ ಬೆಳ್ತಂಗಡಿ**

ಬೆಳ್ತಂಗಡಿ ತಾಲೂಕಿನ ಅರುವ, ಬಂಗಾಡಿ ಮುಂತಾದೆಡೆ ಅರಸು ಕಂಬುಲಗಳಲ್ಲಿ ಪೂಕರೆ ಆಚರಣೆ ನಡೆಯುತ್ತದೆ. ಅರಸು ಕಂಬುಲಗಳಲ್ಲದೆ ಪಟ್ರಮೆ, ಕೊಕ್ಕಡ ಮುಂತಾದೆಡೆ ಪೂಕರೆ ಆಚರಣೆ ನಡೆಯುತ್ತದೆ.

ಅರಸು ಕಂಬುಲಗಳು ಪ್ರಧಾನವಾಗಿ ಪೂಕರೆ ಕಂಬುಲಗಳೇ ಆಗಿರುವುದರಿಂದ ಅರುವ ಇಲ್ಲವೆ ಈಗಿನ ಅಳದಂಗಡಿ ಕಂಬುಲದಲ್ಲಿ ದೈವಾರಾಧನೆಗೆ ಪ್ರಾಮುಖ್ಯತೆ ಇದೆ. ಇಲ್ಲಿನ ಪೂಕರೆಯಲ್ಲಿ ಕೊಡಮಣಿತ್ತಾಯ ಮತ್ತು ಸಾವಿರಕೈತ್ತಾಯ ದೈವಗಳಿಗೆ

ನೇಮ ನಡೆಯುತ್ತದೆ. ಈ ಪೂಕರೆಗಿಂತ ಭಿನ್ನವಾಗಿ ಬೆಳ್ತಂಗಡಿ ತಾಲೂಕಿನ ಕೊಕ್ಕಡದಲ್ಲಿ ಆಚರಣೆ ನಡೆಯುತ್ತದೆ. ಇಲ್ಲಿನ ಪೂಕರೆ ಆಚರಣೆ ಪಂಜಾಲ, ನಿಡ್ಲೆ, ಶಿಶಿಲ, ಗೋಳ್ತೋಟ್ಟು, ಶಿಬಾಜೆ, ಪಟ್ರಮೆ ಮತ್ತು ಬಲ್ಯ ಸೇರಿದಂತೆ ಒಟ್ಟು ಎಂಟು ಗ್ರಾಮಗಳ ಆಚರಣೆ. ಕೊಕ್ಕಡದ ಪೂಕರೆ ಆಚರಣೆಗೆ ಕೇಂದ್ರಬಿಂದು ಕೊಕ್ಕಡದ ಶಿವ ದೇವಸ್ಥಾನ. ಇದನ್ನು ವೈದ್ಯನಾಥ ಸ್ಥಾನ ಎಂದು ಕರೆಯುತ್ತಾರೆ. ಇಲ್ಲಿ ನಡೆಯುವ ಪೂಕರೆ ಆಚರಣೆಯ ನೇತೃತ್ವವನ್ನು ತೋಡಿಲ್ಲಾಯ, ಎಡಪಡಿತ್ತಾಯ, ಶಬರಾಯ, ಉಪ್ಪಾರ್ಣ, ಬಾಳ್ತಿಲಾಯ ಮನೆತನಗಳು ವಹಿಸುತ್ತವೆ.

ಕೊಕ್ಕಡದಲ್ಲಿ ಪೂಕರೆ ಆಚರಣೆಗೆ ಡಿಸೆಂಬರ್ ತಿಂಗಳಲ್ಲಿ ದಿನನಿಗದಿಯಾಗುತ್ತದೆ. ಆದರೆ ಸಿಂಗೊಡೆ ದಿನದಂದು ಅಂದರೆ ತಿಂಗಳ ಸಂಕ್ರಮಣದ ನಂತರದ ಮೊದಲ ದಿನದಂದು ಪೂಕರೆ ಆಚರಣೆ ನಡೆಯುತ್ತದೆ. ಆದರೆ ಈ ಸಿಂಗೊಡೆ ಸೋಮವಾರ ಬಂದರೆ ಸೋಮವಾರದ ಬದಲಿಗೆ ಮಂಗಳವಾರ ಪೂಕರೆ ಆಚರಣೆ ನಡೆಯುತ್ತದೆ. ಈ ಪರಿಸರದಲ್ಲಿ ಗೌಡ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರು ಯಾವುದೇ ಕಾರಣಕ್ಕೂ ಸೋಮವಾರ ಉಳುಮೆ ಮಾಡುವುದಿಲ್ಲ. ಇದು ಈ ಸಮುದಾಯ ಅನುಸರಿಸುವ ರೂಢಿ.

ಪೂಕರೆ ಆಚರಣೆಗೆ ವೈದ್ಯನಾಥ ಮಹಾದೇವರ ದೇವಸ್ಥಾನದಲ್ಲಿ ದಿನ ನಿಗದಿಮಾಡಿದ ನಂತರ ಗದ್ದೆಯನ್ನು ಉತ್ತು ಹದಮಾಡಲಾಗುತ್ತದೆ.

ಪೂಕರೆಗೆ ದಿನ ನಿಗದಿಯಾದ ನಂತರ ಆದಿದ್ರಾವಿಡ ಸಮುದಾಯದ ಪ್ರತಿನಿಧಿಗಳು ಡೋಲು ಬಾರಿಸಿಕೊಂಡು ಊರಿಡೀ ಮನೆಮನೆಗ ಹೋಗಿ ಪೂಕರೆ ಆಚರಣೆಯ ಸುದ್ದಿ ತಿಳಿಸುತ್ತಾರೆ. ಇದರ ನಂತರ ಕೊರಗನಿಗೆ ಕಟ್ಟಿದ ನಲಿಕೆ ಸಮುದಾಯದ ವ್ಯಕ್ತಿ ಊರಿನ ಪ್ರಮುಖ ಮನೆ ಮನೆಗಳಿಗೆ ತೆರಳಿ ಪೂಕರೆ ಆಚರಣೆ ಸುದ್ದಿ ಕೊಡುತ್ತಾನೆ. ಊರಿನವರು ತಮ್ಮ ದನಕರುಗಳಿಗೆ ಇಲ್ಲವೆ ತಮಗೆ ಬಂದಿರುವ ಸಂಕಷ್ಟಗಳನ್ನು ಆತನಲ್ಲಿ ನಿವೇದಿಸಿ ಆತನಿಂದ ಪ್ರಸಾದ ಪಡೆದು ಆತನಿಗೆ ಕಾಣಿಕೆ ನೀಡುತ್ತಾರೆ.

ಆಚರಣೆಗೆ ಎರಡು ದಿನಗಳಿರುವಾಗ ಊರಿನ ಆಚಾರಿ ಪೂಕರೆಯ ಕೆಲಸ ಆರಂಭಿಸುತ್ತಾರೆ. ತನ್ನ ಸಹಾಯಕರೊಂದಿಗೆ ಒಂಭತ್ತು ಅಂಕಣ ಇರುವ ಅಡಿಕೆ ಮರದ ಪೂಕರೆ ತಯಾರಿಸುತ್ತಾರೆ. ಕಂಬದ ತುದಿಯನ್ನು ಹತ್ತಿ ಇಲ್ಲವೆ ಹೊಂಗಾರೆ ಮರದಿಂದ ಮಾಡಿದ ಮುಗುಳಿಯಿಂದ ಜೋಡಿಸುತ್ತಾರೆ. ಈ ಮುಗುಳಿಯನ್ನು ಬಿಳಿ ಬಟ್ಟೆಯಿಂದ ಮುಚ್ಚಿ ಕಟ್ಟುತ್ತಾರೆ.

ಹಿಂದಿನ ದಿನ ಮೇರ ಸಮುದಾಯದವರು ಸೇಡಿಪೂಜುನೆ ವಿಧಿ ನಡೆಸುತ್ತಾರೆ. ನಂತರ ಕಂಬುಲ ಗದ್ದೆಯ ಸುತ್ತಲೂ ಸಾವಿರಾರು ಕೊಲ್ತುರಿ ದೀಪಗಳನ್ನು ಉರಿಸಲಾಗುತ್ತದೆ. ಈ ಸಂದರ್ಭದಲ್ಲಿ ಊರ ತಂತ್ರಿಯವರ ನೇತೃತ್ವದಲ್ಲಿ ಕಂಬುಲ ಗದ್ದೆಗೆ ಹಾಲು ಎರೆಯುವ ಸಂಪ್ರದಾಯ ನಡೆಯುತ್ತದೆ. ಮೊದಲಿಗೆ ಕಂಬುಲ ಗದ್ದೆಗೆ ತಂತ್ರಿಗಳು ಹಾಲು ಎರೆದ ನಂತರ ಊರಿನ ಪ್ರಮುಖರು ಮತ್ತು ನೆರೆದಿರುವ ಜನ ಹಾಲು ಎರೆಯುತ್ತಾರೆ.

ಪೂಕರೆ ಆಚರಣೆ ದಿನ ಬೆಳ್ಳಂಬೆಳಗ್ಗಿನಿಂದಲೇ ಸೊಪ್ಪು ಕಟ್ಟು ಹಾಕುವ ಸಂಪ್ರದಾಯ ನಡೆಯುತ್ತದೆ. ನಂತರ ಎಲ್ಲರೂ ಓಡಿಸುವ ಕೋಣಗಳ ಸಹಿತ ಉಳ್ಳಾಕುಲು ದೈವಗಳ ಚಾವಡಿಗೆ ಹೋಗಿನೆರೆಯುತ್ತಾರೆ. ಅಲ್ಲಿ ಪ್ರಾರ್ಥಿಸಿದ ನಂತರ ಕಂಬುಲ ಗದ್ದೆಯಲ್ಲಿ ಕೋಣಗಳ ಓಟ ನಡೆಯುತ್ತದೆ. ನಂತರ ಎಲ್ಲರೂ ದೈವಗಳ ಸ್ಥಾನಕ್ಕೆ ಹೋಗಿ ದೈವಗಳಿಗೆ ಕಟ್ಟಳೆ ಆಚರಣೆ ನಡೆಯುತ್ತದೆ. ಅಲ್ಲಿಂದ ದೈವಗಳು ವೈದ್ಯನಾಥ ಮತ್ತು ವಿಷ್ಣುಮೂರ್ತಿ ದೈವಗಳ ಭೇಟಿಗೆ ಬಂದು ದೇವರನ್ನು ಕರೆದುಕೊಂಡು ಪೂಕರೆ ಕಂಬುಲದ ಕಟ್ಟಪುಣಿಯ ದೇವರ ಕಟ್ಟೆಗೆ ಬರುತ್ತಾರೆ. ದೇವರು ಬರುವಾಗ ಮಡಿವಾಳ ಸಮುದಾಯದವರು ದೇವರ ಮೂರ್ತಿಯನ್ನು ಹೊತ್ತುಕೊಂಡು ಬರುವ ದೇವರ ಪೂಜಾರಿಗಳ ಎದುರು ಬಿಳಿಬಟ್ಟೆಯನ್ನು ಹಾಸಿಕೊಂಡು ಸಾಗುತ್ತಾರೆ. ಇದಕ್ಕೆ ದಳ್ಯೆಹಾಕುನೆ ಎಂದು ಕರೆಯುತ್ತಾರೆ. ಈ ಬಟ್ಟೆಯ ಮೇಲೆ ದೇವರನ್ನು ಹೊತ್ತುಕೊಂಡ ಬ್ರಾಹ್ಮಣ ಪೂಜಾರಿಗಳು ನಡೆದು ಬಂದು ದೇವರ ಮೂರ್ತಿಗಳನ್ನು ಕಂಬುಲದ ಬದುವಿನಲ್ಲಿರುವ ದೇವರ ಕಟ್ಟೆಯ ಮೇಲೆ ಇರಿಸಲಾಗುತ್ತದೆ. ಈ ಸಂದರ್ಭದಲ್ಲಿ ಭಂಡಾರಿ ಸಮುದಾಯದ ಊರಭಂಡಾರಿ ಪೂಕರೆ ಸಿಂಗರಿಸುವ ಕೆಲಸ ಮಾಡುತ್ತಾನೆ. ಪೂಕರೆಗೆ ಹಳದಿ ಹೂ, ಚೆಂಡು ಹೂ, ಕೇಪುಲ, ಪಾದೆಹೂ ಮತ್ತು ಪಿಂಗಾರವನ್ನು ಬಳಸುತ್ತಾರೆ. ಹಿಂಗಾರವನ್ನು ಅಂಕಣಗಳಿಗೆ ಕಟ್ಟಿ ಇತರ ಹೂಗಳನ್ನು ದಂಡೆ ಮಾಡಿ ಇಡೀ ಕಂಬಕ್ಕೆ ಸುತ್ತುತ್ತಾರೆ.

ಅಲಂಕಾರಗೊಂಡ ಪೂಕರೆಯನ್ನು ಮಲೆಕುಡಿಯರು ನಾಲ್ಕು ಚಕ್ರಗಳಿರುವ ಸುಮಾರು ಆರು ಅಡಿ ಅಗಲ, ನಾಲ್ಕು ಅಡಿಯಷ್ಟು ಎತ್ತರದ ಮರದ ಬಂಡಿಯಲ್ಲಿ ಇಟ್ಟುಕೊಂಡು ಪೂಕರೆ ಕಂಬುಲ ಗದ್ದೆಯ ನಡುವೆ ಹೋಗಿ ನಿಲ್ಲಿಸುತ್ತಾರೆ.

ಪೂಕರೆ ಹಾಕಿದ ನಂತರ ನಾಗನಿಗೆ ತಂಬಿಲ ನಡೆಯುತ್ತದೆ. ನಂತರ ಊರ ಪ್ರಮುಖರಿಗೆ ಮತ್ತು ಪೂಕರೆ ಆಚರಣೆಯಲ್ಲಿ ಪಾಲ್ಗೊಂಡ ಚಾಕರಿಯವರಿಗೆ ವೀಳ್ಯ ಅಡಿಕೆ ನೀಡಿ ಗೌರವಿಸಲಾಗುತ್ತದೆ. ಈ ವಿಧಿಯ ನಂತರ ದೇವರು ಮತ್ತೆ ಸ್ವಸ್ಥಾನಕ್ಕೆ ಮರಳುವ ಕ್ರಮ ನಡೆಯುತ್ತದೆ. ಮರುದಿನ ಪೂಕರೆ ಆಚರಿಸಿದ ಕಂಬುಲಕ್ಕೆ ಭತ್ತದ ಬೀಜ ಪಸರಿಸಲಾಗುತ್ತದೆ. ಹೀಗೆ ಬೆಳೆದ ಬೆಳೆಯನ್ನು ಕೊಯ್ದನಂತರ ಪೂಕರೆಯನ್ನು ತೆಗೆಯಲಾಗುತ್ತದೆ. ಪೂಕರೆ ಹಾಕುವ ಕೆಲಸದ ನೇತೃತ್ವವನ್ನು ಬಿಲ್ಲವ ಸಮುದಾಯದ ವ್ಯಕ್ತಿ ನೆರವೇರಿಸುತ್ತಾರೆ. ಇವರಿಗೆ ಬೋಂಟ್ರೆ ಎನ್ನುತ್ತಾರೆ.

ಕಂಬುಲದ ನಡುವೆ ಕಿರಿದಾದ ಅಮರೆಪುಣಿ ನಿರ್ಮಿಸಿ ಗದ್ದೆಯನ್ನು ಪೂಕರೆ ನೆಡಲು ಮತ್ತು ಕೋಣ ಓಡುವುದಕ್ಕೆ ವಿಭಾಗಿಸುತ್ತಾರೆ. ಕೊಕ್ಕಡದಲ್ಲಿ ಕಂಬಲ ಕೋರಿಯಂದು ಸಾಂಕೇತಿಕವಾಗಿ ಕೋಣಗಳ ಓಟ ಇದೆ . ಕಂಬಲ ಕೋರಿಯ ದಿನ ಪೂರ್ಣ ಪ್ರಮಾಣದಲ್ಲಿ ಕೋಣಗಳ ಓಟದ ಸ್ಪರ್ಧೆ ಇದ್ದಿರುವುದನ್ನು ಇದು ದೃಢಪಡಿಸುತ್ತದೆ. ಬೆಳ್ತಂಗಡಿ ತಾಲೂಕಿನ ಕೊಕ್ಕಡ ಕೋರಿ ಉತ್ಸವದಲ್ಲಿ ದೈವಾರಾಧನೆಗಿಂತ ದೇವಾರಾಧನೆಗೆ ಹೆಚ್ಚಿನ ಪ್ರಾಶಸ್ತ್ಯ ಕಂಡು ಬರುತ್ತದೆ.

ಕೊಕ್ಕಡದ ಕಂಬಲ ಗದ್ದೆಗೆ ಗೊಬ್ಬರ ಬಳಸುವ ಕ್ರಮ ಇಲ್ಲ. ಇಲ್ಲಿ ಗೊಬ್ಬರ ಬದಲಿಗೆ ಕೇವಲ ಹಸಿರು ಸೊಪ್ಪು ಬಳಸಲಾಗುತ್ತದೆ. ಊರವರು ತಮ್ಮ ಕಷ್ಟಗಳ ಪರಿಹಾರಕ್ಕೆ ಇಲ್ಲವೆ ತಮ್ಮ ಮನಸಿನ ಬೇಡಿಕೆಗಳನ್ನು ಈಡೇರಿಸಲು ಕಂಬಲ ಗದ್ದೆಗೆ ಸೊಪ್ಪು ಹಾಕುವ ಹರಿಕೆ ಹೊತ್ತು ಕೊಳ್ಳುತ್ತಾರೆ. ತಮ್ಮ ಬೇಡಿಕೆ ಈಡೇರಿದರೆ ಅವರು ಸೊಪ್ಪು ಕಟ್ಟುಗಳನ್ನು ಗದ್ದೆಗೆ ಹಾಕಿ ತಮ್ಮ ಹರಿಕೆ ತೀರಿಸಿಕೊಳ್ಳುತ್ತಾರೆ.

### ೩.೫ ಪ್ರಾದೇಶಿಕ ಸಾದೃಶ್ಯ ಮತ್ತು ವೈದೃಶ್ಯ

ತುಳುನಾಡಿನಾದ್ಯಂತ ಪೂಕರೆ ಉತ್ಸವಾಚರಣೆಗಳ ಆಶಯ ಒಂದೇ ಆಗಿದ್ದರೂ ಅದನ್ನು ನಡೆಸುವ ಕ್ರಮ ವಿಧಾನಗಳು ಕೆಲವು ಕಡೆಗಳಲ್ಲಿ ಸಾದೃಶ್ಯವಾಗಿದ್ದರೆ ಇನ್ನು ಕೆಲವು ಕಡೆಗಳಲ್ಲಿ ವಿಭಿನ್ನವಾಗಿದೆ.

ಬೆಳ್ತಂಗಡಿ ಪ್ರದೇಶದಲ್ಲಿನ ಪೂಕರೆ ಆಚರಣೆಯಲ್ಲಿ ದೇವಾರಾಧನೆಗೆ ಹೆಚ್ಚಿನ ಪ್ರಾಶಸ್ತ್ಯ ಇದೆ. ಕೊಕ್ಕಡದ ಕಂಬಲ ಗದ್ದೆಗೆ ಗೊಬ್ಬರ ಹಟ್ಟಿಗೊಬ್ಬರ ಬಳಸುವ ಕ್ರಮ ಇಲ್ಲ. ಇಲ್ಲಿ ಗೊಬ್ಬರ ಬದಲಿಗೆ ಕೇವಲ ಹಸಿರು ಸೊಪ್ಪು ಬಳಸಲಾಗುತ್ತದೆ. ಊರವರು ತಮ್ಮ ಕಷ್ಟಗಳ ಪರಿಹಾರಕ್ಕೆ ಇಲ್ಲವ ತಮ್ಮ ಮನಸಿನ ಬೇಡಿಕೆಗಳನ್ನು ಈಡೇರಿಸಲು ಕಂಬಲ ಗದ್ದೆಗೆ ಸೊಪ್ಪು ಹಾಕುವ ಹರಿಕೆ ಹೊತ್ತು ಕೊಳ್ಳುತ್ತಾರೆ. ತಮ್ಮ ಬೇಡಿಕೆ ಈಡೇರಿದರೆ ಅವರು ಸೊಪ್ಪು ಕಟ್ಟುಗಳನ್ನು ಗದ್ದೆಗೆ ಹಾಕಿ ತಮ್ಮ ಹರಿಕೆ ತೀರಿಸಿಕೊಳ್ಳುತ್ತಾರೆ. ಇಲ್ಲಿನ ಪೂಕರೆ ಆಚರಣೆ ವೇಳೆ ಕೋಣಗಳ ಓಟ ನಡೆಯುತ್ತದೆ. ಇತರ ಪ್ರದೇಶದ ಪೂಕರೆ ಆಚರಣೆಯಲ್ಲಿನ ವಿಧಿಗಳು ಇದಕ್ಕಿಂತ ಭಿನ್ನವಾಗಿವೆ.

ಬಂಟ್ವಾಳ ತಾಲೂಕಿನ ಪೂಕರೆ ಆಚರಣೆಯಲ್ಲಿ ಆಚರಣೆ ಕೇವಲ ಕಂಬುಲದಲ್ಲಿ ಪೂಕರೆ ಹಾಕುವುದಕ್ಕೆ ಸೀಮಿತಗೊಂಡಿಲ್ಲ. ಇಲ್ಲಿ ಪೂಕರೆ ಆಚರಣೆ ದೈವಗಳ ನೇಮಾರಾಧನೆಯ ಒಂದು ಭಾಗವಾಗಿ ಕಾಣಿಸಿಕೊಳ್ಳುತ್ತದೆ. ಅನಂತಾಡಿ, ಮಾಣಿ, ಅರೆಬೊಟ್ಟು, ಕಾಂಪ್ರಬೈಲ್, ನಡಿಬೈಲ್, ಅಡೆಕಳ, ಮೋರ್ಲ, ಅಮ್ಮೆಳ ಕುದ್ಕೋಳಿ ಮುಂತಾದೆಡೆ ನಡೆಯುವ ಪೂಕರೆ ಆಚರಣೆಯಲ್ಲಿ ಕಂಬುಲಕ್ಕೆ ಸಂಬಂಧಿಸಿದ ಬಿರ್ಮೆರ್, ಕೊರಗತನಿಯ ದೈವಗಳ ಹೊರತಾಗಿ ಊರದೈವಗಳ ನೇಮಕ್ಕೆ ಪ್ರಾಶಸ್ತ್ಯ ಇದೆ. ಈ ತಾಲೂಕಿನಲ್ಲಿ ಉಳ್ಳಾಲ್ದಿ ದೈವ ಪ್ರಧಾನ ದೈವವಾಗಿದ್ದರೂ ಕಂಬುಲಕೋರಿ ಸಂದರ್ಭದಲ್ಲಿ ಈ ದೈವಕ್ಕೆ ನೇಮ ಇರುವುದಿಲ್ಲ. ಆದರೆ ಊರಿನ ಎರಡು ಪ್ರಧಾನ ಪುರುಷದೈವಗಳಾದ ರಾಜಂದೈವಗಳ ನೇಮ ನಡೆಯುತ್ತದೆ. ಪೂಕರೆ ಆಚರಣೆಯ ಒಂದು ಪ್ರಮುಖ ಅಂಗವಾಗಿ ನಡೆಯುವ ಗಂಡಗಣೊಕುಲೆಗ್ ಬಳಸುನೆ ಕಾಡಿನ ಬದಿಯಲ್ಲಿ ನಡೆಯುವ ಸಾಮೂಹಿಕ ಮಾಂಸಾಹಾರ ಊಟದ ವಿಧಿ ಇತರೆಡೆ ಕಂಡು ಬರುವುದಿಲ್ಲ. ಇಲ್ಲಿನ ಗದ್ದೆಗಳಿಗೆ ಎತ್ತುಗಳನ್ನು ಉಳುವುದಕ್ಕೆ ಇಳಿಸುವ ಹರಿಕೆ ಹೇಳಿ ಅದು ಸಫಲವಾದರೆ ಪೂಕರೆ ಆಚರಣೆಯ ಕಂಬಲ ಕೋರುವ ದಿನ ಎತ್ತುಗಳನ್ನು ಗದ್ದೆಗೆ ಇಳಿಸುತ್ತಾರೆ. ಇಲ್ಲಿನ ಕಂಬುಗಳಲ್ಲಿ ಕೋಣಗಳ ಓಟ ಕಂಡು ಬರುತ್ತಿಲ್ಲ. ಮಾತ್ರವಲ್ಲ ಕಂಬುಲ ಆಚರಣೆಯಲ್ಲಿ ಪ್ರಮುಖವಾಗಿದ್ದ ಪನಿಕ್‌ಕುಲ್ಲುನೆ ಆಚರಣೆ ಕಂಡು ಬರುವುದಿಲ್ಲ.

ಬೆಳ್ತಂಗಡಿ ತಾಲೂಕಿನ ಕೊಕ್ಕಡದಲ್ಲಿನ ಪೂಕರೆ ಉತ್ಸವಕ್ಕೆ ಪಂಜಾಲ, ನಿಡ್ಲೆ, ಶಿಶಿಲ, ಗೋಳ್ತೋಟ್ಟು, ಶಿಬಾಜೆ, ಪಟ್ರಮೆ ಮತ್ತು ಬಲ್ಯ ಸೇರಿದಂತೆ ಒಟ್ಟು ೮ ಗ್ರಾಮಗಳು ಸೇರುತ್ತವೆ . ಅರೆಬೊಟ್ಟು, ಮಾಣಿ, ಅನಂತಾಡಿಗಳಲ್ಲಿ ಇದು- ಕೇವಲ ಗ್ರಾಮಕ್ಕೆ ಸಂಬಂಧ ಪಟ್ಟ ಆಚರಣೆಯಾಗಿ ಉಳಿದುಕೊಂಡಿದೆ. ಇತರೆಡೆಗಳಲ್ಲೂ ಇದು ಊರಿಗೆ ಸಂಬಂಧಪಟ್ಟ ಆಚರಣೆಯಾಗಿದೆ.

ಬಂಟ್ವಾಳ ತಾಲೂಕಿನ ಪೂಕರೆ ಆಚರಣೆಯಲ್ಲಿ ಉಳಿದುಕೊಂಡಿರುವ ಪೂಕರೆ ಕಂಬಲ ಆಚರಣೆಯ ಮೂಲ ಸೆಲೆಗಳು ದೈವಾರಾಧನೆಗೆ ಒತ್ತು ನೀಡುತ್ತದೆ. ಅದೇ ರೀತಿಯಲ್ಲಿ ಪುತ್ತೂರು ತಾಲೂಕಿನ ಪೂಕರೆ ಆಚರಣೆಯಲ್ಲಿಯೂ ದೈವಾರಾಧನೆಗೆ ಪ್ರಾಮುಖ್ಯತೆ ಇದೆ. ಕೊಕ್ಕಡದಲ್ಲಿ ಪ್ರಾಶಸ್ತ್ಯ ಇರುವುದು ದೇವಾರಾಧನೆಗೆ.

ಒಟ್ಟು ಕಂಬಲ ಕೋರಿ ಆಚರಣೆಯ ಕ್ರಮದಲ್ಲಿನ ಕೆಲವೊಂದು ವಿಧಾನಗಳು ಸಾದೃಶ್ಯವಾಗಿದ್ದರೆ ಹೆಚ್ಚಿನವು ವೈದೃಶ್ಯವಾಗಿರುತ್ತವೆ. ಉದಾಹರಣೆಗೆ ಪೂಕರೆ ಆಚರಣೆಯ ಕಂಬಲ ಗದ್ದೆಗಳಿಗೆ ಹಾಲು ಸುರಿಯುವ ಸಂಪ್ರದಾಯ ಇದು ಎಲ್ಲಾ ಕಂಬಲಗಳ ಆಚರಣೆಯಲ್ಲೂ ಸಾಮಾನ್ಯ ಪ್ರಕ್ರಿಯೆಯಾಗಿದೆ. ಅದೇ ರೀತಿಯಲ್ಲಿ ನಾಗನಿಗೆ ತನು ಸಲ್ಲಿಸುವುದು, ವೆಂಕಟರಮಣ ದೇವರಿಗೆ ಮುಡಿಪು ಕಟ್ಟುವುದು, ಕುದಿಎರುಮಾದವುನೆ , ಸಾಮೂಹಿಕ ಊಟ ಮುಂತಾದ ಪ್ರಕ್ರಿಯೆಗಳು ಸಾಮಾನ್ಯವಾಗಿದೆ. ಕಂಬಲ ಕೋರಿ ಆಚರಣೆಯಲ್ಲಿ ಬ್ಯಾಂಡ್- ವಾಲಗ, ಸಿಡಿಮದ್ದು ಬಳಕೆ ಎಲ್ಲಾ ಊರುಗಳಲ್ಲಿಯೂ ಸಮಾನವಾಗಿದೆ. ವಾಲಗ ತಂಡದಲ್ಲಿ ಕೊಂಬು, ಬಾಂಕೆ, ನಾಗಸ್ವರ, ಡೋಲು, ಬ್ಯಾಂಡ್, ಹೀಗೆ ವಿವಿಧ ಸಂಗೀತ ಪರಿಕರಗಳು ಮತ್ತು ಚರ್ಮವಾದ್ಯಗಳನ್ನು ಬಳಸಲಾಗುತ್ತದೆ.

ಅನಂತಾಡಿಯಲ್ಲಿ ಎರಡು ಪೂಕರೆಗಳಿದ್ದು ಅವುಗಳಲ್ಲಿ ಒಂದು ಪೂಕರೆಯನ್ನು ಬಂಡಿಯಲ್ಲಿಟ್ಟು ಪೂಕರೆ ಗದ್ದೆಯ ನಡುವೆ ಸ್ಥಾಪಿಸುತ್ತಾರೆ. ಇನ್ನೊಂದು ಸ್ಥಿರ ವ್ಯವಸ್ಥೆಯಲ್ಲಿ ನೆಡುವ ಪೂಕರೆ.

ಅರೆಬೊಟ್ಟು, ಮಾಣಿ, ಅನಂತಾಡಿ, ಕೊಕ್ಕಡ ಸೇರಿದಂತೆ ಹೆಚ್ಚಿನ ಕಂಬಲಕೋರಿ ಉತ್ಸವದಲ್ಲಿ ಊರವರು ಒಟ್ಟು ಸೇರಿ ಸಸ್ಯಾಹಾರ ಊಟ ಮಾಡುತ್ತಾರೆ. ಅದೇ ಸಜೀಪ, ಮೋರ್ಲ ಮುಂತಾದೆಡೆ ಮಾಂಸಾಹಾರ ಊಟ ನಡೆಯುತ್ತದೆ. ಅರೆಬೊಟ್ಟುವಿನಲ್ಲಿ ಗಂಡಗಣೊಕುಳೆಗೆ ಬಳಸುನೆ ದಿನ ಮಾಂಸಾಹಾರ ಊಟ ನಡೆಯುತ್ತದೆ.

ಪೂಕರೆ ಕಂಬಲ ಕೋರಿ ಆಚರಣೆಯಲ್ಲಿ ಪುತ್ತೂರು ತಾಲೂಕಿನ ಇರಂತಾಜೆಯಲ್ಲಿ ಹನುಮಂತನ ಮಂಗನನ್ನು ಪ್ರತಿನಿಧಿಸುವುವ ಕೋಲ ನಡೆಯುತ್ತದೆ. ತುಳುನಾಡಿನ ಬೇರೆಲ್ಲೂ ಪೂಕರೆ ಆಚರಣೆಯ ಸಂದರ್ಭ ಈ ಆಚರಣೆ ಇಲ್ಲ.

ಪೂಕರೆ ಕಂಬವನ್ನು ಕೊಕ್ಕಡ, ಅನಂತಾಡಿ, ಮೋರ್ಲ, ಸೂರಿಂಜೆ ಮುಂತಾದ ಕಡೆ ಕಂಗಿನ ಮರದಿಂದ ತಯಾರಿಸುತ್ತಾರೆ. ಅರೆಬೆಟ್ಟು, ಮಾಣಿಗಳಲ್ಲಿ, ಉಳ್ಳಾಲ

ಬೈಲುಗಳಲ್ಲಿ ಮರದಿಂದ ತಯಾರಿಸುತ್ತಾರೆ. ಕಂಬಲಗದ್ದೆಯ ಮಧ್ಯದಲ್ಲಿ ಪೂಕರೆ ನೆಡುವ ವ್ಯವಸ್ಥೆಯನ್ನು ಮರ ಇಲ್ಲವೆ ಸಿಮೆಂಟ್ ಅಥವಾ ಮಣ್ಣು ಇಲ್ಲವೆ ಕಲ್ಲುಗಳಿಂದ ತಯಾರಿಸಿರುತ್ತಾರೆ. ಅರೆಬೊಟ್ಟು, ಉಳ್ಳಾಲ ಬೈಲುಗಳ ಪೂಕರೆ ಕುತ್ತಿ ಸಿಮೆಂಟಿನಿಂದ ನಿರ್ಮಾಣಗೊಂಡಿದೆ. ಕೊಕ್ಕಡ, ಅನಂತಾಡಿಗಳಲ್ಲಿ ಕಲ್ಲಿನಿಂದ ನಿರ್ಮಾಣಗೊಂಡಿದೆ.

ಕೊಕ್ಕಡದಲ್ಲಿ ಸಿಂಗೊಡೆ ದಿನದಂದು ಪೂಕರೆ ಕಂಬಲ ಆಚರಣೆ ನಡೆಯುತ್ತದೆ. ಆದರೆ ಈ ಸಿಂಗೊಡೆ ಸೋಮವಾರ ಬಂದರೆ ಜಾತ್ರೆ ಮರುದಿನ ದಿನ ನಡೆಯುತ್ತದೆ ಇಲ್ಲಿ ಗೌಡ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರು ಸೋಮವಾರ ದಿನ ಯಾವುದೇ ಕಾರಣಕ್ಕೂ ಉಳುಮೆ ಮಾಡುವುದಿಲ್ಲ. ಈ ಕಟ್ಟುಪಾಡು ಇತರೆಡೆಯ ಪೂಕರೆ ಆಚರಣೆಗಳಲ್ಲಿ ಕಂಡು ಬರುವುದಿಲ್ಲ. ಹೀಗೆ ಒಂದು ಊರಿನ ಕಂಬಲಕೋರಿ ಆಚರಣೆ ಇನ್ನೊಂದು ಊರಿನ ಕಂಬಲಕೋರಿ ಆಚರಣೆಗಿಂತ ಭಿನ್ನ ಲಕ್ಷಣಗಳನ್ನು ಒಳಗೊಂಡಿರುವುದು ಕಂಡು ಬರುತ್ತದೆ. ಏಕೆಂದರೆ ಕಂಬಳ ಕಂಬಳಕೋರಿ ಆಚರಣೆಯ ಮೂಲ ಆಶಯ ಒಂದೇ ಆಗಿದ್ದರೂ ಆಚರಣಾ ವಿಧಿ ವಿಧಾನಗಳು ಒಂದು ಕಂಬಳಕೋರಿ ಉತ್ಸವದಿಂದ ಇನ್ನೊಂದು ಕಂಬಳಕೋರಿ ಉತ್ಸವಕ್ಕೆ ಬೇರೆಯಾಗಿರುತ್ತದೆ ಅಯಾ ಊರಿನ ಭೌಗೋಳಿಕ ಹಿನ್ನೆಲೆ, ಹಿಂದೆ ಆಚರಣೆಯನ್ನು ನಿರ್ವಹಿಸುತ್ತಿದ್ದವರ ದೂರದೃಷ್ಟಿ ಪ್ರಶಕ್ತ ಉತ್ಸವ ಆಚರಣೆ ಮಾಡುವವರ ಚಿಂತನೆ ಪರಿಸರದಲ್ಲಿ ಸಿಗುವ ಪ್ರಾಕೃತಿಕ ವಸ್ತುಗಳು, ಆರ್ಥಿಕ ವ್ಯವಸ್ಥೆ, ನಂಬಿಕೆ ಊರಿನಲ್ಲಿನ ಸಮುದಾಯಗಳ ಬಲವನ್ನು ಅವಲಂಬಿಸಿಕೊಂಡು ಕಂಬಳ ಕೋರಿಯ ವಿಧಿ ವಿಧಾನಗಳಲ್ಲಿ ಊರಿನಿಂದ ಊರಿಗೆ ವ್ಯತ್ಯಾಸ ಇರುವುದನ್ನು ಗಮನಿಸಬಹುದು. ಆದರೆ ಇದು ಕೃಷಿಕರ ಉತ್ಸವ. ಊರಿನ ಎಲ್ಲಾ ಸಮುದಾಯದವರ ಆರಾಧನಾ ಉತ್ಸವ ಎನ್ನುವುದು ಗಮನಾರ್ಹ.

# ಅಧ್ಯಾಯ ೪
# ಪೂಕರೆ ಆಚರಣೆಯ ಸಾಂಸ್ಕೃತಿಕ ಸಂರಚನೆಗಳು

೪.೦೧ ಕೈಲ್ ಕಡ್ಪುನೆ

೪.೦೨ ದೊಂಪ ಪಾಡುನೆ

೪.೦೩ ಸೇಡಿ ಪೂಜುನೆ

೪.೦೪ ಮುಡಿಪು ಕಟ್ಟುನೆ

೪.೦೫ ಕುದಿ ಎಲ್ರುಗ ನಾಲ್‌ಎರು ಮಾದವುನೆ/ಕುರಿ ಮೀಪವ್ನೆ

೪.೦೬ ಊರುಗು ಸುದ್ದಿ ಕೊರ್ಪುನೆ

೪.೦೭ ಪನಿಕುಲ್ಲುನೆ

೪.೦೮ ನಾಗರ್ಪುನೆ

೪.೦೯ ಭಂಡಾರ ದೆಪ್ಪುನೆ

೪.೧೦ ದರಿಕೈಕೊನ್ನೆ

೪.೧೧ ಭಂಡಾರ ಕೆರ್ಪುನೆ

೪.೧೨ ಕುದಿಎಲ್ರುಗ

೪.೧೩ ನಾಲೆರು ಕುರಿ ಮೀಪವುನೆ

೪.೧೪ ಪೂಕರೆ ಪಾಡುನೆ

೪.೧೫ ಬೆಮ್ಮೆರೆಗ್ ನೇಮ

೪.೧೬ ಮಾರಿ ಸೂಟೆ

೪.೧೭ ಊರ್ದ ದೈವೊಲೆನ ನೇಮ

೪.೧೮ ಆವಾರ ಕೈಕೊನ್ನೆ

೪.೧೯ ಕೋಳಿ ಅಂಕ ಇಲ್ಲವೆ ಕೋರಿ ಕಟ್ಟ

೪.೨೦ ಗಂಡಗಣೊಕುಲೆಗ್ ಬಳಸುನೆ

೪,೧ ವಾರ್ಷಿಕ ವರ್ತನ ಮತ್ತು ಸಾಂದರ್ಭಿಕತೆ

೪.೨ ಪೂಕರೆ ರಚನೆ

೪.೩ ಪೂಕರೆ ಆಚರಣೆ ನಂಬಿಕೆ ಮತ್ತು ಅರ್ಥ

ಪೂಕರೆ ಆಚರಣೆಯ ಸಾಂಸ್ಕೃತಿಕ ಸಂರಚಣೆಗಳನ್ನು ನೋಡಿದಾಗ ಗದ್ದೆಗಳನ್ನು ಕೃಷಿ ಚಟುವಟಿಕೆಗೆ ಸಿದ್ಧಗೊಳಿಸುವುದರಿಂದ ಹಿಡಿದು ಊರಿನ ಸಮುದಾಯಗಳನ್ನು ಒಟ್ಟುಗೂಡಿಸುವುದು, ಊರ ದೈವಗಳ ಆರಾಧನೆ, ಅನ್ನದಾನ, ಮನೆಜಗಳ ಊರಜಗಳಗಳನ್ನು ಒಟ್ಟಾಗಿ ಪರಿಹರಿಸಿಕೊಳ್ಳುವವರೆಗೆ ವಿಸ್ತರಿಸಿಕೊಂಡಿರುವುದು ಗೋಚರಿಸುತ್ತದೆ.

ಮೊದಲ ಬೆಳೆ ಎಣೆಲ್‌ನಲ್ಲಿ ಬೆಳೆದ ಭತ್ತದ ಅಕ್ಕಿಯಿಂದ ತಯಾರು ಮಾಡುವ ಹೊಸ ಅಕ್ಕಿಯ ಮೊದಲ ಊಟವನ್ನು ಊರವರು ಒಟ್ಟು ಸೇರಿ ಮಾಡುವ ಪುದ್ವಾರ್ ಊಟ ಮತ್ತು ಮೀನು, ಕೋಳಿ ಮಾಂಸದ ಊಟ ಮದು ಪುದ್ವಾರ್ ಊಟದ ಸಂಭ್ರಮವಾಗಿಯೂಈ ಪೂಕರೆ ಉತ್ಸವ ನಡೆಯುವುದು ಕಂಡುಬರುತ್ತದೆ. ಊರಿನ ಇತರ ಗದ್ದೆಗಳಿಗೆ ಹೋಲಿಸಿದರೆ ಕಂಬಳ ಗದ್ದೆ ಹೆಚ್ಚು ವಿಶಾಲವಾಗಿರುತ್ತದೆ. ಪೂಕರೆ ಕಂಬಳಗಳನ್ನು ಅಲ್ಲಿನ ಜನ ತಮ್ಮ ಊರಿನ ಸಮೃದ್ಧಿ ಮತ್ತು ಗೌರವದ ಸಂಕೇತಗಳಾಗಿ ಪರಿಗಣಿಸುತ್ತಾರೆ.

ಊರಿನ ಎಲ್ಲಾ ಕೃಷಿ ಚಟುವಟಿಕೆಗಳು ಮುಗಿದ ನಂತರ ನಾಟಿ ಮಾಡಲು ಸಾಧ್ಯವಾಗುವಂತೆ ಗದ್ದೆಯಲ್ಲಿ ಉಳುಮೆ ಮಾಡುತ್ತಾರೆ. ಇದಕ್ಕೆ ಊರಿನ ಎಲ್ಲಾ ರೈತರೂ ಕೈಜೋಡಿಸುತ್ತಾರೆ. ಸಾಮಾನ್ಯವಾಗಿ ಊರಿನ ಎಲ್ಲಾ ರೈತರು ತಮ್ಮ ಒಂದೊಂದು ಜತೆ ಎತ್ತು ಇಲ್ಲವೆ ಕೋಣವನ್ನು ಉಳುಮೆಗೆ ಈ ಗದ್ದೆಯಲ್ಲಿ ಇಳಿಸುತ್ತಾರೆ. ಪೂಕರೆ ಆಚರಣೆಯ ಗದ್ದೆಯನ್ನು ದೈವದ ಗದ್ದೆ ಎಂದು ಪರಿಗಣಿಸುತ್ತಾರೆ. ಬಹುಸಂಖ್ಯೆಯ ಜೋಡಿ ಎತ್ತುಗಳು ಹರಕೆಯ ಕಾರಣಕ್ಕೆ ಗದ್ದೆಯಲ್ಲಿ ಉಳುಮೆಗೆ ಇಳಿಯುತ್ತವೆ. ಭತ್ತದ ಸಸಿಗಳನ್ನು ನಾಟಿಮಾಡುವಂತೆ ಹದಮಾಡುತ್ತಾರೆ.

**ಪೂಕರೆ ಆಚರಣೆಯ ಕೆಲ ವಿಧಿಗಳನ್ನು ಈ ಕೆಳಗಿನಂತೆ ನಮೂದಿಸಬಹುದು**

### ೪.೦೧ ಕೈಲ್ ಕಡ್ಪುನೆ

ಪೂಕರೆ ಆಚರಣೆಯ ಕೆಲ ದಿನಕ್ಕೆ ಮೊದಲು ಗುತ್ತು ಮನೆಯವರು ಮತ್ತು ಕಟ್ಟಳೆಯವರು ಒಟ್ಟು ಸೇರಿಬಾಳೆಗೊನೆ ಕಡಿದು ತಂದು ಅದನ್ನು ದೈವಚಾವಡಿಯಲ್ಲಿ ಬಂದು ಕಟ್ಟುತ್ತಾರೆ.

### ೪.೦೨ ದೊಂಪ ಪಾಡುನೆ

ಕೈಲು ಕಡಿದ ನಂತರ ಊರವರು ಬಂದು ಕೊಡಿಯಡಿ ಸಿದ್ಧಮಾಡುತ್ತಾರೆ. ಚಪ್ಪರ ದೊಂಪದಲ್ಲಿ ಪೂ ಸಿಂಗಾರತನ ಎನ್ನುವ ವಿಶಿಷ್ಟ ಅಲಂಕಾರವನ್ನು ಮಾಡಿರುತ್ತಾರೆ. ದೈವದ ಆರಾಧನಾಮುಖ, ಆಯುಧಗಳು ಮತ್ತು ಸಂಬಂಧಿತ ವಸ್ತುಗಳಿರುವ ಭಂಡಾರವನ್ನು ತಂದು ಇದೇ ಕೊಡಿಯಡಿಯಲ್ಲಿ ಅಲಂಕೃತ ವ್ಯವಸ್ತೆಯಡಿಯಲ್ಲಿ ಏರಿಸಿ ಇಡಲಾಗುತ್ತದೆ. ಪೂಕರೆ ಗದ್ದೆಯ ಹತ್ತಿರದಲ್ಲಿ ದೈವ ನೇಮಕ್ಕೆ ಸಿದ್ಧವಾಗುವುದಕ್ಕೆ ಈ ಕೊಡಿಯಡಿ ಪ್ರಧಾನ ನೆಲೆಯಾಗುತ್ತದೆ.

## ೪.೦೩ ಸೇಡಿ ಪೂಜುನೆ

ಪೂಕರೆ ಕಂಬುಲ ಆಚರಣೆಗೆ ಗದ್ದೆಯನ್ನು ಉತ್ತು ಹದವಮಾಡಿ ಸಿದ್ದಗೊಳಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ' ಉತ್ಸವಗದ್ದೆಯ ಬದುಗಳನ್ನು ಸವರಿ ಸ್ವಚ್ಚಗೊಳಿಸುತ್ತಾರೆ. ನಂತರ ಗದ್ದೆಯ ಬದುಗಳನ್ನು ಕೆಸರು ಮಣ್ಣಿನಿಂದ ಸವರಿ ಸುಂದರಗೊಳಿಸುತ್ತಾರೆ. ಇದಕ್ಕೆ ಪುಣಿ ಪೂಜುನೆ ಎಂದುಕರೆಯುತ್ತಾರೆ. ಈ ರೀತಿ ಕಂಬುಲವನ್ನು ಅಗತ್ಯದಂತೆ ಮೊದಲ ಹಂತದಲ್ಲಿ ಸಿದ್ದಪಡಿಸಲಾಗುತ್ತದೆ.

ಕಂಬಲಕೋರಿ ಉತ್ಸವದ ಹಿಂದಿನ ದಿನ ಕಂಬಲದ ಬದುವಿನ ತೆಂಗಿನ ಮರಗಳಿಗೆ ಆಳೆತ್ತರದಲ್ಲಿ ಸಮಾನಾಂತರವಾಗಿ ಅಡ್ಡಕ್ಕೆ ವೃತ್ತಾಕಾರವಾಗಿ ಮೂರು ನಾಮಗಳನ್ನು ಜೇಡಿ ಮಣ್ಣಿನಿಂದ ಬರೆಯಲಾಗುತ್ತದೆ. ಮೇಲಿನ ಮತ್ತು ಕೆಳಗಿನ ನಾಮಗಳು ಹಳದಿ ಬಿಳಿ ಮಿಶ್ರಿತವಾಗಿದ್ದರೆ ಮಧ್ಯದ ನಾಮ ಕೆಂಪು ಬಣ್ಣದ್ದಾಗಿರುತ್ತದೆ. ಕಂಬುಲ ಸುತ್ತಲಿನ ಎಲ್ಲಾ ತೆಂಗಿನ ಮರಗಳಿಗೂ ಈ ರೀತಿ ಸೇಡಿ ಬಳಿಯುತ್ತಾರೆ. ಇದು ಗದ್ದೆಯ ಬದು ಯಾ ಕಟ್ಟಪುಣಿಯ ಚಂದವನ್ನು ಹೆಚ್ಚಿಸುತ್ತದೆ. ಇದಕ್ಕೆ ಸೇಡಿ ಪೂಜುನೆ ಎನ್ನುತ್ತಾರೆ. ಸಾಮಾನ್ಯವಾಗಿ ಪೂಕರೆ ಕಂಬಳದ ಬದುಗಳನ್ನು ಬಹಳ ಎತ್ತರವಾಗಿ ಮತ್ತು ವಿಶಾಲವಾಗಿ ನಿರ್ಮಿಸಿರುತ್ತಾರೆ.

## ೪.೦೪ ಮುಡಿಪು ಕಟ್ಟುನೆ

ಮರುದಿನ ಬೆಳಗ್ಗೆ ದೈವದ ಚಾವಡಿಯಲ್ಲಿ ತಂತ್ರಿಗಳು (ತುಳು ಬ್ರಾಹ್ಮಣರು) ಗಣಹೋಮಮಾಡಿ ಚಾವಡಿ ಶುದ್ದಮಾಡಿವ ಪ್ರಕ್ರಿಯೆ ಮಾಡುತ್ತಾರೆ(ಕೆಲವೆಡೆ ಈ ಕ್ರಮ ಇರುವುದಿಲ್ಲ). ತಿರುಪತಿಗೆ ಮುಡಿಪು ಹಣ ತೆಗೆದಿರಿಸುತ್ತಾರೆ. ಇದು ದಾಸಯ್ಯನ ನೇತೃತ್ವದಲ್ಲಿ ನಡೆಯುತ್ತದೆ. (ಊರಿನ ಮನೆಗಳಿಗೆ ತೆರಳಿ ಅಲ್ಲಿ ಶಂಖ ಊದಿ ಜೀವನ ಸಾಗಿಸುವ ದಾಸಯ್ಯ ಸಮುದಾಯ).

## ೪.೦೫ ಕುದಿ ಎರ್ಲು ಕಂಡೊಗ್ ಜಪ್ಪುನೆ

**ಊರಿನ ಪ್ರಮುಖ ಎತ್ತು ಜೋಡಿಯೊಂದನ್ನು ಕುದಿ ಎರ್ಲು ಎಂದು ನಿರ್ಧರಿಸುತ್ತಾರೆ. ಕಂಬ ಗದ್ದೆಯನ್ನು ಮೊದಲೇ ಉತ್ತು ಹದ ಮಾಡುತ್ತಾರೆ. ಕೊಡಿಯಡಿಯಲ್ಲಿ ಭಂಡಾರ ಏರಿಸಿದ ನಂತರ** ಈ ಜೋಡಿ ಎತ್ತು–ಕೋಣಗಳನ್ನು ಕಂಬಲ ಗದ್ದೆಗೆ ಇಳಿಸುತ್ತಾರೆ. ಕುದಿ ಎರ್ಲು ಎಲ್ಲಾ ಜೋಡಿಗಳಿಗಿಂತ ಮುಂದಿರುತ್ತದೆ.

ಆರಂಭದಲ್ಲಿ ಉಳುವ ಕುದಿ ಎರ್ಲುಗಳಿಗೆ ಕುರ್ದಿ(ಅರಿಶಿನ ಸುಣ್ಣ ಮಿಶ್ರಿತ) ನೀರು ಸಿಂಪಡಿಸಿ ಅವುಗಳನ್ನು ಶುದ್ದ ಮಾಡಿ ಅವುಗಳ ಎದುರು ದೀಪ ಬೆಳಗಿಸುತ್ತಾರೆ. ಕುದಿ ಎರ್ಲು ಬಗ್ಗೆ ಹೆಚ್ಚಿನ ಕಾಳಜಿ ಮತ್ತು ಆರೈಕೆ ಮಾಡುತ್ತಾರೆ. ನಂತರ ಕೋರುವ ಉಳುಮೆ ಮಾಡುತ್ತಾರೆ.

## ೪.೦೬ ಊರುಗು ಸುದ್ದಿ ಕೊರ್ಪುಣೆ

ಕೈಲು ಕಡಿದ ಮೂರನೇ ದಿನ ಕೊರಗತನಿಯ ದೈವಕ್ಕೆ ಕಟ್ಟಿದ ಕಲಾವಿದ ಊರಿಗೆ ಕಂಬುಲ ಕೋರಿಯ ಸುದ್ದಿ ಮುಟ್ಟಿಸಿ ಕಾಣಿಕೆ ಪಡೆಯುತ್ತಾನೆ. ಈ ಪ್ರಕ್ರಿಯೆ ಪೂಕರೆ ಆಚರಣೆ ನಡೆಯುವ ದಿನದವರೆಗೂ ನಡೆಯುತ್ತದೆ. ಈ ವೇಷಕ್ಕೆ ಸಂಪ್ರದಾಯದಂತೆ ಮೈತುಂಬಾ ಕಪ್ಪುಬಣ್ಣ ಬಳಿದಿರುತ್ತಾರೆ. ಅಲ್ಲಲ್ಲಿ ಬಿಳಿಯ ಚುಕ್ಕೆಗಳಿರುತ್ತವೆ. ತಲೆಗೆ ಮುಟ್ಟಾಲೆ ಇಡುತ್ತಾರೆ. ಕೈಯಲ್ಲಿ ಒಂದು ಕೋಲು ಇರುತ್ತದೆ. 'ಪೆರಾರ್ದೆ ಐನೆಕ್ಕ್ ಕಂಬುಲಕೋರಿ ಕೂ' ಎಂದು ಹೇಳಿ ಕುಣಿಯುತ್ತಾನೆ.

## ೪.೦೭ ಪನಿಕುಲ್ಲುನೆ

ಈ ಪದ್ಧತಿ ಕಂಬುಲ ಆಚರಣೆಯ ಹಿಂದಿನ ರಾತ್ರಿ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಅವರು ತಮ್ಮ ಯಜಮಾನ ಇಲ್ಲವೆ ಆತನ ಮನೆಯವರ ಮೇಲೆ ಏನಾದರೂ ಕೋಪಗಳಿದ್ದರೆ ಬೈಯ್ಯುವುದು, ಯಜಮಾನನ ಮನೆಯವರ ಲೈಂಗಿಕ ಗುಟ್ಟುಗಳಿದ್ದರೆ ಅದನ್ನು ಹೇಳಿಕೊಂಡು ಖುಷಿಪಡುವುದು ಮಾತ್ರವಲ್ಲ ಈ ಗುಂಪಿನಲ್ಲಿ ಕೇವಲ ಗಂಡಸರು ಮಾತ್ರ ಇರುವುದರಿಂದ ಗಂಡು ಹೆಣ್ಣುಗಳ ರೀತಿಯಲ್ಲಿ ನಾಟಕ ಮಾಡಿ ಗುಂಪಿಗೆ ಮನರಂಜನೆ ನೀಡುವುದು ಮಾಡುತ್ತಾರೆ. ಕಂಬುಲ ಆಚರಣೆಯ ಹಿಂದಿನ ದಿನ ಆಚರಣೆಗೆ ಸಿದ್ಧ ಪಡಿಸಿರುವ ಕಂಬುಲಕ್ಕೆ ಯಾವುದೇ ವ್ಯತ್ಯಯಗಳಾಗದಂತೆ ಕಾಯುವ ವಿಧಿಯಾಗಿ ಇದು ಗೋಚರಿಸುತ್ತದೆ. ವರ್ತಮಾನದಲ್ಲಿ ಇದು ಕೇವಲ ಕಟ್ಟಳೆಯಾಗಿ ಮಾತ್ರ ಆಚರಣೆಯಾಗುತ್ತಿದೆ. ಅರೆಬೊಟ್ಟು, ಮಾಣಿ, ಅನಂತಾಡಿ, ಕೊಕ್ಕಡ, ಉಳ್ಳಾಲಗುತ್ತು ಸೇರಿದಂತೆ ದಕ್ಷಿಣ ಕನ್ನಡದ ಹೆಚ್ಚಿನ ಪೂಕರೆ ಆಚರಣೆಯಲ್ಲಿ ಪನಿಕುಲ್ಲುನೆ ಆಚರಣೆ ಕಂಡು ಬರುವುದಿಲ್ಲ. ದ್ವೇಷ,ಅಸೂಯೆಯಿಂದ ಒಂದು ಊರಿನ ಪೂಕರೆಯನ್ನು ಇನ್ನೊಂದು ಊರಿನವರು ಹಾಳುಗೆಡಹುವುದು ಕದ್ದುಕೊಂಡುಹೋಗುವುದು ಕೋಣ ಓಡಿಸುವ ಕಂಬುಲಕ್ಕೆ ಅನಪೇಕ್ಷಿತ ವಸ್ತುಗಳನ್ನು ಹಾಕುವುದನ್ನು ತಡೆಯಲು ರಕ್ಷಣೆಗೆ ಪನಿಕುಲ್ಲುನೆ ವ್ಯವಸ್ಥೆ ಇದ್ದುದು ತಿಳಿದು ಬರುತ್ತದೆ.

## ೪.೦೮ ನಾಗರ್ಪುಣೆ/ನಾಗಣಿಪುನೆ

ಈ ನಾಗಬನಗಳು ಸಾಮಾನ್ಯವಾಗಿ ಕಂಬಲ ಗದ್ದೆಯ ಒಂದು ಮೂಲೆಗೆ ಹೊಂದಿಕೊಂಡಂತೆ ಇರುತ್ತದೆ. ಈ ರೀತಿಯಲ್ಲಿ ನಾಗನಿಗೆ ಪೂಜೆ ಸಲ್ಲಿಸುವುದನ್ನು ನಾಗರ್ಪುಣೆ ಎಂದು ಕರೆಯುತ್ತಾರೆ. ಪೂಕರೆ ಹಾಕಿದ ನಂತರ ಈ ವಿಧಿ ನಡೆಯುತ್ತದೆ.

ಸ್ಥಳದ ನಾಗ, ನಾಗಕನ್ನಿಕೆ ನಾಗಬ್ರಹ್ಮನ ಕಲ್ಲುಗಳನ್ನು ಸ್ವಚ್ಛಮಾಡಿ ನಂತರ ಅದಕ್ಕೆ ಅರಿಶಿನ ಬಳಿದು ಆನಂತರ ಎಳನೀರು ಮತ್ತು ದನದ ಹಾಲಿನಿಂದ ಅಭಿಷೇಕ ಮಾಡುವ ಆರಾಧನೆಗೆ ತನುಎರೆಯುವುದು ಎಂದು ಕರೆಯುತ್ತಾರೆ. ನಾಗನಿಗೆ ಹಿಂಗಾರ ಹೂವಿನಿಂದ ಅಲಂಕಾರ ವಿಶೇಷ ಎಂದು ತುಳುನಾಡಿನ ಜನರ ನಂಬಿಕೆ. ದೈವಾರಾಧನೆಯ ಕೇಂದ್ರ ಸ್ಥಾನ ಚಾವಡಿ ಜಾಗಕ್ಕೆ ಪೂರಕವಾಗಿ ಹತ್ತಿರದಲ್ಲಿಯೇ ನಾಗವನ ಇರುತ್ತದೆ.

### ೪.೦೯ ಭಂಡಾರ ದೆಪ್ಪುನೆ

ಊರ ದೈವದ ಪ್ರಮುಖ ಆರಾಧನಾ ಕೇಂದ್ರದಿಂದ ದೈವದ ಆರಾಧನಾ ಪರಿಕರಗಳಾದ ಮುಗ, ಕಡ್ಸಳೆ, ಚಿನ್ನಾಭರಣಗಳನ್ನು ಮೂಲಸ್ಥಾನದಿಂದ ತೆಗೆದು ಪಲ್ಲಕ್ಕಿಯಲ್ಲಿಡುವುದನ್ನು ಭಂಡಾರ ದೆಪ್ಪುನೆ ಎಂದು ಕರೆಯುತ್ತಾರೆ. ನಂತರ ಈ ಪಲ್ಲಕ್ಕಿಯನ್ನು ಇಬ್ಬರು ಹೆಗಲಲ್ಲಿ ಹೊತ್ತುಕೊಂಡು ದೈವದ ಮಾಣಿಗಳು ಊರ ಗಡಿಹಿಡಿದವರು ಬ್ಯಾಂಡ್, ಓಲಗದೊಂದಿಗೆ ಊರ ಜನರು ಒಟ್ಟು ಸೇರಿ ದರಿ ಕೈಗೊಳ್ಳುತ್ತಾ ಮೆರವಣಿಗೆಯಲ್ಲಿ ತೆಗೆದುಕೊಂಡು ಬರುವುದಕ್ಕೆ ಭಂಡಾರ ಬರ್ಪುನೆ ಎಂದು ಕರೆಯುತ್ತಾರೆ.

### ೪.೧೦ ದರಿಕೈಕೊನ್ಪೆ

ಊರವರು, ದೈವದ ಪಾತ್ರಿಗಳು, ದೈವಕ್ಕೆ ಸಂಬಂಧಿಸಿದ ಆಭರಣ ಮುಗ ಆಯುಧಗಳನ್ನು ಇಟ್ಟಿರುವ ಪಲ್ಲಕ್ಕಿ, ಪಂಚ ದೀವಟಿಗೆ ,ಪಂಜು, ಬಿರುದು ಬಾವಲಿಗಳೊಂದಿಗೆ ಸಿಡಿಮದ್ದಿನ ಶಬ್ದದೊಂದಿಗೆ, ಕೊಂಬು ಬಾಂಕೆ, ನಗಾರಿ, ಬ್ಯಾಂಡ್, ಓಲಗದೊಂದಿಗೆ ಭಂಡಾರ ಬರುವ ದಾರಿಯಲ್ಲಿ ಅಲ್ಲಲ್ಲಿ ದರಿ ನಿರ್ಮಿಸಿ ತಿಬಿಲ ದೀಪ ಹಚ್ಚಿಡುವ ದರಿಕಂಬಗಳನ್ನು ನಿರ್ಮಿಸಿರುತ್ತಾರೆ. ಇದನ್ನು ಮಾವಿನ ಎಲೆಯಿಂದ ಅಲಂಕರಿಸಿರುತ್ತಾರೆ. ಇಲ್ಲಿ ದೈವದ ಪಾತ್ರಿಗಳು ಬೆಂಕಿಯ ದೊಂದಿ ಜೀಟಿಗೆಯೊಂದಿಗೆ ಈ ದರಿಯಲ್ಲಿ ಬರುತ್ತಾರೆ. ಹೀಗೆ ದಾರಿಯುದ್ದಕ್ಕೂ ಹಣತೆ ದೀಪದ ಸಾಲು ದರಿಗಳ ನಡುವೆ ಭಂಡಾರ ಸಾಗುತ್ತದೆ. ಸಾಮಾನ್ಯವಾಗಿ ದೈವದ ಭಂಡಾರ ಸಾಗುವಾಗ ಆ ಹಾದಿಯಲ್ಲಿ ಯಾರ ಜಾಗ ಇರುತ್ತದೋ ಆ ಜಾಗದವರು ಈ ದರಿಯನ್ನು ನಿರ್ಮಿಸಿರುತ್ತಾರೆ.

### ೪.೧೧ ಭಂಡಾರ ಕೆರ್ಪುನೆ

ಬಂದ ಭಂಡಾರವನ್ನು ಕೊಡಿಯಡಿಯಲ್ಲಿ ಇರಿಸುವುದಕ್ಕೆ ಭಂಡಾರ ಕೆರ್ಪುನೆ ಎನ್ನುತ್ತಾರೆ. ಹೀಗೆ ಭಂಡಾರವನ್ನು ತಂದು ಸಿಂಗರಿಸಿದ ಚಪ್ಪರದಲ್ಲಿ ಇಟ್ಟನಂತರ ಆ ಪರಿಕರಗಳ ಎದುರು ದೀಪ ಹಚ್ಚಿ ದೂಪ ಎತ್ತಿ ನಂತರ ಪೂಕರೆ ಹಾಕುವ ವಿಧಿವಿಧಾನಗಳು ಸಂಪನ್ನಗೊಳ್ಳುತ್ತವೆ.

### ೪.೧೨ ಕುದಿಎರ್ಲು

ಪೂಕರೆ ಗದ್ದೆ ಕೋರುವ ದಿನ ಆರಂಭದಲ್ಲಿ ಇಳಿಯುವ ಗುತ್ತಿನ ಮನೆಯ ಎತ್ತುಗಳಿಗೆ ಕುದಿ ಎರ್ಲು ಎಂದು ಕರೆಯುತ್ತಾರೆ. ಈ ಕುದಿ ಎತ್ತುಗಳು ಉಳುಮೆ ಆರಂಭಿಸುವುದಕ್ಕೆ ಮಾತ್ರ ಸೀಮಿತ. ಕುದಿ ಎನ್ನುವ ಪದಕ್ಕೆ ಸಂದರ್ಭಾನುಸಾರ ಮಾತ್ರ ಉಳುಮೆಗೆ ಬಳಸುವ ಎತ್ತುಗಳೆನ್ನುವ ಅರ್ಥ. ಇದು ದೈವದ ಹೆಸರಿನಲ್ಲಿ ನಿಗದಿಪಡಿಸಿದ ಎತ್ತುಗಳಾಗಿದ್ದು ಕಂಬಳ ಕೋರಿಯ ದಿನ ಮಾತ್ರ ಉಳುಮೆ ಆರಂಭಿಸುವುದಕ್ಕೆ ಸೀಮಿತವಾದ ಎತ್ತುಗಳಾಗಿರುತ್ತವೆ.

ಊರಿನ ಇತರ ಜೋಡಿ ಎತ್ತುಗಳ ಜೊತೆಗೆ ಇವುಗಳನ್ನು ಉಳುಮೆಗೆ ಬಳಸುವ ಪದ್ಧತಿ ಇಲ್ಲ. ಪೂಕರೆ ಗದ್ದೆಯ ಉಳುಮೆ ಮುಗಿಯುವವರೆಗೆ ಈ ಎತ್ತುಗಳು ಗದ್ದೆಯ ಒಂದು ಮೂಲೆಯಲ್ಲಿ ನಿಂತಿರುತ್ತವೆ. ಆರಂಭದ ಹಲಗೆ ಹಾಕುವ ಕಾರ್ಯದಲ್ಲಿ ಇವುಗಳನ್ನು ಬಳಸಲಾಗುತ್ತದೆ.

**೪.೧೩. ನಾಲೆರು ಕುರಿ ಮೀಪವುನೆ**


ನಾಲೆರು ಕುರಿ ಮೀಪವುನೆ ಪೂಕರೆ ಆಚರಣೆಯ ಒಂದು ಪ್ರಮುಖ ವಿಧಿ. ಈ ಸಂದರ್ಭದಲ್ಲಿ ಕಂಬುಲ ಗದ್ದೆಯಲ್ಲಿ ದೀಪ ಬೆಳಗಿಸುತ್ತಾರೆ. ನೊಗಕಟ್ಟಿದ



*ಅರೆಬೊಟ್ಟುವಿನಲ್ಲಿ ನಾಲ್ಎರು ಕುರಿ ಮೀಪವುನೆ ದೃಶ್ಯ*

ಹಲವು ಜತೆ ಎತ್ತುಗಳಿಗೆ ನೇಗಿಲುಗಳನ್ನು ಕಟ್ಟಿ ಕಂಬುಲಗದ್ದೆಗೆ ಇಳಿಸುತ್ತಾರೆ. ಇದೇ ಸಮಯದಲ್ಲಿ ಕಂಬಲಗದ್ದೆಯ ಬದುವಿನಲ್ಲಿ ಬೆಮ್ಮೆರ್ ಕಾಣಿಸಿಕೊಳ್ಳುತ್ತಾನೆ. ಕೊರಗತನಿಯ ದೈವವೂ ಅಲ್ಲಿ ಇರುತ್ತಾನೆ.

ಗದ್ದೆಗಿಳಿದ ಎತ್ತುಗಳಲ್ಲಿ ಊರಿನ ಪ್ರಮುಖ ಮನೆಗಳ ಎತ್ತುಗಳ ಜೊತೆಗೆ ಹರಕೆ ಹೊತ್ತುಕೊಂಡ ಮನೆಯವರ ಎತ್ತುಗಳೂ ಇರುತ್ತವೆ. ನಂತರ ಸಾಂಕೇತಿಕ ಉಳುಮೆ ನಡೆಯುತ್ತದೆ. ಸಾಂಕೇತಿಕ ಉಳುಮೆ ನಡೆದ ನಂತರ ಕಂಬಲ ಗದ್ದೆಯಲ್ಲಿ ತೆಂಗಿನ ಗರಿಯಿಂದ ಮಾಡಿದ ಬಲಿಪಾತ್ರೆಯಲ್ಲಿ ಅನ್ನ ಇಟ್ಟು ಅದರ ಸುತ್ತಲೂ



*ಊರಿಗೆ ಕಂಬುಲ ಕೋರಿ ಆಚರಣೆಯ ಸುದ್ದಿ ಕೊಡುವ ಕೊರಗತನಿಯ*

ಕೊಳ್ತುರಿದೀಪಗಳನ್ನು ಹಚ್ಚುತ್ತಾರೆ. ಬಲಿಗೆ ಸುತ್ತು ಬಂದು ಅರಿಶಿನ ಸುಣ್ಣ ಮಿಶ್ರಿತ ಕುರ್ದಿ ನೀರನ್ನು ಗದ್ದೆಗೆ ಇಳಿದಿರುವ ಎತ್ತುಗಳ ಸಮೇತ ಕಂಬಲ ಗದ್ದೆಯ ಬದುವಲ್ಲಿ ನಿಂತಿರುವ ಎಲ್ಲರಿಗೂ ತಳಿಪು ಕಾರ್ಯ ನಡೆಯುತ್ತದೆ. ಇದನ್ನು ಊರಿನ ಪ್ರಮುಖ ದೈವದ ಪಾತ್ರಿ ನಿರ್ವಹಿಸುತ್ತಾನೆ. ಕೆಲವೆಡೆ ಭಂಡಾರಿ ನೆರವೇರಿಸುತ್ತಾನೆ

### ೪.೧೪ ಪೂಕರೆ ಪಾಡುನೆ

ಕಂಬಲ ಆಚರಣೆಯಲ್ಲಿ ಮೊದಲಿಗೆ ಊರಿಗೆ ವಿಚಾರ ತಿಳಿಸಿರುವ ಕೊರಗಜ್ಜ ಪೂಕರೆ ಹಾಕುವ ಸಂದರ್ಭದಲ್ಲಿ ನಿರ್ದೇಶನಗಳನ್ನು ನೀಡುತ್ತಾನೆ. ಪೂಕರೆಯನ್ನು ಮೂರು ಸುತ್ತು ತಿರುಗಿಸಿದ ನಂತರ ನಿರ್ದಿಷ್ಟ ಸಮುದಾಯದ ಯುವಕರು (ಬೇರೆ ಬೇರೆ ಊರುಗಳಲ್ಲಿ ಬೇರೆ ಸಮುದಾಯಗಳಿಗೆ ಈ ಬಗೆಗಿನ ಅಧಿಕಾರ ಕರ್ತವ್ಯ ಇರುತ್ತದೆ.) ಅಲಂಕೃತಗೊಂಡ ಪೂಕರೆಯನ್ನು ತುಂಬಾ ನಾಜೂಕಾಗಿ ಕಂಬುಲದಲ್ಲಿನ ಪೂಕರೆ ಕುತ್ತಿಯಿದ್ದಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಪೂಕರೆ ಕುತ್ತಿಗೆ ಮೂರು ಸುತ್ತು ಬಂದು ನಂತರ ಪೂಕರೆ ಕುತ್ತಿಯ ಮಧ್ಯದಲ್ಲಿ ಪೂಕರೆಯ ಮೂಲಭಾಗವನ್ನು ಇರಿಸಿ ಬೆತ್ತಗಳ ಸಹಾಯದಿಂದ ಅದನ್ನು ನೇರವಾಗಿ ನಿಲ್ಲುವಂತೆ ಮಾಡುತ್ತಾರೆ. ನಂತರ ಆಚಾರಿ ತನ್ನ ಪರಿಕರಗಳೊಂದಿಗೆ ಅಲ್ಲಿಗೆ ಸಾಗಿ ಪೂಕರೆಯನ್ನು ಪೂಕರೆಕುತ್ತಿಯಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುತ್ತಾನೆ. ನಂತರ ಪೂಕರೆ ಕೊಂಡು ಹೋದ ಯುವಕರು ಪೂಕರೆ ಕುತ್ತಿಯಲ್ಲಿ ಭದ್ರವಾಗಿ ನಿಂತ ಪೂಕರೆಗೆ ಗೋವಿಂದ... ಗೋವಿಂದ.. ಕೂಗುತ್ತಾ ಹೂವು ಎಸೆದು ಮೂರು ಸುತ್ತು ಬಂದು ಓಡಿಕೊಂಡು ಬಂದು ಕಟ್ಟಪುಣಿ ಹತ್ತುತ್ತಾರೆ. ಆ ವೇಳೆಗೆ ಕೊರಗಜ್ಜ ಅವರಿಗಿಂತ ಮೊದಲು ಓಡಿಕೊಂಡು ಬಂದು ತನ್ನ ಸ್ವಸ್ಥಾನ ಸೇರುವ ಪ್ರಯತ್ನ ಮಾಡುತ್ತಾನೆ.

### ೪.೧೫ ಬೆಮ್ಮೆರೆಗ್ ನೇಮ

ತುಳುನಾಡಿನ ಆಲಡೆಗಳಲ್ಲಿ ಬೆಮ್ಮೆರ್ ಎನ್ನುವ ಶಕ್ತಿ ಆರಾಧನೆಗೊಳ್ಳುವುದನ್ನು ಕಾಣಬಹುದು. ಇದೇ ರೀತಿಯಲ್ಲಿ ಎಲ್ಲಾ ಕಂಬಲಕೋರಿ ಉತ್ಸವದಲ್ಲಿ ಬೆಮ್ಮೆರೆಗ್ ಕಟ್ಟುನೆ ಎನ್ನುವ ನೇಮಾಚರಣೆ ನಡೆಯುತ್ತದೆ. ಈ ಬೆಮ್ಮೆರ್‌ರನ್ನು ತುಳುನಾಡಿನ ಮೂಲದೈವ ಇಲ್ಲವೆ ಮೂಲ ದೇವರು ಎನ್ನುವ ನೆಲೆಯಲ್ಲಿ ಆರಾಧಿಸಲಾಗುತ್ತದೆ. ಪೂಕರೆ ಹಾಕುವ ಸಂದರ್ಭದಲ್ಲಿ ಕೊರಗತನಿಯನ ಮಾದರಿಯಲ್ಲೇ ಬೆಮ್ಮೆರೆಗ್ ಕಟ್ಟುನೆ ಪಾತ್ರಧಾರಿ ಬೆಮ್ಮೆರೆ ಪಾತ್ರ ನಿರ್ವಹಿಸುತ್ತಾನೆ. ಕಾಸರಗೋಡು ಅರಿಬೈಲ್‌ನಲ್ಲಿಯ ಪೂಕರೆ ಆಚರಣೆಯಲ್ಲಿ ಬೆಮ್ಮೆರ್ ಪ್ರಮುಖ ದೈವ.

### ೪.೧೬ ಮಾರಿ ಸೂಟೆ

ಆಚರಣೆಯ ಹಿಂದಿನ ದಿನ ಕಾಡಿಗೆ ಹೋಗಿ ಬಿದಿರಿನಿಂದ ಉದ್ದವಾದ ಸೂಟೆ ಕಟ್ಟುತ್ತಾರೆ. ಇದಕ್ಕೆ ಅಲ್ಲಲ್ಲಿ ಕಟ್ಟ ಹಾಕಲು ನರಂದೆ ಬಳ್ಳಿಯನ್ನು ಬಳಸುತ್ತಾರೆ. ಇದಕ್ಕೆ ಮಾರಿಸೂಟೆ ಮಾಡುತ್ತಾರೆ. ಈ ಮಾರಿಸೂಟೆಯನ್ನು ನಿರ್ಮಿಸಲೂ ನಿರ್ದಿಷ್ಟ


ವ್ಯಕ್ತಿಗಳಿರುತ್ತಾರೆ. ಈ ಸೂಟೆ ರಾತ್ರಿ ಪೂರ್ತಿ ಉರಿಯವ ವ್ಯವಸ್ಥೆಯಾಗಿದೆ. ವಿದ್ಯುತ್ ಸಂಪರ್ಕ ಇಲ್ಲದ ದಿನಗಳಲ್ಲಿ ರಾತ್ರಿ ಇಡೀ ನಡೆಯುವ ದೈವಾರಾಧನೆ, ಊಟ ಇತ್ಯಾದಿಯನ್ನು ಗಮನದಲ್ಲಿಟ್ಟುಕೊಂಡು ಸರಾಗವಾಗಿ ಉರಿಯುವ ಸೂಟೆ-ದೀವಟಿಗೆಗಳನ್ನು ತಯಾರಿಸುತ್ತಾರೆ. ಇದು ಇಡೀ ರಾತ್ರಿ ಉರಿಯುವುದರಿಂದ ಇದರ ಬೆಳಕಿನಲ್ಲಿ ದೀಪ ಒಂದೆಡೆಯಾದರೆ ಉರಿಯುವ ಬಿಸಿಗೆ ವಾತಾವರಣದ ಚಳಿಯು ಇಲ್ಲವೆನಿಸುತ್ತದೆ. ಈ ಉತ್ಸವಗಳು ಸಾಮಾನ್ಯವಾಗಿ ನಡೆಯುವ ಕಾಲದಲ್ಲಿ ಚಳಿವಾತಾವರಣ ಇರುತ್ತದೆ. ಈ ಮಾರಿ ಸೂಟೆಗಳು ಅಗತ್ಯದ ಕಾರಣವಾಗಿದ್ದ ಕಾರಣ ಎಲ್ಲಾ ಕಂಬಲಕೋರಿಗಳಲ್ಲಿ ಸಾಮಾನ್ಯವಾಗಿತ್ತು.

ಕಂಬುಲ ಗದ್ದೆಯಲ್ಲಿ ಪೂಕರೆಯನ್ನು ವಿಧಿವತ್ತಾಗಿ ಹಾಕಿದ ನಂತರ ಊರವರು ಏನೂ ಭೇದ ಭಾವ ಇಲ್ಲದೆ ಒಟ್ಟು ಊಟ ಮಾಡುತ್ತಾರೆ. ಸಾಮಾನ್ಯವಾಗಿ ಇದು ತರಕಾರಿ ಊಟ ಆಗಿರುತ್ತದೆ. ಕೆಲವೆಡೆ ಮೀನು ಕೋಳಿ ಊಟ ಇರುತ್ತದೆ. (ಮೋರ್ಲ, ಸಜಿಪ)

## ೪.೧೭ ಊರ್ದ ದೈವೊಲೆನ ನೇಮ

ಈ ನೇಮಾಚರಣೆಯಲ್ಲಿ ಎರಡು ಪ್ರಮುಖ ಗಂಡು ಶಕ್ತಿಗಳು ಮತ್ತು ಎರಡು ಹೆಣ್ಣು ಶಕ್ತಿಗಳಿಗೆ ಪ್ರಮುಖವಾಗಿ ಆರಾಧನೆ ನಡೆಯುತ್ತದೆ. ಈ ಶಕ್ತಿಗಳ ಜತೆಯಲ್ಲಿ ಇನ್ನಿತರ ಶಕ್ತಿಗಳ ಆರಾಧನೆಯೂ ನಡೆಯುತ್ತದೆ. ಪ್ರಮುಖ ಎರಡು ಗಂಡು ಶಕ್ತಿಗಳು ಊರಿನ ಹೆಸರಿನ ಜತೆಯಲ್ಲಿ ಇಲ್ಲವೆ ಆ ಶಕ್ತಿಗಳು ಪ್ರಕಟವಾದ ಮನೆಗಳಿಗೆ ಇಲ್ಲವೆ ವ್ಯಕ್ತಿಗಳಿಗೆ ಸಂಬಂಧಪಟ್ಟ ಹೆಸರಿನಿಂದ ಕರೆಯಲ್ಪಡುತ್ತದೆ. ಉದಾಹರಣೆಗೆ ಮಾಣಿಯಲ್ಲಿ ಈ ದೈವಗಳು ಗುಡ್ಡಜಂಡಿ, ಪಂಜುರ್ಲಿ ಎಂದು ಗುರುತಿಸುತ್ತಾರೆ. ಕೊಕ್ಕಡದಲ್ಲಿ ಉಳ್ಳಾಕುಳು ಎಂದು ಗುರುತಿಸುತ್ತಾರೆ. ಕೆಲವೆಡೆ ಅಜ್ಜೆರ್ ದೈವಗಳು, ಮಲ್ಲಣ್ಣೆ-ಎಲ್ಯಣ್ಣೆ, ಪೂಮಾಣಿ-ಕಿನ್ನಿಮಾನಿ, ವೈದ್ಯನಾಥ-ಬಂಟಜಾವದೆ, ಸಜಿಪದಾಯೆ, ಕುರಿಯಾಡಿತ್ತಾಯೆ, ಪಂಜಂದಾಯೆ, ಕೊಡಮಣಿದಾಯೆ, ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತದೆ. ಸ್ತ್ರೀ ದೈವವನ್ನು ಉಳ್ಳಾಳ್ದಿ ಎಂಬುದಾಗಿಯೂ ಪರಿವಾರ ದೈವಗಳನ್ನು ಕೊರತಿ, ಜೂಮಾದಿ, ಲೆಕ್ಕೆಸಿರಿ ಇಲ್ಲವೆ ಲೆಕ್ಕೆಸಿರಿ, ಕಲ್ಲುರ್ಟಿ, ಸತ್ಯಜಾವದೆ, ಮಂತ್ರಜಾವದೆ, ಪಿಲಿಚಂಡಿ, ಕಲ್ಕುಡ, ಬಬ್ಬರ್ಯ, ಗುಳಿಗ, ಮುಂತಾಗಿ ಹೆಸರಿನಿಂದ ಆರಾಧಿಸುತ್ತಾರೆ. ಪ್ರತಿ ಊರಿನಲ್ಲಿಯೂ ಈ ಆರಾಧನಾ ಶಕ್ತಿಗಳ ಹೆಸರು ಮತ್ತು ಸಂಖ್ಯೆಯಲ್ಲಿ ವ್ಯತ್ಯಾಸವಾಗಿರುವುದನ್ನು ಕಾಣಬಹುದು.

ನೇಮದಲ್ಲಿ ದೈವ ಊರವರ ಅಹವಾಲುಗಳನ್ನು ಕೇಳಿ ತನ್ನದೇ ಪರಿಮಿತಿಯಲ್ಲಿ ಪರಿಹಾರ ಸೂಚಿಸಿ ಧೈರ್ಯ ತುಂಬುವ ಪ್ರಕ್ರಿಯೆ ನಡೆಯುತ್ತದೆ. ದೈವಾರಾಧನೆಗೆ ತನ್ನದೇ ಆದ ನೃತ್ಯ ಪ್ರಕಾರ ಇದೆ. ಬಣ್ಣಗಾರಿಕೆ ಮಾಡುವಾಗಲೂ ಕೆಂಪು, ಹಳದಿ, ಬಿಳಿ ಮತ್ತು ಕಪ್ಪು ಬಣ್ಣಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಕಾಡಿನಲ್ಲಿ ಬೆಳೆಯುವ ಕೇಪುಲ ಹೂ, ಮತ್ತು ಮಲ್ಲಿಗೆ ಹೂವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಬೆಂಕಿಯ



*ಗದ್ದೆಗೆ ಇಳಿದಿರುವ ಕುದಿಎರ್ಲುರ್ ಸಮೇತ ಗದ್ದೆಗೆ  ಮತ್ತು ಸೇರಿರುವವರಿಗೆ ತಳಿಪು*


ಆರತಿಯನ್ನು ಪ್ರತಿನಿಧಿಸುವ ಜೀಟಿಗೆ ಸೇವೆ, ದೊಂದಿ ಸೇವೆ, ತಿಬಿಲೆ ದೀಪ, ಮಾರಿ ಸೂಟೆ ಮುಂತಾಗಿ ಬೆಂಕಿ ಬೆಳಕನ್ನು ಉಪಯೋಗಿಸುವ ಕ್ರಮ ಇದೆ. ಅಣಿ ಅಥವಾ ಪ್ರಭಾವಳಿ ರಚನೆಯಲ್ಲೂ ಕೆಂಪು, ಕಪ್ಪು, ಬಿಳಿ, ಹಳದಿ ಬಣ್ಣಗಳ ಬಳಕೆ ಇರುತ್ತದೆ.ಈ ಅಣಿ ಪ್ರಭಾವಳಿಯ ರಚನೆಗೆ ಪೂರಕವಾಗಿ ಚಿನ್ನ ಬೆಳ್ಳಿ, ಮತ್ತು ಕಂಚು ಮತ್ತು ಮರ, ಕಂಗಿನ ಹಾಳೆ, ಎಳೆ ತೆಂಗಿನ ಗರಿ ಬೆತ್ತಗಳನ್ನು ಅಗತ್ಯಕ್ಕೆ ತಕ್ಕಂತೆ ಉಪಯೋಗಿಸಲಾಗುತ್ತದೆ. ದೈವದ ಮುಖವಾಡಗಳ ಮಾದರಿಯಲ್ಲಿ ಆಭರಣಗಳು ಸಾಮಾನ್ಯವಾಗಿ ಚಿನ್ನ ಮತ್ತು ಬೆಳ್ಳಿ, ಕಂಚು ಮತ್ತು ಮರಗಳಿಂದ ಮಾಡಿದವುಗಳಾಗಿರುತ್ತದೆ. ಹಿನ್ನೆಲೆ ಗಾಯನ, ಅಗತ್ಯ ಮಾತುಗಾರಿಕೆ, ಕೈ ಕಣ್ಣು ವರಸೆ, ಆರ್ಭಟ, ಆಯುಧ ವರಸೆ, ಬಾರ್ನೆ ಇಲ್ಲವೆ ಆಹಾರ ನೀಡುವುದು, ಅಮೃತ ಸೇವನೆ ತಾಳೆ ಮರದ  ಶೇಂದಿ ಮತ್ತು ಶರಾಬು, ಅರಳೀ ಮರದ ಎಲೆ, ಬಾಳೆ ಎಲೆ, ಹಲಸಿನ ಮರದ ಎಲೆಯಲ್ಲಿ ನೀಡುವ ಗಂಧ, ಹೂ, ಎಳನೀರು, ತೆಂಗಿನ ಕಾಯಿ, ತೇಯ್ದ ಗಂಧ ಇತ್ಯಾದಿ ವಿಚಾರಗಳಿರುವ ಒಟ್ಟು ಕಟ್ಟುಪಾಡುಗಳು ನೇಮಾಚರಣೆಯಾಗಿ ಕಂಡು ಬರುತ್ತದೆ.

### ೪.೧೮ ಆವಾರ ಕೈಕೊನ್ನೆ

ದೈವದ ನೇಮಗಳಲ್ಲಿ ಆವಾರೋ ಕೈಕೊನ್ನೆ ಒಂದು ಪ್ರಮುಖ ಪ್ರಕ್ರಿಯೆ. ದೈವಶಕ್ತಿಗಳಿಗೆ ಕಡಿದಿದ್ದ ಕೈಲ್‌ನ ಕದಳೀ ಬಾಳೆಹಣ್ಣು , ಬೆಲ್ಲ, ಜೇನುತುಪ್ಪಗಳನ್ನು ಕಲಸಿ ಉಂಡೆ ಮಾಡಿ ಅದನ್ನು ತಿನ್ನುವ ರೀತಿಯ ಅಂಗಚಲನೆಗಳನ್ನು ದೈವಕ್ಕೆ ಕಟ್ಟಿದ ವ್ಯಕ್ತಿ ಮಾಡುತ್ತಾರೆ. ಇದಕ್ಕೆ ಆವಾರ ಕೈಕೊನ್ನೆ ಎನ್ನುತ್ತಾರೆ. ಸಾಂಕೇತಿಕವಾಗಿ ಬಂದ ದೈವಕ್ಕೆ ಹೊಟ್ಟೆತುಂಬಾ ಉತ್ತಮವಾದ ಆಹಾರ ನೀಡಿದ್ದೇವೆ ಎನ್ನುವ ಚಿಂತನೆ. ಪಂಜುರ್ಲಿ ದೈವಕ್ಕೆ ಸಾಂಕೇತಿಕವಾಗಿ ಕೋಳಿ ನೀಡಲಾಗುತ್ತದೆ.

## ೪.೧೯ ಕೋಳಿ ಅಂಕ ಇಲ್ಲವೆ ಕೋರಿ ಕಟ್ಟ

ತುಳುನಾಡಿನ ಪೂಕರೆ ಆಚರಣೆಯ ಸಂದರ್ಭದಲ್ಲಿ ಕೋಳಿ ಅಂಕ ನಡೆಯುತ್ತದೆ. ವರ್ಷಕ್ಕೊಂದು ಸರ್ತಿ ಭೂಮಿಗೆ ರಕ್ತ ಬೀಳಬೇಕು ಎನ್ನುವ ನಂಬಿಕೆಯಲ್ಲಿ ಮತ್ತು ಪೂಕರೆ ಆಚರಣೆಯಲ್ಲಿ ಸೇರಿರುವ ಬಂಧು ಮಿತ್ರರಿಗೆ ಕೋಳಿ ಊಟ ಬಡಿಸುವ ದೃಷ್ಟಿಕೋನದಿಂದ ಈ ಅಂಕ ನಡೆಯುತ್ತಿತ್ತು. ಈಗ ಸರ್ಕಾರದ ಪಕ್ಷಿಹಿಂಸೆ ಕಾನೂನಿನಡಿ ಈ ಆಚರಣೆ ನಿಂತು ಹೋಗಿದೆ. ಕೋಳಿ ಅಂಕದಲ್ಲಿ ಕೂಗುವ ಇಲ್ಲವೆ ಕೆಲೆಪುನ ಬೆಳೆದ ಹುಂಜಗಳ ಕಾಲಿಗೆ ಬಾಲು ಎನ್ನುವ ಚೂಪಾದ ಸಪೂರ ಚೂರಿಯನ್ನು ಕಟ್ಟಿ ನಂತರ ಅವುಗಳನ್ನು ಹೊಡೆದಾಡಲು ಬಿಡುತ್ತಾರೆ. ಆಗ ಯಾವುದು ಸಾಯುತ್ತದೋ ಇಲ್ಲವೆ ಓಡಿ ಹೋಗುತ್ತದೋ ಆ ಕೋಳಿ ಗೆದ್ದ ಕೋಳಿಯ ಯಜಮಾನನ ವಶಕ್ಕೆ



ಪೂಕರೆ ಸಿಂಗರಿಸುತ್ತಿರುವ ದೃಶ್ಯ –೧



ಪೂಕರೆ ಸಿಂಗರಿಸುತ್ತಿರುವ ದೃಶ್ಯ –೨




ಪೂಕರೆ ಹಾಕುವ ದೃಶ್ಯ –೧



ಪೂಕರೆ ಹಾಕುವ ದೃಶ್ಯ –೨



ಪೂಕರೆ ಹಾಕುವ ದೃಶ್ಯ –೩



**ಪೂಕರೆ ಹಾಕುವ ದೃಶ್ಯ –೪**

ಬರುತ್ತದೆ. ಇದರಲ್ಲಿ ಪಾಲ್‌ಗ್ ಕಟ್ಟುನೆ ಎನ್ನುವ ವಿಧಾನವೂ ಇದೆ. ಇದರಲ್ಲಿ ಕನಿಷ್ಠ ಎರಡೆರಡು ಕೋಳಿಗಳನ್ನು ಹೊಡೆದಾಡಿಸಲಾಗುತ್ತದೆ. ಗೆದ್ದವನಿಗೆ ಎರಡು ಕೋಳಿಯಲ್ಲಿ ಒಂದು ಕೋಳಿ ಮಾತ್ರ ಸಿಗುತ್ತದೆ. ಇದು ಎರಡೂ ಕಡೆಯವರಿಗೂ ಕೋಳಿ ಪದಾರ್ಥ ಸಿಗುವಂತೆ ಮಾಡುವ ವ್ಯವಸ್ಥೆ. ತುಳುನಾಡಿನ ಕೃಷಿಕರಿಗೆ ಕೋಳಿ ಪದಾರ್ಥ ಅಂದರೆ ಇಷ್ಟವಾದ ಆಹಾರ. ಕೋಳಿಸಾರಿನೊಂದಿಗೆ ತೆಳುವಾದ ಅಕ್ಕಿರೊಟ್ಟಿ, ಮೂಡೆ, ಸೇಮಿಗೆ, ಪುಂಡಿ, ಇಡ್ಲಿ ಮುಂತಾದ ಅಕ್ಕಿತಿಂಡಿಗಳನ್ನು ಮಾಡಿ ತಿನ್ನುತ್ತಾರೆ. ಕುಚ್ಚಲಕ್ಕಿಯ ಅನ್ನ ಮತ್ತು ಕೋಳಿ ಸಾರು ಕೂಡಾ ಅವರ ಪ್ರೀತಿಯ ಆಹಾರ. ಕೋರಿ ಆಜವುನೆ, ಕೋರಿ ಪುಳಿಮುಂಚಿಡ್ ದೀಪುನೆ ಮುಂತಾದ ಖಾದ್ಯಗಳನ್ನೂ ಕೋಳಿಯಿಂದ ತಯಾರಿಸುತ್ತಾರೆ. ತುಳುನಾಡಿನ ಕೋಳಿ ಅಂಕ ಈ ಆಶಯದಿಂದ ಹೆಚ್ಚು ಸಾಕಾರಗೊಂಡಿರುವುದನ್ನು ಕಾಣಬಹುದು.

## ೪.೨೦ ಗಂಡಗಣೊಕುಲೆಗ್ ಬಳಸುನೆ / ಕಾಡಿನಲ್ಲಿ ಊಟ

ದೈವಗಳ ನೇಮ ಮುಗಿದ ನಂತರ ಊರವರು ಎಲ್ಲರೂ ಸೇರಿ ಗಂಡಗಣೊಕುಳೆಗ್ ಬಳಸುನೆ ಇಲ್ಲವೆ ಕಾಡಿನಲ್ಲಿ ಮಾಂಸದೂಟ ಕಾರ್ಯಕ್ರಮಕ್ಕೆ ದಿನ ನಿಗದಿ ಮಾಡುತ್ತಾರೆ. ಇದು ಸಾಮಾನ್ಯವಾಗಿ ಒಂದು ವಾರದಲ್ಲಿ ನಡೆಯುತ್ತದೆ (ಅರೆಬೊಟ್ಟು). ನಂತರ ಊರಿನ ಆಚರಣೆಯ ಉಸ್ತುವಾರಿ ವಹಿಸಿಕೊಳ್ಳುವ ಮನೆಗಳು ಕಜೆ ಅರಿತ ವನಸ್ (ಕುಚ್ಚಲಕ್ಕಿ ಊಟ)ದ ವ್ಯವಸ್ಥೆ ಮಾಡುತ್ತಾರೆ. ನಿಗದಿ ಪಡಿಸಿದ ದಿನ ಊರಿನ ಎಲ್ಲರೂ ತಮ್ಮ ತಮ್ಮ ಮನೆಯಿಂದ ಒಂದೊಂದು ಜೀವಂತ ಗಂಡು ಕೋಳಿಯನ್ನು ತೆಗೆದುಕೊಂಡು ಬರುತ್ತಾರೆ. ಕಾಡಿನ ಸಮೀಪದ ನಿರ್ದಿಷ್ಟ ಪಡಿಸಿದ ಒಂದು ಜಾಗದಲ್ಲಿ ಈ ಕೋಳಿಗಳನ್ನು ಕೊಯ್ದು ಎಲ್ಲರೂ ಒಟ್ಟಾಗಿ ಊಟ ತಯಾರಿಸಿ ಬಾಳೆಎಲೆಯಲ್ಲಿ ಊಟ ಮಾಡುತ್ತಾರೆ. ಊಟಕ್ಕೆ ಮೊದಲು ಸಾವಿರ ಗಂಡ ಗಣ ಹೆಸರಿನ ಶಕ್ತಿಗಳಿಗೆ ಮೊದಲ ಊಟ ಬಡಿಸುತ್ತಾರೆ.

## ೪.೧ ವಾರ್ಷಿಕ ಆವರ್ತನ ಮತ್ತು ಸಾಂದರ್ಭಿಕತೆ

ಪೂಕರೆ ಆಚರಣೆ ಮಾಡುವ ಸಂದರ್ಭದಲ್ಲಿ ಸಾಮಾನ್ಯವಾಗಿ ಏಣೆಲು ಬೆಳೆಯನ್ನು ಕಟಾವು ಮಾಡಿ ಎರಡನೇ ಬೆಳೆ ಸುಗ್ಗಿ ಬೆಳೆಯನ್ನು ನಾಟಿ ಮಾಡುವ ಕೆಲಸ ಸುಮಾರಾಗಿ ಮುಗಿದಿರುತ್ತದೆ. ಮನೆತುಂಬಾ ಏಣೆಲು ಬೆಳೆಯ ಭತ್ತ ರಾಶಿಬಿದ್ದಿರುತ್ತದೆ. ಅಂಗಳದಲ್ಲಿ ಬೈಹುಲ್ಲಿನ ರಾಶಿ ಇದ್ದು ದನಕರುಗಳಿಗೆ ಬೇಕಾದಷ್ಟು ಬೈಹುಲ್ಲು ಸಿಗುವ ಹೊತ್ತು. ಅದರೊಂದಿಗೆ ಪ್ರಕೃತಿ ಹಸಿರಿನಿಂದ ತುಂಬಿಕೊಂಡು ಎಲ್ಲಾ ಕಡೆ ಹಸಿರು ಹುಲ್ಲು ಸೊಂಪಾಗಿ ಬೆಳೆದಿರುತ್ತದೆ. ಈ ಸಂದರ್ಭದಲ್ಲಿ ಮೇಯಲು ಬಿಟ್ಟ ದನ ಕರು ಆಡುಗಳು ಮೈತುಂಬಿಕೊಂಡಿರುತ್ತವೆ. ಮನೆಯಲ್ಲಿ ಸಾಕುವ ನಾಟಿ ಕೋಳಿಗಳಿಗೆ ಅಂಗಳ ತುಂಬಾ ಭತ್ತದ ಕಾಳು ತಿನ್ನಲು ಸಿಗುತ್ತದೆ. ಮೊದಲ ಏಣೆಲು ಬೆಳೆಗೆ ಭತ್ತದ ಗದ್ದೆಯ ಬದುಗಳನ್ನು ಸವರಲು ಸುಂದರಗೊಳಿಸಲು ಅವಕಾಶ ಇರುವುದಿಲ್ಲ. ಆದರೆ ಎರಡನೇ ಸುಗ್ಗಿ ಬೆಳೆಯ ಸಂದರ್ಭದಲ್ಲಿ ಈ ಅವಕಾಶಗಳಿರುವುದರಿಂದ ಗದ್ದೆ ಬದುಗಳು ಸವರಲ್ಪಟ್ಟು ಸುಂದರವಾಗಿ ಕಾಣುತ್ತದೆ. ತುಳುವರು ಸುಗ್ಗಿ ಬೆಳೆಯನ್ನು 'ಮದಿಮಾಳ್ ಬುಳೆ' ಎಂದು ಮದುಮಗಳಿಗೆ ಹೋಲಿಸುತ್ತಾರೆ. ಒಂದು ರೀತಿಯಲ್ಲಿ ಸಮೃದ್ಧಿಯ ವಾತಾವರಣ ಇರುವ ಈ ಸಂದರ್ಭದಲ್ಲಿ ಪೂಕರೆ ಹಬ್ಬದ ಆಚರಣೆ ನಡೆಯುವುದನ್ನು ಕಾಣಬಹುದು.

ಪೂಕರೆ ಕಂಬಲಗಳಲ್ಲಿ ಎರಡನೆ ಸುಗ್ಗಿ ಬೆಳೆ ಬೆಳೆಯುವ ಆರಂಭದಲ್ಲಿ ಪೂಕರೆ ಉತ್ಸವ ನಡೆಯುತ್ತದೆ. ತುಳು ತಿಂಗಳ ಬೊಂತೆಲ್, ಜಾರ್ದೆ, ಪೆರಾರ್ದೆ ಪೊಣಿ ತಿಂಗಳುಗಳ ಮಧ್ಯಭಾಗದಲ್ಲಿ ಅಂದರೆ ಸಾಮಾನ್ಯವಾಗಿ ನವೆಂಬರ್ ಜನವರಿ ನಡುವಿನ ಕಾಲಾವಧಿಯಲ್ಲಿ ನಡೆಯುತ್ತದೆ. ಈ ಕಾಲಾವಧಿ ಸಾಮಾನ್ಯವಾಗಿ ಹೆಚ್ಚು ಚಳಿ ಇರುವ ಕಾಲವಾಗಿರುತ್ತದೆ. ಕೆಲವು ಕಡೆ ನವರಾತ್ರಿ ಉತ್ಸವದ ವೇಳೆ ಕಂಬಲಕೋರಿ ಉತ್ಸವಕ್ಕೆ ದಿನ ನಿಗದಿ ಮಾಡುತ್ತಾರೆ. ಕಡೆ ದೀಪಾವಳಿ ಸಂದರ್ಭದಲ್ಲಿ ದಿನ ನಿಗದಿ ಮಾಡುತ್ತಾರೆ.



**ಭಂಡಾರ ಕೆರ್ತ್‌ದ್ ನೇಮ**

ಕೆಲವೆಡೆ ಅಯಾ ಊರಿನ ನಿಗದಿತ ದಿನಗಳು ಇರುತ್ತದೆ. ಕೆಲವೊಂದು ಊರಲ್ಲಿ ಯಾರಾದರೂ ಚಾಕರಿಯವರು (ಉತ್ಸವದ ಕೆಲಸದಲ್ಲಿ ಹಕ್ಕುಬದ್ಧವಾಗಿ ಪಾಲ್ಗೊಳ್ಳುವವರು) ಮೃತಪಟ್ಟ ಹೊರತಾಗಿ ಉತ್ಸವದ ದಿನ ಇತರ ಸಂದರ್ಭದಲ್ಲಿ ಬದಲಾಗುವುದಿಲ್ಲ.

ಕಂಬಲಕ್ಕೆ ಸಂಬಂಧಿಸಿದ ಆಚರಣಾ ಕಾರ್ಯಕ್ರಮಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ನಡೆಯುತ್ತದೆ. ಅದರಲ್ಲೂ ಕಂಬಲಕೋರಿಯ ಪ್ರಮುಖ ವಿಚಾರಗಳು ಮುಸ್ಸಂಜೆ ಹೊತ್ತಿನಲ್ಲಿ ಅನುಕೂಲತೆ ಮತ್ತು ಸೊಬಗಿನ ದೃಷ್ಟಿಯನ್ನಿಟ್ಟುಕೊಂಡು ನಡೆಯುತ್ತದೆ. ಉಳಿದಂತೆ ದೈವಗಳ ಆರಾಧನೆ ಹೆಚ್ಚಾಗಿ ಮಧ್ಯ ರಾತ್ರಿಯ ನಂತರ ನಡೆಯುತ್ತದೆ.

ಏರಿದ ಪೂಕರೆಯನ್ನು ಸಾಮಾನ್ಯವಾಗಿ ಬಿಸು ದಿನ ಅಂದರೆ ತುಳುವರ ಹೊಸವರ್ಷದ ದಿನ ಅವರೋಹಣ ಮಾಡಲಾಗುತ್ತದೆ. ಅದರ ಕಂಬವನ್ನು ಮುಂದಿನವರ್ಷಕ್ಕೆಂದು ತೆಗೆದಿರಿಸುತ್ತಾರೆ. ಅಡಿಕೆ ಮರದಿಂದ ಮಾಡಿರುವ ಕಂಬವಾಗಿದ್ದರೆ ಮಾತ್ರ ಮರುವರ್ಷಕ್ಕೆ ಬೇರೆಯೇ ಕಂಬವನ್ನು ತಯಾರಿಸಿಕೊಳ್ಳುತ್ತಾರೆ.

ಕಂಬಲ ಕೋರಿ ಉತ್ಸವದ ದಿನವೇ ಹೊಸ ಅಕ್ಕಿ ಊಟ ಸಂಭ್ರಮವನ್ನು ನಡೆಸುವ ಪರಿಪಾಠವೂ ಕೆಲವೊಂದು ಕಡೆಗಳಲ್ಲಿ ಇದೆ(ಸಜೀಪ). ಏಣಿಲು ಬೆಳೆ ಅಥವಾ ಮಳೆಗಾಲದ ಬೆಳೆಯನ್ನು ಕಟಾವು ಮಾಡಿದ ಮೇಲೆ ಅಕ್ಕಿ ಮಾಡಿ ಅದರ ಊಟವನ್ನು ಬಂಧುಗಳು ಮಿತ್ರರು ನೆರೆಕರೆಯವರು ಮತ್ತು ಊರವರ ಜತೆ ಒಟ್ಟಾಗಿ ಕುಳಿತು ಊಟ ಮಾಡುವ ಪರಿಪಾಠವನ್ನು ಇದೇ ಸಂದರ್ಭದಲ್ಲಿ ಮಾಡುವ

ಸಂಪ್ರದಾಯವೂ ಇದೆ. ಕೆಲವೊಂದು ಕಡೆಗಳಲ್ಲಿ ಇದು ಶಾಖಾಹಾರಿ ಊಟವಾದರೆ ಇನ್ನು ಕೆಲವೆಡೆ ಇದು ಮೀನು ಮಾಂಸದ ಊಟವಾಗಿರುತ್ತದೆ.( ಮೋರ್ಲ, ಸಜಿಪ) ಇದಕ್ಕೆ ಮಧು ಪುದ್ವಾರ್ ಎನ್ನುತ್ತಾರೆ. ಹೊಸ ಅಕ್ಕಿ ತರಕಾರಿ ಊಟದ ಸಂಭ್ರಮವಾದರೆ ಅದಕ್ಕೆ ಪುದ್ವಾರ್ ಎಂದು ಕರೆಯುತ್ತಾರೆ.

ಈ ಪುದ್ವಾರ್ ಊಟಕ್ಕೆ ದೂರದೂರಿನಲ್ಲಿರುವ ನೆಂಟರು ,ಮಿತ್ರರು, ಕೃಷಿ ಬೆಳೆಯನ್ನು ಬೆಳೆಯುವುದರಲ್ಲಿ ನೆರವು ನೀಡುವವರು, ಊರಿನವರು, ಪರಊರಿನವರು ಬಂದು ಸೇರುವುದರಿಂದ ಸಹಜವಾಗಿಯೇ ಹಬ್ಬದ ವಾತಾವರಣ. ಎಲ್ಲರಿಗೂ ಊಟ ತಯಾರಾಗಬೇಕಾಗಿರುವುದರಿಂದ ಎಲ್ಲರೂ ಸೇರಿ ಊಟದ ತಯಾರಿ ನಡೆಸುತ್ತಾರೆ. ಮಳೆಗಾಲದ ಆರಂಭದಲ್ಲಿ ಭತ್ರದ ಬೆಳೆಯೊಂದಿಗೆ ತರಕಾರಿ ಬೀಜಗಳನ್ನು ಹಾಕಿರುವುದು ಬೆಳೆದು ಸಾಕಷ್ಟು ಹಸಿರು ತರಕಾರಿ ಲಭ್ಯವಾಗಿರುತ್ತದೆ. ಭತ್ತದ ಗದ್ದೆಯ ಬದುವಿನಲ್ಲಿನ ತೆಂಗಿನ ಮರಗಳಿಂದ ಸಾಕಷ್ಟು ಎಳನೀರು ಬೊಂಡಗಳನ್ನು ತೆಗೆದು ರಾಶಿ ಹಾಕಲಾಗುತ್ತದೆ. ಮಳೆಗಾಲದಲ್ಲಿ ಬಲಿತಿರುವ ತೆಂಗಿನ ಕಾಯಿಗಳನ್ನು ಇದೇ ಸಂದರ್ಭದಲ್ಲಿ ಕೊಯಿದಿರುತ್ತಾರೆ. ತೋಟಗಳಲ್ಲಿ ಬಾಳೆಗೊನೆಗಳನ್ನು ಕಡಿದು ತಂದಿರುತ್ತಾರೆ. ಮಕ್ಕಳು, ಯುವಕರು, ವೃದ್ದರು ಮೇಲು ಕೀಳು, ವೃತ್ತಿ- ಜಾತಿ ಶ್ರೀಮಂತ, ಬಡವ, ಎನ್ನುವ ಭೇದ ಇಲ್ಲದೆ ಎಲ್ಲರೂ ಹೊಟ್ಟೆ ಬಿರಿಯುವಷ್ಟು ತಿನ್ನುವ ಸಂದರ್ಭ ಸೃಷ್ಟಿಯಾಗಿರುತ್ತದೆ. ತಾಳೆ ಮರದಿಂದ ತೆಗೆಯುವ ನೀರಾ ಇಲ್ಲವೆ ಸಿಹಿ ಶೇಂದಿಯನ್ನು ಸವಿಯುವ ಅವಕಾಶವೂ ಈ ಸಂದರ್ಭದಲ್ಲಿ ಇರುತ್ತದೆ.

ಮಳೆಗಾಲ ಆರಂಭವಾಗುತ್ತಿದ್ದಂತೆ ದೇಹಾರೋಗ್ಯವನ್ನೂ ಲೆಕ್ಕಿಸದೆ ಕೆಲಸ ಮಾಡಿ ಕೃಷಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಕೃಷಿ ಬೆಳೆಯುವ ಜನ ಪೂಕರೆ ಉತ್ಸವ ಸಂದರ್ಭದಲ್ಲಿ ತಮ್ಮ ದೇಹಾರೋಗ್ಯದ ಬಗ್ಗೆ ಕಾಳಜಿ ವಹಿಸುವ ಮತ್ತು ವಿಧವಿಧದ ಆಹಾರ ತಯಾರಿಸಿ ತಿನ್ನುವ ತಾಳೆಮರದ ನೀರಾ ಶೇಂದಿ ಸೇವಿಸಿ ಸಂತೋಷಕೂಟ ಆಚರಿಸುವುದು ಜತೆಗೆ ತಾವು ಕೈಮುಗಿಯುವ, ಆರಾಧಿಸುವ ಶಕ್ತಿಗಳಿಗೆ ನಿಯಮಿತವಾಗಿ ಅಂದರೆ ವಾರ್ಷಿಕವಾಗಿ ಗೌರವ ಸಲ್ಲಿಸುವ ಪ್ರಕ್ರಿಯೆಯಾಗಿದೆ.

### ೪.೨ ಪೂಕರೆ ರಚನೆ

ಪೂಕರೆ ರಚನೆಗೆ ಕಂಗಿನ ಸಲಾಕೆ ಮತ್ತು ಬಿದಿರಿನ ಸಲಾಕೆ, ಮುಗುಳಿ ಅಥವಾ ಶಿಖರ ರಚಿಸಲು ಹೊಂಗೆಮರ. ಪೂಕರೆ ಕುತ್ತಿ: ಸಾಮಾನ್ಯವಾಗಿ ಗಟ್ಟಿ ಮರವನ್ನು ಬಳಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸಿಮೆಂಟು ಉಪಯೋಗಿಸಿ ಭದ್ರಕಟ್ಟೆ ಕಟ್ಟಿರುತ್ತಾರೆ.ಕೆಲವು ಕಡೆ ಮರದ ಬಂಡಿ ಇಲ್ಲವೆ ಕಲ್ಲಿನ ಬಂಡಿಗಳಲ್ಲಿ ಪೂಕರೆ ಅಳವಡಿಸಿ ಅದನ್ನು ಗದ್ದೆಯ ಮಧ್ಯೆ ನಿಲ್ಲಿಸುವ ಸಂಪ್ರದಾಯವೂ ಇರುವುದರಿಂದ ಪೂಕರೆ ರಚನೆಯಲ್ಲಿ ಮರ ಮತ್ತು ಕಲ್ಲಿನ ಬಳಕೆಯನ್ನು ಕೂಡಾ ಹೆಸರಿಸಬಹುದು.

ಕೊಕ್ಕಡದ ಕಂಬಲಕೋರಿಗೆ ನೆಡುವ ಪೂಕರೆಯ ಉದ್ದ ಒಂಭತ್ತು ಕೋಲು ಇದೆ. ಅಂದರೆ ಸುಮಾರು ೨೨ ಫೀಟ್ ಇರುತ್ತದೆ. ಇಲ್ಲಿನ ಪೂಕರೆಯಲ್ಲಿ ಒಟ್ಟು ೯ ಅಂಕಣಗಳಿರುತ್ತದೆ. ಸಾಮಾನ್ಯವಾಗಿ ಈ ಅಂಕಣಗಳು ೭,೯,೧೧, ಸಂಖ್ಯೆಯಲ್ಲಿರುತ್ತದೆ.

ಅಂಕಣ ಕಡ್ಡಿಗಳು ೩೮ ಅಂಗುಲ ಇರುತ್ತದೆ. ಈ ಅಂಕಣಗಳನ್ನು ಹಿಂಗಾರ ಮತ್ತು ಕೇಪುಳ ಹೂಗಳಿಂದ ಅಲಂಕರಿಸುತ್ತಾರೆ. ಪೂಕರೆಯ ಕಂಬವನ್ನು ಇಲ್ಲಿ ಅಡಿಕೆ ಕಂಗಿನಿಂದ ಮಾಡಲಾಗುತ್ತದೆ. ಇದಕ್ಕೆ ಸುಮಾರು ೮೪ ತೂತುಗಳನ್ನು ಕೊರೆಯಲಾಗುತ್ತದೆ. ಒಟ್ಟು ೧೦೮ ಕಂಗಿನ ಸಲಾಕೆಗಳನ್ನು ಈ ರಂಧ್ರಗಳಿಗೆ ಬಳಸಲಾಗುತ್ತದೆ. ಕೊಕ್ಕಡದಲ್ಲಿ ಪೂಕರೆಯ ಕೆಲಸ ಮಾಡುವ ಕುಶಲ ಕರ್ಮಿ ಇಲ್ಲವೆ ಆಚಾರಿ ಒಟ್ಟು ಎರಡು ದಿನಗಳಲ್ಲಿ ಪೂಕರೆ ಕೆಲಸವನ್ನು ಪೂರ್ಣಗೊಳಿಸುತ್ತಾನೆ. ಅರೆಬೆಟ್ಟುವಿನ ಕಂಬಲ ಕೋರಿಯ ಪೂಕರೆಯಲ್ಲಿ ಮರದ ಕಂಬವನ್ನು ಬಳಸುತ್ತಾರೆ. ಪೂಕರೆಯ ಅಲಂಕಾರಕ್ಕೆ ಬಣ್ಣಬಣ್ಣದ ಹೂಗಳನ್ನೂ ಬಳಸುತ್ತಾರೆ.

ಪೂಕರೆಯಲ್ಲಿ ಶಿರ ಇಲ್ಲವೆ ಕಲಶ, ಗೆಣೆಗಳು, ಮೊದಲ ಅಂಕಣ,ಪೂಕರೆಯ ಕಂಬ, ಪೂಕರೆಯ ಪೀಠ ಎಂದು ಐದು ಭಾಗಗಳಿವೆ.

### ೪.೨.೧ ಪೂಕರೆಯ ಕಲಶ

ಪೂಕರೆಯ ಶಿರ ಇಲ್ಲವೆ ಕಳಶದ ಭಾಗವು ದೇವಸ್ಥಾನದ ಮುಗುಳಿ ಇಲ್ಲವೆ ಕಲಶ ಮಾದರಿಯಲ್ಲಿ ರಚಿತವಾಗಿರುತ್ತದೆ. ಸಾಮಾನ್ಯವಾಗಿ ಬಹಳ ಮೆದುವಾದ ಪೊಂಗಾರೆ ಇಲ್ಲವೆ ಹೊಂಗಾರೆ ಮರದಲ್ಲಿ ಈ ಕಲಶವನ್ನು ತಯಾರು ಮಾಡುತ್ತಾರೆ.

### ೪.೨..೨ ಗೆಣೆಗಳು

ಪೂಕರೆಯ ಅಂಕಣಗಳು ಇಲ್ಲವೆ ಗೆಣೆಗಳು ಪೂಕರೆಯ ಅಂದವನ್ನು ಹೆಚ್ಚಿಸುತ್ತದೆ. ಇವುಗಳು ಸಾಮಾನ್ಯವಾಗಿ ಬೆಸ ಸಂಖ್ಯೆಯಲ್ಲಿರುತ್ತದೆ. ಅದು ಏಳು, ಒಂಭತ್ತು, ಹನ್ನೊಂದು ಮುಂತಾಗಿ ಇರುತ್ತದೆ. ಈ ಗೆಣೆಗಳಲ್ಲಿ ಒಂದು ಅಂಕಣಕ್ಕೆ ಇಲ್ಲವೆ ಗೆಣೆ ರಚಿಸಲು ಸಾಮಾನ್ಯವಾಗಿ ಎಂಟು ಕಂಗಿನ ಸಲಾಕೆ ಕಡ್ಡಿಗಳನ್ನು ಬಳಸುತ್ತಾರೆ.

### ೪.೨..೩ ಮೊದಲ ಅಂಕಣ

ಇದನ್ನು ತೊಟ್ಟಿಲ್ ನೆಲೆ, ಜಕ್ಕೆಲ್ ಅಂಕಣ , ಪೆಟ್ಟಿಗೆ ಅಂಕಣ ಮುಂತಾಗಿ ಕರೆಯುತ್ತಾರೆ. ಈ ಅಂಕಣ ಇತರ ಅಂಕಣಗಳಿಂದ ಭಿನ್ನವಾಗಿರುತ್ತದೆ. ಇತರ ಅಂಕಣಗಳು ತ್ರಿಕೋಣಾಕಾರದಲ್ಲಿದ್ದರೆ ಇದು ಆಯತಾಕಾರದಲ್ಲಿರುತ್ತದೆ.

### ೪.೨..೪ ಪೂಕರೆಯ ಕಂಬ

ಕೆಲವೆಡೆ ಪೂಕರೆ ಕಂಬಗಳನ್ನು ಮರದಿಂದ ಮಾಡಲಾಗಿರುತ್ತದೆ. (ಅರೆಬೆಟ್ಟು, ಮಾಣಿ) ಇನ್ನು ಕೆಲವೆಡೆ ಕಂಗಿನ ಕಂಬಗಳನ್ನು ಉಪಯೋಗಿಸಿ ಪೂಕರೆ ಕಂಬ ಮಾಡಲಾಗುತ್ತದೆ ( ಕೊಕ್ಕಡ). ಮರದ ಕಂಬವಾಗಿದ್ದಲ್ಲಿ ಪ್ರತಿವರ್ಷವೂ ಈ ಕಂಬಗಳನ್ನು ಮರುಉಪಯೋಗಿಸಲಾಗುತ್ತದೆ. ಅದೇ ಕಂಗಿನ ಇಲ್ಲವೆ ಅಡಿಕೆ ಮರದ ಕಂಬವಾಗಿದ್ದಲ್ಲಿ ಪ್ರತಿವರ್ಷ ಹೊಸ ಅಡಿಕೆ ಮರ ಕಡಿದು ಈ ಕಂಬವನ್ನು ತಯಾರಿಸಲಾಗುತ್ತದೆ.

### ೪.೨..೫ ಪೂಕರೆಯ ಪೀಠ

ಪೂಕರೆಯ ಪೀಠವನ್ನು ಕೆಲವೆಡೆ ಮರದಿಂದ ತಯಾರಿಸಲಾಗುತ್ತದೆ. ಕೆಲವೆಡೆ ಕಲ್ಲು ಮಣ್ಣು ಉಪಯೋಗಿಸಿಯೂ ಮಾಡಿರುತ್ತಾರೆ. ಕೇವಲ ಕಲ್ಲಿನಿಂದಲೇ ತಯಾರಿಸಿರುವ ಅದಕ್ಕೆ ಚಕ್ರಗಳಿರುವ ರಚನೆಯೂ ಇದೆ. ಕೆಲವೆಡೆ ಮರದಿಂದ ತಯಾರಿಸಿದ ಬಂಡಿ ಹೆಸರಿನ ರಚನೆಯಲ್ಲಿ ಈ ಪೂಕರೆಯನ್ನು ಇರಿಸುತ್ತಾರೆ. (ಅನಂತಾಡಿ) ಇತ್ತೀಚೆಗೆ ಸಿಮೆಂಟ್ ರಚನೆಯೂ ಆಗಿದೆ (ಅರೆಬೆಟ್ಟು, ಉಳ್ಳಾಲ ಬೈಲ್ –ತೊಕ್ಕೊಟ್ಟು)

### ೪.೨..೬ ಅಲಂಕಾರ

ಪೂಕರೆಯನ್ನು ಸ್ಥಳೀಯವಾಗಿ ಸಿಗುತ್ತಿದ್ದ ಕಾಡಿನ ಹೂಗಳಾದ ಕೇಪುಳ ಮತ್ತು ಪಾದೆ ಹೂ ಮತ್ತು ಪಿಂಗಾರ ಇಲ್ಲವೆ ಸಿಂಗಾರ ಬಳಸಿ ಅಲಂಕರಿಸಲಾಗುತ್ತಿತ್ತು. ಈಗ ಇನ್ನಿತರ ಹೂಗಳ ಬಳಕೆಯೂ ನಡೆಯುತ್ತಿದೆ.ತುಳುನಾಡಿನ ದೈವಾರಾಧನೆಯಲ್ಲಿ ಕೇಪುಳ ಹೂವಿಗೆ ಹೆಚ್ಚಿನ ಪ್ರಾಶಸ್ತ್ಯ ಇದೆ.

### ೪.೨..೭ ಕೇಪುಳ ಹೂ

ಕಡು ಕೆಂಪು ಬಣ್ಣದ ಈ ಹೂವಿನ ಗಿಡ ನೀರಿಲ್ಲದ ಪ್ರದೇಶವೂ ಸೇರಿದಂತೆ ಗುಡ್ಡಗಾಡುಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದರ ಬಣ್ಣ ತುಂಬಾ ಆಕರ್ಷಕವಾಗಿದ್ದು ಈ ಗಿಡ ಕೆಂಪು ಹಣ್ಣುಗಳನ್ನು ನೀಡುತ್ತದೆ. ಈ ಹಣ್ಣುಗಳೂ ರುಚಿಯಾಗಿರುತ್ತವೆ.

### ೪.೨..೮ ಪಾದೆಹೂ

ಪಾದೆ ಹೂ ಸಾಮಾನ್ಯವಾಗಿ ಮಳೆಗಾಲ ಮುಗಿಯುವ ಸುಮಾರಿಗೆ ಕಾಣಿಸಿಕೊಳ್ಳುತ್ತದೆ. ಪೂಕರೆ ಆಚರಣೆಯ ಸಂದರ್ಭವೂ ಇದೇ ಆಗಿರುವುದರಿಂದ ಈ ಹೂಗಳನ್ನು ಪೂಕರೆ ಅಲಂಕಾರದಲ್ಲಿ ಬಳಸುತ್ತಾರೆ,

### ೪.೩ ಪೂಕರೆ ಆಚರಣೆ ನಂಬಿಕೆ ಮತ್ತು ಅರ್ಥ

ಪೂಕರೆ ಉತ್ಸವ ಮಾಡಿದರೆ ಊರು ಸಮೃದ್ಧಿಯಾಗಿರುತ್ತದೆ ಎನ್ನುವ ನಂಬಿಕೆ ಇದೆ. ತುಳುವರಿಗೆ ಬಿಮ್ಮೆರ್ ಮೂಲ ದೇವತೆ. ತುಳುನಾಡಿನಾದ್ಯಂತ ಆಲಡೆಗಳು, ನಾಗಬನಗಳು, ಡಕ್ಕೆ ಬಲಿ, ಸಿರಿ ಆರಾಧನೆಗಳು ಕಂಡು ಬರುತ್ತದೆ. ಈ ಕ್ರಿಯಾಚರಣೆಗಳಲ್ಲಿ ಸಮೃದ್ಧಿ, ದೈಹಿಕ–ಮಾನಸಿಕ ಆರೋಗ್ಯ ಮತ್ತು ಸಂತಾನವೃದ್ಧಿ ಅಪೇಕ್ಷೆ ಉದ್ದೇಶಗಳನ್ನು ಗಮನಿಸಬಹುದು.

ಬಾಳೆ ನೆಡುವ ಗದ್ದೆಗೆ ನೆಡುವ ಬಾಳೆಯ ಗಿಡ ಗೊನೆ ಹಾಕಿದರೆ ಗದ್ದೆಯ ಯಜಮಾನನಿಗೆ ದೋಷವಿರುವುದಾಗಿ ನಂಬುತ್ತಾರೆ. ಇದರ ಪರಿಹಾರಕ್ಕೆ ಗದ್ದೆಗಳಿಗೆ ಪೂಕರೆ ಹಾಕಬೇಕು ಎನ್ನುವ ನಂಬಿಕೆ ಇದೆ. ಬಾಳೆ ಹಾಕಿದ ಗೊನೆಯಲ್ಲಿ ಎಷ್ಟು ಎಷ್ಟು ಸಂಖ್ಯೆ ಪಾಡಗಳಿರುತ್ತದೋ ಅಷ್ಟು ಸಂಖ್ಯೆಯ ಗೆಣೆಗಳಿರುವ ಪೂಕರೆ ಹಾಕಬೇಕು ಎಂಬನಂಬಿಕೆಯೂ ಇದೆ.

ಪೂಕರೆ ಆಚರಣೆಯ ವಿಧಿಗಳಲ್ಲಿ ನಾಗನ ಆರಾಧನೆಗೆ ಪ್ರಾಶಸ್ತ್ಯ. ಪೂಕರೆ ಗದ್ದೆಯ ಅಂತ:ಶಕ್ತಿ ನಾಗ ಎಂಬುದು ಇಲ್ಲಿನ ಜನರ ನಂಬಿಕೆ. ಪೂಕರೆ ಗದ್ದೆಗಳನ್ನು ಕೋರಿದ ಮೇಲೆ ಸಂಕಮಲೆ ಸರ್ಪ ಬಂದು ಕುರುಂಟು ಎಳೆದು ಹೋಗುತ್ತದೆ ಎಂಬ ನಂಬಿಕೆ ಇದೆ. ವಾಸ್ತವವನ್ನು ನೋಡಿದಾಗ ಊರಿನ ಪ್ರಮುಖ ಗದ್ದೆಯಲ್ಲಿ ಭತ್ತದ ಗದ್ದೆಯ ನೀರು ಸರಾಗವಾಗಿ ಹಾದು ಹೋಗುವ ವ್ಯವಸ್ಥೆಯನ್ನು ಮಾಡುತ್ತಾರೆ. ಈ ಕೆಲಸವನ್ನು ಆಚರಣೆಗೆ ಸಿದ್ಧಕೊಂಡ ಕಂಬುಲವನ್ನು ವ್ಯತ್ಯಯವಾಗದಂತೆ ಆಚರಣೆ ನಡೆಸುವುದಕ್ಕೆ ಸುರಕ್ಷಿತವಾಗಿರುವಂತೆ ರಕ್ಷಿಸುವ ಹೊಣೆ ಹೊತ್ತ ಮೂಲದ ವ್ಯಕ್ತಿಗಳು ರಾತ್ರಿಯ ಹೊತ್ತಿಗೆ ಮಾಡಿರುತ್ತಾರೆ. ತುಳುನಾಡಿನಲ್ಲಿ ಮೂಲದವರು ಎನ್ನುವ ವ್ಯವಸ್ಥೆ ಗುಲಾಮಗಿರಿಗೆ ಇನ್ನೊಂದು ಹೆಸರಾಗಿತ್ತು.

ಪೂಕರೆ ಗದ್ದೆಗೆ ದೈವದ ಕಂಡೊ ಎಂದು ಕರೆಯುತ್ತಾರೆ. ಇದಕ್ಕೆ ಸೂತಕ ಇರುವವರು ಮತ್ತು ಮುಟ್ಟಾದ ಸ್ತ್ರೀಯರು ಇಳಿಯಬಾರದು. ಗದ್ದೆಯ ಶುಚಿತ್ವವನ್ನು ಯಾವಾಗಲೂ ರಕ್ಷಿಸಬೇಕು ಎಂದು ಭಾವಿಸುತ್ತಾರೆ. ಯಾವುದೇ ಕಾರಣಕ್ಕೆ ಪೂಕರೆ ಗದ್ದೆ ಅಶುಚಿಗೊಂಡರೆ ಗದ್ದೆಯ ಹತ್ತಿರ ಸುಳಿಯುವವರಿಗೆ ನಾಗರ ಹಾವು ಕಾಣಿಸಿಕೊಳ್ಳುತ್ತದೆ. ಆಗ ಕಂಬುಳಕ್ಕೆ ಕುರ್ದಿ ನೀರು ಎರಚಿ ನಾಗನ ಎದುರು ತಪ್ಪು ಯಾಚಿಸಿದರೆ ನಾಗ ಮಾಯವಾಗಿಬಿಡುತ್ತದೆ ಎನ್ನುವ ನಂಬಿಕೆ ಇದೆ.

ಪೂಕರೆ ಗದ್ದೆಗಳು ದೈವಿಕ ಕಾರಣಿಕವನ್ನ ಹೊಂದಿವೆ ಎನ್ನುವ ನಂಬಿಕೆ ಜನಪದರಲ್ಲಿದೆ. ತಮ್ಮ ಜಾನುವಾರುಗಳಿಗೆ ಬರುವ ಕಾಯಿಲೆಗಳನ್ನು ಪರಿಹರಿಸಿ ಕೊಡುವ ಕಾರಣಿಕ ಶಕ್ತಿ ಈ ಗದ್ದೆಗಳಿಗಿವೆ ಎಂದು ನಂಬುವ ಜನರು, ಆ ಕಾರನಕ್ಕಾಗಿ ಹರಕೆ ಹೊರುತ್ತಾರೆ. ಮುಖ್ಯವಾಗಿ ಉಳಮೆಗೆ ಉಪಯೊಗಿಸುವ ಜಾನುವಾರುಗಳಿಗೆ ಅಸೌಖ್ಯವಾಗಿ ಮದ್ದು ಮಾಡಬೇಕಾದ ಸಂದರ್ಭದಲ್ಲಿ ರೋಗ ಗುಣವಾದರೆ ಮುಂದೆ ಜಾನುವಾರುಗಳನ್ನು ಪೂಕರೆ ಗದ್ದೆಯ ಉಳುಮೆಗೆ ಇಳಿಸುತ್ತೇವೆಯೆಂದು ಹರಕೆ ಹೇಳುತ್ತಾರೆ. ಆ ಪ್ರಕಾರ ಮುಂದೆ ಗುಣಮುಖ ಹೊಂದಿದ ಜಾನುವಾರುಗಳನ್ನು ಪೂಕರೆ ಗದ್ದೆಯ ಉಳುಮೆಗೆ ಇಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬೆಳ್ತಂಗಡಿ ತಾಲ್ಲೂಕು ಕೊಕ್ಕಡದ ಪೂಕರೆ ಗದ್ದೆಗೆ ಪರಊರುಗಳಿಂದಲೂ ಜಾನುವಾರುಗಳು ಅಧಿಕ ಸಂಖ್ಯೆಯಲ್ಲಿ ಪೂಕರೆ ಗದ್ದೆಗೆ ಇಳಿಯುವುದು ಉಲ್ಲೇಖನೀಯ ಅಲ್ಲದೆ, ಜೀವನದಲ್ಲಿ ಬರುವ ಸಂಕಷ್ಟಗಳ ಪರಿಹಾರಕ್ಕೆ ಪೂಕರೆ ಗದ್ದೆಗೆ ಸೊಪ್ಪು ಹರಕೆ ಹೇಳಿ ಹರಕೆ ತೀರಿಸುವ ಸಂಪ್ರದಾಯವೂ ಇದೆ.

ಪೂಕರೆ ಆಚರಣೆ ಗದ್ದೆಗೆ ಸೊಪ್ಪು ಕಟ್ಟು ಹಾಕಿದರೆ ರೋಗಗಳು ಗುಣವಾಗುತ್ತವೆ. ಎನ್ನುವುದು ಕೃಷಿ ಕಾರ್ಯಕ್ಕೆ ಸುಲಭವಾಗಿ ಹಸಿರು ಗೊಬ್ಬರವನ್ನು ಪೇರಿಸುವ ಇರಾದೆಯೂ ಇದ್ದಂತೆ ಕಾಣಬಹುದು. ಇನ್ನೊಂದೆಡೆ ರೋಗ ರುಜಿನ ಸಂದರ್ಭದಲ್ಲಿನ ಮನೋಸ್ಥೈರ್ಯ ಹೆಚ್ಚಿಸುವ ಕೆಲಸವನ್ನೂ ಇದು ಮಾಡಬಹುದು.

ಕೃಷಿ ಸಂಬಂಧಿ ಪ್ರಾಣಿಗಳು ಮತ್ತು ಕಾಡು ಸಂಬಂಧಿ ಪ್ರಾಣಿಗಳ ಆರಾಧನೆ ಕಂಡು ಬರುತ್ತದೆ. ಕೃಷಿ ಮಾಡಲು ಇಲ್ಲವೆ ತಮ್ಮ ದಿನನಿತ್ಯದ ಅಗತ್ಯಗಳಿಗೆ

ಉಪಯೋಗಿಸುವ ಎತ್ತು, ನಾಯಿಯಂತಹ ಪ್ರಾಣಿಗಳನ್ನು ಸಮೀಕರಿಸಿ ನಂದಿಗೋಣ, ಭೈರವ ದೈವಗಳ ಆರಾಧನೆ; ಕಾಡಿನಲ್ಲಿದ್ದುಕೊಂಡು ಜನಸಾಮಾನ್ಯರಿಗೆ ಅದರಲ್ಲೂ ಕೃಷಿಕರಿಗೆ ತೊಂದರೆ ನೀಡುತ್ತಿದ್ದ ಕಾಡು ಹಂದಿ, ಹುಲಿಯಂತಹ ಪ್ರಾಣಿಗಳನ್ನು ಸಮೀಕರಿಸಿ ಪಂಜುರ್ಲಿ, ಇಲ್ಲವೆ ವಾರಾಹಿ, ಪಿಲಿಚಂಡಿ, ಪಿಲಿ ಚಾಮುಂಡಿ, ಯಂತಹ ದೈವಗಳ ಆರಾಧನೆಯನ್ನು ಕಾಣಬಹುದು.

ದೊಂಪದಲ್ಲಿ 'ಪೂ ಸಿಂಗಾರತನ ಪಾರಂಪರಿಕ ಕುಶಲಕರ್ಮಿಯು ಮಾರ್ಗದರ್ಶನದಂತೆ ಅಲಂಕಾರಿಕ ವ್ಯವಸ್ಥೆ ಮಾಡುತ್ತಾರೆ. ಇದರಲ್ಲಿ ದೈವದ ಮುಗಮೂರ್ತಿ ಅಂದರೆ ದೈವವನ್ನು ಪ್ರತಿನಿಧಿಸುವ ಆರಾಧನಾ ಶಕ್ತಿಯ ಶಕ್ತಿಶಾಲಿ ವ್ಯಕ್ತಿತ್ವವನ್ನು ಬಿಂಬಿಸುವ ಮುಖವಾಡ ಇಡುವಂತೆ ಈ ವ್ಯವಸ್ಥೆಯನ್ನು ಮಾಡುತ್ತಾರೆ. ಸಾಮಾನ್ಯವಾಗಿ ಪೂಕರೆ ಆಚರಣೆಯಲ್ಲಿ ಪುರುಷದೈವಗಳಿಗೆ ಆರಾಧನೆ ನಡೆಯುತ್ತದೆ. ಈ ದೈವಗಳನ್ನು ಪ್ರತಿನಿಧಿಸುವ ಚಿನ್ನ, ಬೆಳ್ಳಿ, ಕಂಚು, ಪಂಚಲೋಹ ಇಲ್ಲವೆ ಮರದ ಮುಖಗಳಿಗೆ ಮೀಸೆ ಇರುತ್ತದೆ. ಇದು ರಕ್ಷಕ ದೈವದ ಬಲಶಾಲಿ ವ್ಯಕ್ತಿತ್ವದ ಸಮೀಕರಣವನ್ನು ಸೂಚಿಸುತ್ತದೆ.

ಪೂಕರೆ ನಿಲ್ಲಿಸಿದ ನಂತರ ಯಾವ ಭಾಗಕ್ಕೆ ಪೂಕರೆ ಒಂದಷ್ಟು ಬಾಗುವುದೋ ಆ ವರ್ಷ ಆ ಭಾಗಕ್ಕೆ ಎಲ್ಲ ವಿಚಾರಗಳಲ್ಲೂ ಜಯ ಎಂಬುದು ನಂಬಿಕೆ.ಗದ್ದೆಯ ನಡುವೆ ನೆಡುವ ಪೂಕರೆ ನೂರಕ್ಕೆ ನೂರರಷ್ಟು ನೇರವಾಗಿ ನಿಲ್ಲುತ್ತದೆ ಎಂದು ಹೇಳಲಾಗುವುದಿಲ್ಲ. ಪೂಕರೆ ಯಾವುದಾದರೂ ಒಂದು ಕಡೆಗೆ ಸ್ವಲ್ಪವಾಗಿ ಬಾಗಿದರೆ ಆ ಭಾಗದ ಜನರಿಗೆ ತಮ್ಮ ಕೆಲಸ ಕಾರ್ಯಗಳಲ್ಲಿ ವರ್ಷಪೂರ್ತಿ ಜಯ ಇದೆ ಎಂದು ನಂಬುತ್ತಾರೆ. ಶಕುನಗಳನ್ನು ನಂಬುವುದನ್ನು ಇದು ಸೂಚಿಸುತ್ತದೆ.

ತುಳುವರು ತಮ್ಮ ಹಸಿವಿನ ಪೂರೈಕೆಗಾಗಿ ಭತ್ತದ ಬೆಳೆಯನ್ನು ಅವಲಂಬಿಸಿದವರು. ತುಳುವರ ಕಾಲಮಾನದ ಪದ್ದತಿ ಪ್ರಕಾರ ಬೊಂತೆಲ್‌ನಿಂದ ಪೆರಾರ್ದೆ ತಿಂಗಳಿನ ದಿನಗಳು ಬಹಳ ಮುಖ್ಯವಾದ ಕಾಲ. ವರ್ಷದ ಮೊದಲ ಏಣೆಲ್ ಬೆಳೆ ಮುಗಿದು ಎರಡನೇ ಸುಗ್ಗಿ ಬೆಳೆ ಬೆಳೆಯುವ ಕಾಲ. ಇಂತಹ ಸನ್ನಿವೇಶದಲ್ಲೂ ಭೂಮಿಯನ್ನು ಹದಗೊಳಿಸಿ ಬೀಜ ಹಾಕುವ, ನೇಜಿ ನೆಡುವ ಕಾಯಕದಲ್ಲಿ ಅವರು ಒಂದು ಬಗೆಯ ಸಂಭ್ರಮ ಹೊಂದುತ್ತಾರೆ. ತಾವು ಬೆಳೆಯುವ ಬೆಳೆಯನ್ನು ರಕ್ಷಿಸುವ ಅಲೌಕಿಕ ಶಕ್ತಿಗಳಿವೆ ಎಂದು ಅವರು ನಂಬುತ್ತಾರೆ. ಈ ನಂಬಿಕೆಯ ಸುತ್ತ ಆರಾಧನೆ ಮತ್ತು ಮನೋರಂಜನೆಯನ್ನು ಒಟ್ಟಾಗಿಸುವ ಪ್ರಯತ್ನ ಮಾಡಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿನಿಂದ ಜನವರಿ ತಿಂಗಳ ನಡುವೆ ಪೂಕರೆ ಉತ್ಸವ ಸಂಪನ್ನಗೊಳ್ಳುತ್ತದೆ.

ಊರ ಪೂಕರೆ ಗದ್ದೆಗೆ ಪೂಕರೆ ಹಾಕಿದ ನಂತರವೇ ಇತರ ಕಂಬುಲ ಗದ್ದೆಗಳಿಗೆ ಬಾರೆ ಹಾಕುವ ವಿಧಿ ನಡೆಸುತ್ತಾರೆ.

ಪೂಕರೆ ಆಚರಣೆಯ ಆಶಯ ಫಲವಂತಿಕೆಯ ಆಶಯವಾಗಿ ಒಂದು

ಊರಿನ ಮೂಲನಿವಾಸಿಗಳ ಪಾಲ್ಗೊಳ್ಳುವಿಕೆ ಅವರ ಕುಣಿತ ಗಳ ನಡುವೆ ನಂಬಿಕೆ ನಿಷೇಧಗಳನ್ನು ಒಳಗೊಂಡಿರುವುದನ್ನು ನೋಡಿದಾಗ ಕಂಬುಲ ಕೋರಿ ಉತ್ಸವ ಜನಸಾಮಾನ್ಯರು ನಂಬಿಕೆ ಮತ್ತು ನಿಷೇಧ ಎರಡನ್ನೂ ಜೀವನದಲ್ಲಿ ಅಳವಡಿಸಿಕೊಳ್ಳುವತ್ತ ಪರೋಕ್ಷ ಮಾರ್ಗದರ್ಶನ ನೀಡುತ್ತದೆ. ಕಂಬುಲವು ಫಲವಂತಿಕೆಯ ಆಚರಣೆಯಾಗಿದ್ದು ಕೋಣಗಳ ಓಟವು ಪೂಕರೆ ಅಚರಣೆ ಸಂದರ್ಭದಲ್ಲಿ ನಡೆಸಲಾಗುವ ಕ್ರೀಡೆಯಾಗಿರುವುದು ಗೋಚರಿಸುತ್ತದೆ. ಒಟ್ಟು ಪೂಕರೆ ಎಂದರೆ ಸಮೃದ್ಧಿಯ ಸಂಕೇತ. ತುಳುನಾಡಿನ  ನಾಗಬ್ರಹ್ಮ ಆಲಡೆಗಳು ಡಕ್ಕೆ ಬಲಿ, ಸಿರಿ ಆರಾಧನೆ , ನಾಗನಿಗೆ ಹಾಲೆರೆಯವುದು ನಾಗಬನಗಳನ್ನು ರಕ್ಷಿಸಿಕೊಳ್ಳುವುದು ನಾಗನನ್ನು ಫಲವಂತಿಕೆ ನೀಡುವ ದೈವ ಎಂದು ಆರಾಧಿಸುವುದು ಸಮೃದ್ಧಿ ಮತ್ತು ಸಂತಾನಾಭಿವೃದ್ಧಿ ಅಪೇಕ್ಷೆಯ ಆಶಯಗಳು ವ್ಯಕ್ತಗೊಳ್ಳುತ್ತವೆ.

ಪೂಕರೆ ಗದ್ದೆಗೆ ಪೂಕರೆ ಹಾಕುವ ಮೊದಲು ಊರಿನ ಎಲ್ಲಾ ಕೃಷಿಕರ ಕೃಷಿ ಚಟುವಟಿಕೆ ಮುಗಿದಿರಬೇಕು ಎನ್ನುವ ವಿಚಾರಗಳಿದ್ದುವು. ದುಡಿತದ ಆಯಾಸವನ್ನು ಪರಿಹರಿಸುವ ನಿಟ್ಟಿನಲ್ಲಿ ಕೋಣಗಳ ಓಟದ ಮನರಂಜನೆ,  ಉತ್ತಮ ಆಹಾರ ಸೇವನೆಯಂತಹ ವಿಚಾರಗಳೂ ಪೂಕರೆ ಉತ್ಸವ ಭಾಗವಾಗಿ ಕಾಣಿಸಿಕೊಳ್ಳುತ್ತದೆ. ಪೂಕರೆ ಉತ್ಸವದಲ್ಲಿ ಊರಿನ ಎಲ್ಲಾ ಸಮುದಾಯದವರು ನಿಯಮಿತವಾಗಿ ಮತ್ತು ಪೂರ್ಣವಾಗಿ ಪಾಲ್ಗೊಳ್ಳುವುದು ಊರ ಪ್ರತಿಯೊಬ್ಬರ ಕ್ಷೇಮ ಮತ್ತು ಊರಿನ ಒಗ್ಗಟ್ಟನ್ನು ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಬೆಸೆದಿರುವುದು ಕಂಡುಬರುತ್ತದೆ.

## ಅಧ್ಯಾಯ 5

# ಕಂಬುಲ ಕೋರಿ ಸಾಂಪ್ರದಾಯಿಕತೆ ಮತ್ತು ಪಲ್ಲಟಗಳು

5.1 ಸಾಮಾಜಿಕತೆ ಮತ್ತು ಆರ್ಥಿಕತೆ

5.2 ಭಾಗಿಯಾಗುವ ಸಮುದಾಯಗಳು

5.3 ವರ್ತಮಾನದ ಕಂಬುಲ ಮತ್ತು ಪೂಕರೆಯ ಸಂಬಂಧ

# ೫.ಕಂಬುಲ ಕೋರಿ ಸಾಂಪ್ರದಾಯಿಕತೆ ಮತ್ತು ಪಲ್ಲಟಗಳು

ಜಾಗತೀಕರಣ ಕಾಲಘಟ್ಟದಲ್ಲಿ ಪೂಕರೆ ಆಚರಣೆಯಲ್ಲಿ ವಿರೂಪ ಪಲ್ಲಟಗಳು ಕಾಣಿಸಿಕೊಂಡಿವೆ. ಜೀವನ ಸಂಸ್ಕೃತಿಯ ತಳಹದಿಯಾಗಿರುವ ಭತ್ತದ ಕೃಷಿ ಗದ್ದೆಗಳು ಮರೆಯಾಗುತ್ತಿವೆ. ಇರುವ ಗದ್ದೆಗಳಲ್ಲಿಯೂ ಭತ್ತ ಬೆಳೆಯುವುದು ಲಾಭದಾಯಕ ಅಲ್ಲ ಎಂದು ಪರಿಗಣಿಸಿರುವ ಕೃಷಿಕ ವಾಣಿಜ್ಯ ಬೆಳೆಗಳನ್ನು ಬೆಳೆಯಲಾರಂಭಿಸಿದ್ದಾನೆ. ಭತ್ತ ಬೆಳೆಯುತ್ತಿದ್ದ ಕಂಬಳದಲ್ಲಿ ಅಡಿಕೆ ಬೆಳೆ ಬೆಳೆಯುವುದು ಕಂಡುಬರುತ್ತದೆ. ಭತ್ತದ ಗದ್ದೆ ಇಲ್ಲದೆ ಪೂಕರೆ ಆಚರಣೆಗೆ ಅವಕಾಶ ನಿರಾಕರಿಸಲ್ಪಟ್ಟಿದೆ.

ಬದಲಾಗಿರುವ ಆರ್ಥಿಕತೆ ಮತ್ತು ಜೀವನ ಮೌಲ್ಯಗಳು ಕೃಷಿಯನ್ನು ಮೂಲೆಗುಂಪು ಮಾಡಿದೆ. ಸಂಪೂರ್ಣ ನಗರೀಕರಣವಾಗಿರುವುದರ ಫಲವಾಗಿ ಇಲ್ಲಿನ ಭತ್ತದ ಗದ್ದೆಗಳು ಮರೆಯಾಗಿವೆ. ಕಂಬಲ ಗದ್ದೆಗಳಿದ್ದ ಜಾಗಗಳಲ್ಲಿ ಕಟ್ಟಡಗಳು ಮನೆಗಳು, ಫ್ಯಾಕ್ಟರಿಗಳು ತಲೆ ಎತ್ತಿವೆ. ಆಡಳಿತ ನಡೆಸುವ ವ್ಯವಸ್ಥೆಗಳು ಸೂಕ್ಷ್ಮವಾಗಿ ಆಲೋಚಿಸದೆ ನೈಸರ್ಗಿಕ ಜೀವನದ ಇನ್ನೊಂದು ಮುಖವನ್ನು ನಿರ್ಲಕ್ಷಿಸಿ ಜೀವನ ಸಂಸ್ಕೃತಿಯ ಬೇಕು ಬೇಡಗಳನ್ನು ಸರಿಯಾಗಿ ಅಳೆದು ತೂಗದೆ ನಿರ್ಮಿಸಿದ ರೈಲು ಮಾರ್ಗಗಳು, ಹೆದ್ದಾರಿಗಳು, ಕಟ್ಟಡಗಳು, ಅಭಿವೃದ್ಧಿ ಪ್ರಕ್ರಿಯೆಗಳ ನಾಗಾಲೋಟದ ಎದುರು ಕೃಷಿ ಸಂಸ್ಕೃತಿಯ ಧ್ವನಿ ಕ್ಷೀಣವಾಗಿದೆ.

ಪಡುಪಣಂಬೂರು, ಬಜ್ಪೆ, ಕಾವೂರು, ಕುಂಜತ್ತಬೈಲ್, ಸುರತ್ಕಲ್, ತೋಕೂರು, ಕಟ್ಲ, ಕಾಟಿಪಳ್ಳ, ಪ್ರದೇಶದ ಕಂಬಲ ಗದ್ದೆಗಳನ್ನು ಪಣಂಬೂರು ಬಂದರ್, ಎಂಸಿಎಫ್, ಎಂಆರ್‌ಪಿಎಲ್, ಬಿಎಸ್‌ಎಫ್, ಯುಪಿಸಿಎಲ್, ಬೈಕಂಪಾಡಿ ಇಂಡಸ್ಟ್ರಿಯಲ್ ಏರಿಯಾ, ಯೆಯ್ಯಾಡಿ, ಎಸ್‌ಇಝೆಡ್ ಯೋಜನೆಗಳಿಗೆ ಬಳಸಿಕೊಳ್ಳಲಾಗಿದೆ. ಈ ಭಾಗದ ಪೂಕರೆ ಗದ್ದೆಗಳು ಸಂಪೂರ್ಣ ನಾಶವಾಗಿದೆ.

ತುಳುನಾಡಿನಲ್ಲಿ ಉಳಿದಿರುವ ಕೃಷಿ ಚಿಂತನೆಗೂ ಆಧುನಿಕ ವಿಚಾರಗಳು, ತಪ್ಪು ವ್ಯಾಖ್ಯಾನಗಳ ದುಷ್ಪರಿಣಾಮ ಎಸಗಿದೆ. ಯಾಂತ್ರೀಕರಣ ಮತ್ತು ರಾಸಾಯನಿಕಗಳ ಬಳಕೆ ಯಾವಾಗ ಕೃಷಿಯಲ್ಲಿ ಆರಂಭವಾಯಿತೋ ತುಳುನಾಡಿನ ಕೃಷಿ ಗದ್ದೆಗಳ ಪರಂಪರೆ ಮತ್ತು ಬಳಕೆಯಲ್ಲಿಯೂ ವ್ಯತ್ಯಾಸಗಳು ಕಂಡು ಬಂತು. ಕೇವಲ ಎತ್ತು ಕೋಣಗಳನ್ನು ಬಳಸಿ ಉಳುಮೆ ಮಾಡುವುದು ಹಟ್ಟಿಗೊಬ್ಬರ ಮತ್ತು ತರಗೆಲೆ ಮತ್ತು ಮಣ್ಣು ಸುಟ್ಟು ಗೊಬ್ಬರವಾಗಿ ಬಳಸುವ ಕ್ರಮ ನಿಂತು ಹೋಯಿತು. ಇದೀಗ ಸಾಂಪ್ರದಾಯಿಕ ಕೃಷಿ ನಷ್ಟದ ವೃತ್ತಿಯಾಗಿ ಭತ್ತದ ಗದ್ದೆಗಳು ಮರೆಯಾಗಿ ಪೂಕರೆ ಆಚರಣೆ ಮರೆಯಾಗಿದೆ.

ನೆಲ್ಯಾಡಿಯ ಹತ್ತು ಎಕ್ರೆಗೂ ವಿಶಾಲವಾದ ಕಂಬಳದಲ್ಲಿ ಪೂಕರೆ ಆಚರಣೆ

ನಿಂತು ಎಷ್ಟು ವರ್ಷಗಳಾಗಿವೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲವಾದರೂ ಈ ಗದ್ದೆಯಲ್ಲಿ ಪೂಕರೆ ಉತ್ಸವದ ಕುರುಹುಗಳು ಈಗಲೂ ಇವೆ.

ವಾಮದ ಪದವಿನ ಬರ್ಕೆಯಲ್ಲಿನ ಕಂಬಳ ನಿಂತು ಹತ್ತಾರು ವರ್ಷಗಳೇ ಸಂದಿವೆ. ಉಳ್ಳಾಲ ಬೈಲಿನ ಪೂಕರೆ ಹೈವೇ ಬದಿಯಲ್ಲಿ ಸಿಮೆಂಟ್ ಕಟ್ಟೆಯೊಂದರಲ್ಲಿ ಕಟ್ಟಳೆಯಾಗಿ ಆಚರಣೆಗೊಳ್ಳುತ್ತಿದೆ. ಇಲ್ಲಿನ ಕಂಬಳ ಗದ್ದೆಯನ್ನು ರಾಷ್ಟ್ರೀಯ ಹೆದ್ದಾರಿ ಕಟ್ಟಡಗಳು ಆವರಿಸಿಕೊಂಡಿದೆ. ಮೇರಮಜಲು ಗ್ರಾಮದ ನಾಲದೆಯ ಕಂಬಳ ಕೋರಿ ಮತ್ತು ಬ್ರಹ್ಮರಕೂಟ್ಲು ಬೂಡುವಿನ ಕಂಬಳಗಳು ನಿಂತು ವರ್ಷಗಳೇ ಕಳೆದಿವೆ. ಈ ರೀತಿ ಅನೇಕ ಪೂಕರೆ ಕಂಬುಲಗಳು ಹೇಳ ಹೆಸರಿಲ್ಲದೆ ನಾಶವಾಗಿದೆ.

ಪೂಕರೆ ಆಚರಣೆ ಮೂಲತಃ ಕೃಷಿ ಸಂಬಂಧಿ ಬುಡಕಟ್ಟು ಜನಾಂಗಗಳ ಆಚರಣೆಯಾಗಿ ಕಂಡುಬರುತ್ತಿದೆ. ಈಗ ಉಳಿದಿರುವ ಪೂಕರೆ ಆಚರಣೆ ಮೇಲೆ ಹಿಂದೂ ಪುರಾಣಗಳ ಪ್ರಭಾವ ಕಂಡು ಬರುತ್ತಿದೆ. ಪುತ್ತೂರು ತಾಲೂಕಿನ ಇರಂತಾಜೆಯಲ್ಲಿ ನಡೆಯುವ ಹನುಮಂತನ ಕೋಲವನ್ನು ಇದಕ್ಕೊಂಡು ಉದಾಹರಣೆಯನ್ನಾಗಿಸಬಹುದು. ತುಳುನಾಡಿನಲ್ಲಿ ಕಾಡುಹಂದಿ– ಪಂಜುರ್ಲಿ, ಇದು ಇತ್ತೀಚೆಗೆ ವಿಷ್ಣು ಪುರಾಣದ ವಾರಾಹಿ ರೂಪದೊಂದಿಗೆ ತಳುಕು ಹಾಕಿಕೊಂಡಿದೆ. ಹುಲಿ–ಪಿಲಿಚಂಡಿ, ಪಿಲಿಚಾಮುಂಡಿ, ಪಿಲಿದೈವ, ವ್ಯಾಘ್ರ ಚಾಮುಂಡಿ, ದೇವಿ ಪುರಾಣದ ಹುಲಿವಾಹಿನಿ ದುರ್ಗೆಯೊಂದಿಗೆ ತಳುಕು ಹಾಕಿಕೊಂಡಿದೆ. ತಮ್ಮ ಕೃಷಿ ಚಟುವಟಿಕೆಗಳಿಗೆ ತೊಂದರೆ ನೀಡುವ ಪ್ರಾಣಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಶಕ್ತಿ ಪ್ರಕೃತಿಗೆ ಇದೆ ಎನ್ನುವ ನೆಲೆಯಲ್ಲಿ ತೊಂದರೆ ನೀಡುವ ಪ್ರಾಣಿಗಳನ್ನೇ ಪ್ರಕೃತಿಯ ಶಕ್ತಿಯ ಪ್ರತೀಕವಾಗಿ ಪ್ರಾಣಿಗಳ ನೆಲೆಯಲ್ಲಿ ಆರಾಧಿಸಿರುವುದನ್ನು ಕಾಣಬಹುದಾಗಿದೆ. ಮೂಲತ: ಮಂಗನ ಆರಾಧನೆಯೂ ಮುಂದಿನ ದಿನಗಳಲ್ಲಿ ಹನುಮಂತನ ಆರಾಧನೆಯಾಗಿ ರೂಪಾಂತರ ಗೊಂಡಿರುವುದನ್ನು ಊಹಿಸಬಹುದಾಗಿದೆ. ಪುರಾಣ ಆಧಾರಿತ ಆಚರಣೆಯಲ್ಲಿ ಕೋಲ ನೇಮ ಇರುವುದಿಲ್ಲ. ಅಲ್ಲಿ ಪೂಜೆ, ಹೋಮ. ಆರತಿ ಇರುತ್ತದೆ.

ಪೂಕರೆಯ ಅಲಂಕಾರಕ್ಕೆ ಬಳಕೆಯಾಗುತ್ತಿದ್ದ ಪಾದೆ ಹೂ, ಕೇಪುಳ ಹೂ, ಪಿಂಗಾರಗಳ ಬದಲಿಗೆ ಈಗ ಮಾರುಕಟ್ಟೆಯಲ್ಲಿ ಸಿಗುವ ಹೂಗಳ ಅಲಂಕಾರ ಕಂಡು ಬರುತ್ತದೆ.

ಭತ್ತದ ಬೀಜ ಬಿತ್ತುವ ಇಲ್ಲವೆ ಭತ್ತದ ಸಸಿ ನಾಟಿ ಮಾಡುತ್ತಿದ್ದಾಗ ಆಚರಣೆಯಾಗುತ್ತಿದ್ದ ಪೂಕರೆ ಬದಲಾದ ಸ್ಥಿತಿಯಲ್ಲಿ ನಾಟಿ ಮಾಡಿದ ಬಲಿತಿರುವ ಭತ್ತದ ತೆನೆಗಳ ಸಂದರ್ಭದಲ್ಲಿ ಆಚರಣೆ ನಡೆಯುತ್ತದೆ. ಇದು ಈಗ ಕೇವಲ ನಂಬಿಕೆಯ ಆಚರಣೆಯಾಗಿ ಮೂಲ ವಾಸ್ತವ ನೆಲೆಗಟ್ಟನ್ನು ಕಳೆದುಕೊಂಡಿದೆ.

ಉಡುಪಿ ಜಿಲ್ಲೆಯ ಕಂಬುಲ ಆಚರಣೆಯಲ್ಲಿ ಪನಿಕುಲ್ಲುನೆ ದೆಯ್ಯಾಲೆ ನಲಿಕೆ ಸಿರಿಗಳು, 1001 ಭೂತಗಳು, 101 ಗಂಡಗಣಗಳು ಇತ್ಯಾದಿ ಚಿತ್ರಣಗಳು ಸಿಗುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಆಚರಣೆಗೊಳ್ಳುತ್ತಿರುವ ಪೂಕರೆಗಳಲ್ಲಿ ಪನಿಕುಲ್ಲುನೆ

ಕ್ರಮಕ್ಕೆ ಹೆಚ್ಚಿನ ಒತ್ತು ಕಂಡುಬರುವುದಿಲ್ಲ. ಇಲ್ಲಿ ಪೂಕರೆ ಆಚರಣೆಗೆ ಸಿದ್ದಗೊಂಡ ಗದ್ದೆಗೆ ಮತ್ತು ಪರಿಕರಗಳಿಗೆ ಯಾವುದೇ ತೊಂದರೆಯಾಗದಂತೆ ಆಚರಣೆ ಆರಂಭವಾಗುವತನಕ ಕಾಯುವ ವಿಚಾರ ವ್ಯಕ್ತವಾಗುತ್ತದೆ. ಬಂಟ್ವಾಳ ತಾಲೂಕು ಮತ್ತು ಮಂಗಳೂರು ತಾಲೂಕಿನ ಆಚರಣೆಯಲ್ಲಿ ಪನಿಕುಲ್ಲುನೆ ನಿರ್ವಹಿಸುವ ಸಮುದಾಯ ರಾತ್ರಿ ಮನೆ ಮನೆಗೆ ಹೋಗಿ ಅಕ್ಕಿ ತೆಂಗಿನಕಾಯಿ ಹಣ ಪಡೆಯುತ್ತಿದ್ದ ವಿಚಾರಗಳು ಕಂಡುಬರುತ್ತದೆ. ಡೋಲು ಬಡಿದುಕೊಂಡು ಮದ್ಯಸೇವಿಸಿ ಕುಣಿತ ಹಾಡು ಮೂಲಕ ಸಂಭ್ರಮಿಸುವುದು, ಪೂಕರೆ ಆಚರಣೆ ನಡೆಸುವ ಆಡಳಿತ ಮನೆಗಳವರ ಮೇಲೆ ಕೋಪ ಇದ್ದರೆ ಅದನ್ನು ಪರೋಕ್ಷವಾಗಿ ಬೈಗುಳದ ಮೂಲಕ ವ್ಯಕ್ತಪಡಿಸುವುದು ಕಂಡು ಬರುತ್ತದೆ.

### ೫.೧ ಸಾಮಾಜಿಕತೆ ಮತ್ತು ಆರ್ಥಿಕತೆ

ಪೂಕರೆ ಆಚರಣೆಗೆ ಮೂಲ ವೇದಿಕೆಯಾಗಿರುವ ಭತ್ತದ ಕೃಷಿ ಪ್ರಮುಖ ಆರ್ಥಿಕ ಮೂಲವಾಗಿತ್ತು. ಪೂಕರೆ ಆಚರಣೆಯಲ್ಲಿ ಊರಿನ ಸಮುದಾಯಗಳು ಭಾಗವಹಿಸುತ್ತಿದ್ದವು. ಭತ್ತದ ಗದ್ದೆಗಳ ಒಡೆತನ ಹೊಂದಿದವರು ಪೂಕರೆ ಆಚರಣೆಯಲ್ಲಿ ಯಜಮಾನನ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರಿಗೆ ಭತ್ತದ ಗದ್ದೆಯಿಂದ ಬರುವ ಆದಾಯ ಆರ್ಥಿಕ ಬಲ ನೀಡಿತ್ತು.

ಆರಂಭದಲ್ಲಿ ಶ್ರಮಕೌಶಲ್ಯಕ್ಕೆ ಸಿಗುತ್ತಿದ್ದ ಗೌರವ ಮಾತ್ರವಲ್ಲ ಅದನ್ನು ನಿರ್ವಹಿಸಲು ಉಂಬಳಿ ತರದ ಆದಾಯ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ಆಚರಣೆಯಲ್ಲಿ ಪಾಲ್ಗೊಳ್ಳುವ ಮೂಲಕ ಗೌರವ ಅಲ್ಲದೆ ಆರ್ಥಿಕ ಪ್ರತಿಫಲವನ್ನೂ ನಿರೀಕ್ಷಿಸಬಹುದಾಗಿತ್ತು. ಈ ಕಾರಣದಿಂದ ಎಲ್ಲಾ ಸಮುದಾಯದವರು ಪೂಕರೆಯ ಚಾಕರಿಯನ್ನು ಕೌಟುಂಬಿಕ ಪರಂಪರೆಯಾಗಿ ಮುಂದುವರಿಸಿಕೊಂಡು ಬಂದಿದ್ದರು.

ಕಂಬಲಕೋರಿಯ ಚಾಕರಿ ವ್ಯವಸ್ಥೆಯನ್ನು ನೋಡಿದಾಗ ಕಂಬಲ ಕೋರಿ ಆಚರಣೆಯಲ್ಲಿ ಒಂದು ಸಮುದಾಯಕ್ಕೆ ಸೇರಿದ ಒಂದು ಕುಟುಂಬ ಮಾತ್ರ ಈ ಗೌರವ ಪಡೆಯುತ್ತಿತ್ತು ಇದು ಒಂದು ರೀತಿಯ ದರ್ಪ ಅಹಂಕಾರ ದಬ್ಬಾಳಿಕೆಯ ಬೆಳವಣಿಗೆಗೆ ಪರೋಕ್ಷವಾಗಿ ಕಾರಣವಾಗಿರುವುದು ಕಂಡುಬರುತ್ತದೆ. ಇದು ಮೇಳು ಕೀಳು ವ್ಯವಸ್ಥೆಗೆ ನಾಂದಿಯಾದುದನ್ನೂ ಗಮನಿಸಬಹುದು. ಉತ್ಸವದಲ್ಲಿ ಗೌರವ ಪಡೆಯುತ್ತಿದ್ದ ಕುಟುಂಬಗಳು ತಮ್ಮ ಸಮುದಾಯದಲ್ಲಿ ತಾವು ಶ್ರೇಷ್ಟರು ಎಂಬ ಭಾವನೆ ಬೆಳೆಸಿಕೊಂಡದ್ದು ಕಾಣಸಿಗುತ್ತದೆ. ಮಕ್ಕಳ ಮದುವೆ ಸಂದರ್ಭದಲ್ಲಿ ಈ ವಿಚಾರಗಳು ಗೋಚರಿಸುತ್ತಿತ್ತು. ಮದುವೆಯಾಗುವ ಹುಡುಗ ಇಲ್ಲವೆ ಹುಡುಗಿ ಪೂಕರೆ ಆಚರಣೆಯಲ್ಲಿ ಗೌರವ ಪಡೆಯುವ ಕುಟುಂಬದವರಾಗಿದ್ದರೆ ಅವರು ಇನ್ನೊಂದು ಊರಿನ ಅದೇ ರೀತಿಯಲ್ಲಿ ಪೂಕರೆ ಆಚರಣೆಯಲ್ಲಿ ಗೌರವ ಪಡೆಯುವ ಕುಟುಂಬಗಳ ಸಂಬಂಧ ಬೆಳೆಸಲು ಉತ್ಸುಕರಾಗಿರುತ್ತಿದ್ದರು.

ಪೂಕರೆ ಆಚರಣೆ ಮತ್ತು ನಿರ್ವಹಣೆಯ ಹೊಣೆಯನ್ನು ಸಾಮೂಹಿಕವಾಗಿ

ನಡೆಸಲಾಗುತ್ತಿದ್ದರೂ ಆಡಳಿತ ವ್ಯವಸ್ಥೆಯ ಮಜಲುಗಳು ಕಾಣಬರುತ್ತದೆ. ಸಾಮಾಜಿಕ ನ್ಯಾಯ ವ್ಯವಸ್ಥೆಗೆ ಪೂರಕವಾಗಿ ಕಾರ್ಯನಿರ್ವಹಿಸುವ ಬದ್ದತೆ ಇರುವ ಊರ ಉತ್ಸವದ ಕೇಂದ್ರ ಮನೆಗಳಾಗಿ ಆರಂಭದಲ್ಲಿ ಗುರುತಿಸಿಕೊಂಡ ಬೂಡು, ಬರಿಕೆ, ಗುತ್ತುಗಳು ಮನೆಗಳು ಒಂದು ಹಂತದಲ್ಲಿ ಊರ ಸಮುದಾಯ ಮತ್ತು ತನಗೆ ಸಂಬಂಧ ಇಲ್ಲದಂತೆ ಗುರುತಿಸಿಕೊಂಡದ್ದು ಪಾಳೇಗಾರಿಕೆ ವ್ಯವಸ್ಥೆಯನ್ನು ಪೋಷಿಸಿರುವುದು ಕಂಡು ಬರುತ್ತದೆ.

ತುಳುನಾಡಿನ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಕೃಷಿಯನ್ನು ಅವಲಂಬಿಸಿತ್ತು. ಭತ್ತದ ಕೃಷಿ ಪ್ರಮುಖವಾಗಿದ್ದರೂ ತೆಂಗು, ಅಡಿಕೆ, ಹಣ್ಣು ಹಂಪಲು, ಹೂ, ತರಕಾರಿಗಳು,ಧಾನ್ಯಗಳನ್ನು ಬೆಳೆಯುತ್ತಿದ್ದರು. ಮೀನುಗಾರಿಕೆ, ಕಾಡುತ್ಪತ್ತಿ ಸಂಗ್ರಹಣೆ, ಕುಶಲಕರ್ಮಿ ಕೆಲಸಗಳು, ಕೃಷಿಯನ್ನೇ ಅವಲಂಬಿಸಿರುವುದು ಕಂಡು ಬರುತ್ತಿದೆ. ಮಾತ್ರವಲ್ಲ ಈ ಭಾಗದ ಜನ ಕೃಷಿಯಿಂದಲೇ ಸ್ವಾವಲಂಬಿಗಳಾಗಿದ್ದರು. ಕೃಷಿಗೆ ಪೂರಕ ವೃತ್ತಿಯಾಗಿ ಅವರು ಗೋವು ಪಾಲನೆ ಮಾಡುತ್ತಿದ್ದರು ಎತ್ತು ದನಕರುಗಳು, ಎಮ್ಮೆ ಕೋಣಗಳು, ಆಡು ಸಾಕಣೆ, ಇನ್ನು ಕೆಲವೊಂದು ಕಡೆ ಹಂದಿ ಸಾಕಣೆಗಳನ್ನೂ ಮಾಡುತ್ತಿದ್ದರು. ಕೃಷಿಗೆ ಪೂರಕವಾದ ಕುಶಲಕರ್ಮಿಗಳಾಗಿಯೂ ಗುರುತಿಸಿಕೊಳ್ಳುತ್ತಿದ್ದರು. ಉಳುವ ನೇಗಿಲು ತಯಾರಿಸುವುದು, ಎತ್ತುಗಳ ಕೊರಳಿಗೆ ಉಳುವ ಸಮಯದಲ್ಲಿ ಕಟ್ಟುವ ನೊಗ ತಯಾರಿಸುವುದು, ಎರುಮೊಟ್ಟುನ ಪಲಾಯಿ ಇಲ್ಲವೆ ಉತ್ತ ಗದ್ದೆಯನ್ನು ಸಮತಟ್ಟು ಮಾಡಲು ಉಪಯೋಗಿಸುವ ಹಲಗೆ, ಪಣೆ ಇಲ್ಲವೆ ಬಾವಿ ಕೆರೆಗಳಿಂದ ನೀರು ತೆಗೆಯುವ ಏತ ತಯಾರಿ, ಹಾರೆ, ಪಿಕ್ಕಾಸಿ, ಕೊಡಲಿ, ಕತ್ತಿ , ಬೇಟೆಗೆ ಬಳಸುವ ಭರ್ಜಿ ತಯಾರಿ, ಮೀನು ಹಿಡಿಯುವ ಬಲೆ ತಯಾರಿ, ದೋಣಿ ತಯಾರಿ, ಭತ್ತ ಅಕ್ಕಿ ಲೆಕ್ಕ ಮಾಡುವ ಕಲಸಿಗೆ, ಕೊಂಡೆ, ಪಾವು, ಸೇರು ಗಾತ್ರದ ಮರದ ಇಲ್ಲವೆ ಲೋಹದ ಮಾಪನಗಳನ್ನು ತಯಾರಿಸುವುದು. ತೆಂಗಿನ ನಾರಿನಿಂದ ಉರಿಹಗ್ಗ ತಯಾರಿ, ಮಗ್ಗದ ಮೂಲಕ ಹತ್ತಿಬಟ್ಟೆ ತಯಾರಿ, ಚಪ್ಪಲಿ ತಯಾರಿ, ಕೂದಲು ಕತ್ತರಿಸುವುದು, ಬಟ್ಟೆ ಮಡಿ ಮಾಡುವುದು, ಎಣ್ಣೆ ತೆಗೆಯುವುದು, ಚಿನ್ನದ ಮತ್ತು ಲೋಹದ ಕೆಲಸ ಮಾಡುವುದು, ಎತ್ತಿನ ಗಾಡಿ ಓಡಿಸುವುದು, ಕೊಡಲಿಯಿಂದ ಕಟ್ಟಿಗೆ ಕಡಿದು ತಯಾರಿ ಮಾಡುವುದು, ಕಾಡಿನಲ್ಲಿ ಸಿಗುವ ಮದ್ದಿನ ಗಿಡಗಳನ್ನು ಹಣ್ಣುಗಳನ್ನು ಉಪಯೋಗಿಸಿ ಮದ್ಯ ತಯಾರಿಸುವುದು, ಶೇಂದಿ ತೆಗೆಯುವುದು, ಮೀನು ಹಿಡಿದು ಮಾರುವುದು, ಜೇನು ತೆಗೆಯುವುದು, ಕಾಡಿನ ಉತ್ಪತ್ತಿಗಳನ್ನು ಸಂಗ್ರಹಿಸಿ ಬೇಕಾದವರಿಗೆ ಮಾರುವುದು, ಈಂದ್ ಮರವನ್ನು ಸಕಾಲದಲ್ಲಿ ಕಡಿದು ಅದರ ಹುಡಿ ತಯಾರಿಸುವುದು, ಮದ್ದು ತಯಾರಿಸಿ ಮಾರುವುದು, ಮೀನುಕಟ್ಟಿಕೊಡಲು ಕಾಡಿನ ಎಲೆ ಸಂಗ್ರಹಿಸುವುದು. ಯುದ್ದ ಕಲೆಗಳಾದ ತುಳುನಾಡಿನ ಯುದ್ದ ವಿದ್ಯೆಯನ್ನು ಕಲಿಸುವುದು ಅಕ್ಷರ ಕಲಿಸುವುದು, ಜ್ಯೋತಿಷ್ಯ ಹೇಳುವುದು, ಶಿಲ್ಪದ ಕೆಲಸ ಮಾಡುವುದು, ಬಾಣಂತಿತನದ ಕೆಲಸ ಮಾಡುವುದು, ಮನೆಯ ಸಹಾಯಕರಾಗಿ ಕೆಲಸ ಮಾಡುವುದು, ತೆಂಗಿನ ಕಂಗಿನ ಮರಕ್ಕೆ ಹತ್ತಿ ಕಾಯಿ ಕೀಳುವುದು, ಕಬ್ಬು ರಸದಿಂದ ಬೆಲ್ಲ ತಯಾರಿಸುವುದು, ಕಲಿ ಬೆಲ್ಲ ಇಲ್ಲವೆ ಶೇಂದಿಯಿಂದ

ಬೆಲ್ಲ ತಯಾರಿಸುವುದು. ಅಡುಗೆ ತಯಾರಿಸಲು ಬೇಕಾದ ಮಣ್ಣಿನ ಪಾತ್ರೆಗಳನ್ನು ತಯಾರಿಸುವುದು. ಮುಂತಾದ ಹತ್ತು ಹಲವು ಕೃಷಿಗೆ ಪೂರಕವಾದ ವೃತ್ತಿಗಳು ಇಲ್ಲಿನ ಜನರ ಕಸುಬಾಗಿ ವೃತ್ತಿಯಾಗಿ ಮುಂದೆ ಅದೇ ವೃತ್ತಿಗಳು ವಂಶಪಾರಂಪರ್ಯವಾಗಿ ಬೆಳೆದು ಅವುಗಳು ಸಮುದಾಯಗಳಾಗಿ ರೂಪಾಂತರಗೊಂಡಿರುವುದನ್ನು ಕಾಣಬಹುದು. ಆಯಾ ಸಮುದಾಯಗಳ ಒಂದು ಮನೆತನ ಪೂಕರೆ ಆಚರಣೆಯಲ್ಲಿ ಚಾಕರಿ ನಿರ್ವಹಿಸುವ ಮೂಲಕ ಗೌರವ ಪಡೆಯುತ್ತಿದ್ದುದು ಕಂಡು ಬರುತ್ತದೆ.

ಊರಿನ ಸಮುದಾಯಗಳ ನಡುವೆ ವೈಯ್ಯಕ್ತಿಕ ಇಲ್ಲವೇ ಸಾಮೂಹಿಕ ಗಲಭೆ ಘರ್ಷಣೆಗಳಿದ್ದರೂ ಅದನ್ನು ಪೂಕರೆ ಆಚರಣೆಯ ದೈವಗಳ ನೇಮ ಸಂದರ್ಭದಲ್ಲಿ ಪಂಚಾಯಿತಿಕೆ ನಡೆಸಿ ಇಲ್ಲವೆ ದೈವ ಪಾತ್ರಧಾರಿಯ ಮೂಲಕ ನ್ಯಾಯ ನಿರ್ಣಯ ಮಾಡುವ ವ್ಯವಸ್ಥೆಯೂ ಇತ್ತು. ಇಲ್ಲಿ ಸಾಮಾಜಿಕ ನ್ಯಾಯಕ್ಕೆ ಹೆಚ್ಚು ಒತ್ತು ನೀಡುವ ಆಶಯಗಳಿದ್ದರೂ ಅನೇಕ ಸಂದರ್ಭಗಳಲ್ಲಿ ತಪ್ಪುಗಳು ದೌರ್ಜನ್ಯಗಳು ನಡೆದಿರುವುದನ್ನು ಅಲ್ಲಗಳೆಯಲಾಗದು.

ತುಳುನಾಡಿನ ಗುತ್ತು ಮನೆತನಗಳು, ಬೀಡು ಮನೆತನಗಳು, ಬರಿಕೆ ಮನೆತನಗಳು ಕಂಬಲ ಕೋರಿ ಉತ್ಸವದ ಗಡಿ ಹಿಡಿದವರು ಹೆಸರಲ್ಲಿ ಆಡಳಿತವರ್ಗವಾಗಿಯೂ ಗುರುತಿಸಿಕೊಂಡಿದ್ದನ್ನು ಕಾಣಬಹುದು. ಈ ಆಡಳಿತ ವರ್ಗ ಪೂಕರೆ ಆಚರಣೆಯ ನೇಮರಾಧನೆ ವೇಳೆ ತಾವೇ ಮುಂದೆ ನಿಂತು ಊರಿನವರ ವೈಯ್ಯಕ್ತಿಕ ಇಲ್ಲವೆ ಸಮುದಾಯಿಕ ಜಗಳಗಳನ್ನು ಪರಿಹರಿಸುತ್ತಿದ್ದರು. ಇದಕ್ಕೆ ದೈವದ ನೆರವನ್ನು ಪಡೆಯಲಾಗುತ್ತಿತ್ತು. ಇತರ ಸಂದರ್ಭಗಳಲ್ಲಿ ಊರಿನ ಚಾವಡಿ ಇಲ್ಲವೆ ದೈವಕೇಂದ್ರದ ಎದುರು ಕುಳಿತು ಆರಾಧಿಸುವ ದೈವಕ್ಕೆ ಗೌರವ ಸಲ್ಲಿಸಿ ಮೊಕ್ತೇಸರ, ತಕ್ಕ, ಗಡಿಹಿಡಿದವರು, ಯಜಮಾನರು, ಉಳ್ಳಾಯ, ದೆಕ್ಕುಲು ಮುಂತಾದ ಹೆಸರಲ್ಲಿ ಕರೆಸಿಕೊಳ್ಳುತ್ತಿದ್ದ ಊರಿನ ಪೂಕರೆ ಆಚರಣೆಯ ನೇತೃತ್ವ ವಹಿಸುತ್ತಿದ್ದ ಮನೆತನದ ದೈವದ ಗಡಿಹಿಡಿದ ವ್ಯಕ್ತಿ ಈ ವ್ಯಾಜ್ಯಗಳನ್ನು ಪರಿಹರಿಸುತ್ತಿದ್ದ.ಆ ವ್ಯಕ್ತಿ ತನ್ನ ವಿವೇಕವನ್ನು ಉಪಯೋಗಿಸಿ ತಾನು ಆರಾಧಿಸುತ್ತಿದ್ದ ದೈವಗಳ ನಂಬಿಕೆಯ ಮೇಲೆ ತಾನು ಪಕ್ಷಾತೀತವಾಗಿ ವ್ಯವಹರಿಸುತ್ತಿದ್ದೇನೆ ಎನ್ನುವ ನೆಲೆಯಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದ. ಊರಿನ ಇಂತಹ ನ್ಯಾಯ ನಿರ್ಣಯ ವ್ಯವಸ್ಥೆಯಲ್ಲಿ ಊರವರಿಗೆ ಮತ್ತು ಸಮುದಾಯಕ್ಕೆ ನಂಬಿಕೆ ಇತ್ತು. ಕೆಲವೊಂದು ಸಂದರ್ಭದಲ್ಲಿ ನ್ಯಾಯ ಹೇಳುವ ವ್ಯಕ್ತಿತ್ವ ಮತ್ತು ಸೀಮಿತ ವಿಚಾರಗಳ ತಿಳುವಳಿಕೆ ಕೆಲವೊಂದು ಒತ್ತಡಗಳು ಈ ನ್ಯಾಯ ನಿರ್ಣಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ನಿರಾಕರಿಸಲಾಗದು.

### ೫.೨ ಭಾಗಿಯಾಗುವ ಸಮುದಾಯಗಳು

ಗುತ್ತು, ಬೂಡು, ಬರಿಕೆ, ಮುಂತಾದ ಹೆಸರಿನಿಂದ ಗುರುತಿಸಿಕೊಂಡ ಯಜಮಾನ

ಸ್ಥಾನಗಳು ಕಂಬಲಗಳ ಯಜಮಾನರಾಗಿರುವುದು ಕಂಡು ಬರುತ್ತದೆ. ಪೂಕರೆ ಆಚರಣೆಯ ಯಜಮಾನ ಸ್ಥಾನಗಳನ್ನು ಗಡಿಹಿಡಿದವರು, ಪಕ್ಕದವರು, ಅರಸುಸ್ಥಾನ ಎಂಬುದಾಗಿ ಕಂಡುಕೊಳ್ಳಬಹುದು. ಈ ಯಜಮಾನ ನೆಲೆಯಲ್ಲಿ ಭಾಗವಹಿಸುವ ಸಮುದಾಯವನ್ನು ಹೊರತುಪಡಿಸಿ ಊರಿನ ಇತರ ಸಮುದಾಯಗಳು ಆಚರಣೆಯಲ್ಲಿ ಚಾಕರಿ ನೆಲೆಯಲ್ಲಿ ಇಲ್ಲವೆ ಕಟ್ಟಳೆಯವರಾಗಿರುವುದು ಕಂಡು ಬರುತ್ತವೆ.

ಪೂಕರೆ ಆಚರಣೆಯ ಆಡಳಿತ ವ್ಯವಸ್ಥೆಯಲ್ಲಿ ಜೈನರು, ಬಂಟರು, ಬ್ರಾಹ್ಮಣರು, ಗೌಡರು ಮತ್ತು ಬಿಲ್ಲವರು ಕಂಡು ಬರುತ್ತಾರೆ. ಕೊಕ್ಕಡದಲ್ಲಿ ನಡೆಯುವ ಕಂಬಲಕೋರಿ ಉತ್ಸವದ ನೇತೃತ್ವವನ್ನು ತೋಡಿಲ್ಲಾಯ, ಎಡಪಡಿತ್ತಾಯ, ಶಬರಾಯ, ಉಪ್ಪಾರ್ಣ, ಬಾಳ್ತಿಲಾಯ ಮನೆತನಗಳು ವಹಿಸುತ್ತವೆ. ಅರೆಬೆಟ್ಟುನಲ್ಲಿ ನಡೆಯುವ ಕಂಬಲಕೋರಿ ಉತ್ಸವದ ನೇತೃತ್ವವನ್ನು ಅರೆಬೆಟ್ಟು, ಅಂತರಗುತ್ತು, ಪಾದೆಮನೆ, ಮಾಣಿ ಮನೆತನಗಳು ವಹಿಸುತ್ತವೆ. ಮೋರ್ಲದಲ್ಲಿ ಮೋರ್ಲ ಮನೆತನ, ಉಳ್ಳಾಲ ಗುತ್ತಿನಲ್ಲಿ ಉಳ್ಳಾಲಗುತ್ತು ಮನೆತನ ಹೀಗೆ ಊರಿನ ಪ್ರಮುಖ ಮನೆತನಗಳು ಊರಿನ ಉತ್ಸವದ ನೇತೃತ್ವನ್ನು ವಹಿಸುವುದರಿಂದ ಈ ಮನೆತನಗಳು ಪೂಕರೆ ಆಚರಣೆಯಲ್ಲಿ ಆಡಳಿತ ವರ್ಗವಾಗಿ ಗುರುತಿಸಲ್ಪಟ್ಟಿದೆ.

ಆಚರಣೆಯಲ್ಲಿ ಚಾವಡಿಯಲ್ಲಿ ಗಣಹೋಮ ಮಾಡುವುದು, ವಾಸ್ತು ವಿಚಾರ ತಿಳಿಸುವುದು, ಆಚರಣೆಯಲ್ಲಿ ಲೋಪಗಳಾದಾಗ ಪರಿಹಾರಕಂಡುಕೊಳ್ಳಲು ನೆರವು ನೀಡುವುದು ಮುಂತಾದ ವಿಚಾರಗಳನ್ನು ಮಾಡುತ್ತಿದ್ದ ತುಳು ತಂತ್ರಿವರ್ಗ ಪೂಕರೆ ಆಚರಣೆಯಲ್ಲಿ ಸಮುದಾಯ ನೆಲೆಯಲ್ಲಿ ಭಾಗವಹಿಸುತ್ತಿದ್ದುದು ಕಂಡು ಬರುತ್ತದೆ.

ಕೊಡಿಯಡಿಯಲ್ಲಿ ಬಟ್ಟೆಯ ಸಿಂಗರ್ತನ ಕಟ್ಟುವವರು, ತಳಿಪು ಮೂಲಕ ಶುದ್ಧೀ ಪ್ರಕ್ರಿಯೆ ನಡೆಸುವ ಪ್ರಕ್ರಿಯೆಯನ್ನು ಅನುವಂಶೀಯವಾಗಿ ನಡೆಸುವ ವ್ಯಕ್ತಿಯನ್ನು ಊರಿನ ಮಡಿವಾಳ ಎಂದು ಗುರುತಿಸುತ್ತಾರೆ.

ಪೂಕರೆ ಗದ್ದೆಯನ್ನು ಪೂಕರೆ ಆಚರಣೆಯ ಹಿಂದಿನ ದಿನ ಕಾಯುವ ಇಲ್ಲವೆ ಪನಿಕ್ ಕುಲ್ಲುನ ಕೆಲಸ ನಿರ್ವಹಿಸುವ ಕಾಪಡ ಕಾರ್ಯವನ್ನು ಕೊರಗರು, ಆದಿ ದ್ರಾವಿಡರು, ಮೇರರು ಮುಂಡಾಲ ಸಮುದಾಯ ನಿರ್ವಹಿಸುವುದು ಕಂಡು ಬರುತ್ತದೆ.

ಪೂಕರೆ ಹಾಕುವ, ಕೊಡಿಯಡಿ ದೊಂಪ ಹಾಕುವ ನೇತೃತ್ವವನ್ನು ನಿರ್ವಹಿಸುವ ಬೋಂಟ್ರ ಬಿಲ್ಲವ ಸಮುದಾಯದವರಾಗಿರುತ್ತಾರೆ.

ನಾಗಸ್ವರ, ಕೊಂಬು, ಬಾಂಕೆ, ನಗಾರಿ, ಮುಂತಾದ ಸಂಗೀತ ಪರಿಕರಗಳನ್ನು ನಿರ್ವಹಿಸುತ್ತಿದ್ದ ಸಮುದಾಯ ಮೊಯಿಲಿಗಳಾಗಿ ಗುರುತಿಸಿಕೊಳ್ಳುತ್ತಿದ್ದರು.

ಸಹಾಯಕ ಕೆಲಸಗಳನ್ನು ಮಾಡುತ್ತಿದ್ದ ಸಮುದಾಯ ಮೂಲ್ಯ ಸಮುದಾಯವಾಗಿ ಗುರುತಿಸಿಕೊಳ್ಳುತ್ತಿತ್ತು. ಇದನ್ನು ಮೂಲ್ಯಾದಿಗೆ ಎನ್ನುತ್ತಿದ್ದರು.

ಬಸವ ಸಾಕುವವರು, ದೈವದ ಮಾಣಿಗಳು ಇಲ್ಲವೆ ಪಾತ್ರಿಗಳು, ನೇಮ ಕಟ್ಟುವವರು ಬೇರೆ ಬೇರೆ ಸಮುದಾಯವಾಗಿ ಗುರುತಿಸಿಕೊಳ್ಳುತ್ತಿತ್ತು.

ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ದೈವಕ್ಕೂ ಒಂದೊಂದು ಸಮುದಾಯದವರು ಮಾಣಿಯಾಗುವ ಸಂಪ್ರದಾಯ ಇದ್ದು ಆಯಾ ಸಮುದಾಯಕ್ಕೆ ಪ್ರತಿನಿಧೀಕರಣ ಸಿಗುತ್ತದೆ. ಗುಡ್ಡಜಂಡಿ ದೈವಕ್ಕೆ ಬಂಟ ಸಮುದಾಯ, ಪಂಜುರ್ಲಿ ದೈವಕ್ಕೆ ಬಿಲ್ಲವ ಸಮುದಾಯ, ಬಂಟಜಾವದೆ ದೈವಕ್ಕೆ ಗಟ್ಟಿ ಸಮುದಾಯದ ನಿರ್ದಿಷ್ಟ ಮನೆಯವರು ಅನುವಂಶೀಯ ನೆಲೆಯಲ್ಲಿ ಮಾಣಿಯಾಗುವ ಮೂಲಕ ನಿರ್ದಿಷ್ಟ ಚಾಕರಿ ನಿರ್ವಹಿಸುತ್ತಾರೆ. ಹೀಗೆ ಪ್ರಾದೇಶಿಕ ಹಿನ್ನೆಲೆಯಲ್ಲಿ ಪೂಕರೆ ಆಚರಣೆಯಲ್ಲಿ ಕಾರ್ಯ ನಿರ್ವಹಿಸುವ ಸಮುದಾಯಗಳು ವ್ಯತ್ಯಾಸವಾಗುವುದುಂಟು.–

ನೇಮ ಕಟ್ಟುವ ಸಮುದಾಯವಾಗಿ ನಲಿಕೆಯವರು, ಪಂಬದರು, ಪರವರು ಪೂಕರೆ ಆಚರಣೆಯಲ್ಲಿ ಪಾಲು ಪಡೆಯುತ್ತಾರೆ.

ಭಂಡಾರ ಮನೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರು ಕೊಟ್ಟಾರಿ ಸಮುದಾಯವಾಗಿ ಗುರುತಿಸಿಕೊಂಡಿರುವುದು.

ಪೂಕರೆಯನ್ನು ಆಚಾರಿ ಸಮುದಾಯದ ಊರ ಆಚಾರಿ ನಿರ್ಮಿಸಿಕೊಡುವುದು ವಾಡಿಕೆ.

ಪೂಕರೆ ಕಂಬಲ ಆಚರಣೆಯಲ್ಲಿ ಕೊಕ್ಕಡದಲ್ಲಿ ಕಾಪೆ, ಬೋಂಟ್ರ, ಮುಂತಾದ ಪದನಾಮ ಕಂಡು ಬರುತ್ತದೆ. ಇವುಗಳು ಎಲ್ಲಾ ಒಂದು ಸಮುದಾಯಕ್ಕೆ ಸೀಮಿತಗೊಂಡಿರುವುದನ್ನು ಕಾಣಬಹುದು. ಪೂಕರೆ ಆಚರಣೆಯಲ್ಲಿ ಇವರಿಗೆ ನಿರ್ದಿಷ್ಟ ಚಾಕರಿ ಜವಾಬ್ದಾರಿಗಳಿರುತ್ತದೆ. ಪೂಕರೆ ಹಾಕುವ ನೇತೃತ್ವವನ್ನು ಬೋಂಟ್ರ ವಹಿಸುತ್ತಾನೆ. ಕಾಪೆ– ಕಂಬಲವನ್ನು ಕಾಯುವ ಕೆಲಸ ನಿರ್ವಹಿಸುತ್ತಾನೆ.

ಪೂಕರೆ ಸಿಂಗರಿಸುವ ಕೆಲಸವನ್ನು ಭಂಡಾರಿ ಸಮುದಾಯದ ವ್ಯಕ್ತಿ ನಿರ್ವಹಿಸುತ್ತಾನೆ. ಶುದ್ದಿ ಕಾರ್ಯವಾದ ತಳಿಪು ಹೊಣೆಗಾರಿಕೆ ಮಡಿವಾಳನದಾಗಿರುತ್ತದೆ..

ಪೂಕರೆ ಆಚರಣೆ ಸಂದರ್ಭದಲ್ಲಿ ಪೂಕರೆಯನ್ನು ಕೊಂಡು ಹೋಗಿ ಕಂಬಲ ಗದ್ದೆಗೆ ನೆಡುವ ಕೆಲಸವನ್ನು ಆಯಾ ಊರಲ್ಲಿ ಹೆಚ್ಚು ಜನಸಂಖ್ಯೆಯಲ್ಲಿ ಇರುವ ಕಠಿಣ ಪರಿಶ್ರಮಕ್ಕೆ ಹೆಸರಾದ ಜನಾಂಗಗಳು ಮಾಡುತ್ತವೆ. ಕೊಕ್ಕಡದಲ್ಲಿ ಮಲೆಕುಡಿಯರು, ಅರೆಬೊಟ್ಟುವಿನಲ್ಲಿ ಬಿಲ್ಲವರು, ಮೋರ್ಲದಲ್ಲಿ ಮುಂಡಾಲರು, ಉಳ್ಳಾಲ ಬೈಲು ಗುತ್ತುನಲ್ಲಿ ಆದಿದ್ರಾವಿಡ ಹೀಗೆ ಬೇರೆ ಬೇರೆ ಸಮುದಾಯಗಳು ಮಾಡುತ್ತಿದ್ದುದು ಕಂಡು ಬರುತ್ತದೆ.

ಗಾಣಿಗ ಸಮುದಾಯ ಪೂಕರೆ ಆಚರಣೆಗೆ ಬೇಕಾದ ಎಣ್ಣೆಯನ್ನು ಒದಗಿಸುತ್ತಿತ್ತು.

ಮಡಿವಾಳ ಸಮುದಾಯದ ಪ್ರತಿನಿಧಿ ಸಿಂಗರ್ತನ ಕಟ್ಟುವುದು, ದೈವದ ಪಾತ್ರಿಗಳ ಮತ್ತು ಪೂಕರೆ ಆಚರಣೆಗೆ ಬೇಕಾದ ಬಟ್ಟೆಗಳನ್ನು ಮಡಿಮಾಡುವ, ಆಚರಣೆಗೆ ಮೀನು ಒದಗಿಸುವ ಕೆಲಸವನ್ನು ಮರಕಲ ಸಮುದಾಯ, ಅಗತ್ಯ ಬಟ್ಟೆಗಳನ್ನು

ನೇಯ್ದುಕೊಡುವ ಜವಾಬ್ದಾರಿ ಮಗ್ಗ ಸಮುದಾಯ, ಅಗತ್ಯ ಬುಟ್ಟಿಗಳನ್ನು ಒದಗಿಸುವ ಕೆಲಸವನ್ನು ಕೊರಗ ಸಮುದಾಯ,

ಹೀಗೆ ಊರಿನ ಪ್ರತಿಯೊಂದು ವೃತ್ತಿಯ ಕುಟುಂಬ ಇಲ್ಲವೆ ಸಮುದಾಯದಿಂದ ಒಬ್ಬ ವ್ಯಕ್ತಿ ಆ ವೃತ್ತಿಯ ಮಾತ್ರವಲ್ಲ ಸಮುದಾಯದ ಪ್ರತಿನಿಧಿಯಾಗಿ ಈ ಕಂಬಳದ ಕೋರಿ ಉತ್ಸವದಲ್ಲಿ ಕಟ್ಟಲೆಯುವನಾಗಿ ಪಾಲ್ಗೊಳ್ಳುತ್ತಿದ್ದುದನ್ನು ಕಾಣಬಹುದಾಗಿದೆ.

## ೫.೩ ವರ್ತಮಾನದ ಕಂಬುಲ ಮತ್ತು ಪೂಕರೆಯ ಸಂಬಂಧ

ವರ್ತವಾನದ ಕಂಬುಲಗಳು ಓಟದ ಕೋಣದ ಕಂಬುಲಗಳಾಗಿ ಉಳಿದುಕೊಂಡಿವೆ. ಇಲ್ಲಿ ಪೂಕರೆ ಆಚರಣೆಗೆ ಅವಕಾಶವೇ ಇಲ್ಲ. ಮೂಲ ಪೂಕರೆ ಕಂಬುಲಗಳು ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ನಾಶಗೊಂಡಿದೆ. ಅಳಿದುಳಿದ ಬೆರಳೆಣಿಕೆ ಕಂಬುಲಗಳಲ್ಲಿ ಮಾತ್ರ ಪೂಕರೆ ಆಚರಣೆ ನಡೆಯುತ್ತಿದೆ.

ಆಧುನಿಕ ಕಂಬುಲವು ಒಂದು ಜನಪದ ಕ್ರೀಡೆ. ಅದು ಜನರಿಗೆ ಮನರಂಜನೆ ನೀಡುತ್ತದೆ. ಇದನ್ನು ಕೋಣಗಳ ಓಟದ ಕಂಬಲ ಎನ್ನುವುದು ಹೆಚ್ಚು ಸೂಕ್ತ. ಕೋಣಗಳ ಓಟದ ಕಂಬುಲದಲ್ಲಿ ಪ್ರತಿಷ್ಠೆ ಮತ್ತು ಜೂಜು ಪ್ರಮುಖ ವಿಚಾರವಾಗಿದೆ. ಕೋಣಗಳ ಓಟದ ಕಂಬುಲದಲ್ಲಿ ಪೂಕರೆ ಆಚರಣೆಯಲ್ಲಿರುವ ಆರಾಧನೆಯ ನೆಲೆ ಮತ್ತು ಕೃಷಿ ಸಮೃದ್ಧಿಯ ಆಶಯ ಇಲ್ಲ. ಇಲ್ಲಿ ಈಗ ಕಾನೂನಿನ ತೊಡಕು ಇದೆ.

ಪೂಕರೆ ಆಚರಣೆಯ ಸಂದರ್ಭದಲ್ಲಿ ಕೋಣಗಳನ್ನು ಮಾತ್ರವಲ್ಲದೆ ಎತ್ತುಗಳನ್ನು ಸಹ ಓಡಿಸುವ ಕ್ರಮ ಹಿಂದಿನಿಂದಲೇ ನಡೆದು ಬರುತ್ತಿತ್ತು. ಕುಶಾಲಿಗಾಗಿ ನಡೆಯುತ್ತಿದ್ದ ಈ ಓಟದಲ್ಲಿ ಮೆಚ್ಚುಗೆಗೆ ಪಾತ್ರವಾದ ಕೋಣಗಳಿಗೆ ಕಂಬುಲದಲ್ಲಿ ಬಾಳೆ ಇಲ್ಲವೆ ಸಿಯಾಳದ ಗೊನೆಗಳನ್ನು ಬಹುಮಾನವಾಗಿ ನೀಡುವ ಕ್ರಮ ಇತ್ತು. ಕೃಷಿಯೊಂದಿಗೆ ಮನರಂಜನೆಗೆ ಆರಂಭವಾದ ಕ್ರಮದಲ್ಲಿ ಮಾನವನ ಬದುಕಿನ ಹಸಿವಿನ ಪೂರೈಕೆಗೆ ಮೊದಲ ಆದ್ಯತೆ. ತರುವಾಯ ನಂಬಿಕೆ ಆಚರಣೆಗಳು, ಮುಂದಿನ ಹಂತದಲ್ಲಿ ಮನಸ್ಸಿಗೆ ಉಲ್ಲಾಸ ಕೊಡುವ ಕ್ರೀಡಾ ವಿನೋದಗಳು. ಹೀಗೆ ಹಸಿವಿನಿಂದ ಮುಂದುವರಿದು ಆಚರಣೆ ಕ್ರೀಡಾ ವಿನೋದಗಳು ಪೂಕರೆ ಆಚರಣೆ ಕಂಬಲದಲ್ಲಿ ಕೋಣಗಳ ಓಟಕ್ಕೆ ಅವಕಾಶ ನೀಡಿರುವುದನ್ನು ಗಮನಿಸಬಹುದು.

ಮೂಲದಲ್ಲಿ ಪೂಕರೆ ಆಚರಣೆಯ ಅಂಗವಾಗಿದ್ದ ಈ ಕೋಣಗಳ ಓಟವೇ ತರುವಾಯ ಸ್ಪರ್ಧೆಯ ವ್ಯಾಪ್ತಿಯೊಳಗೆ ಸೇರಿದಾಗ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರದ ಮೇಲ್ಮೈಸುವಿಕೆಗಾಗಿ ಪ್ರಬಲ ಜಾತಿ-ವರ್ಗದವರು ತಮ್ಮ ಪ್ರಾಬಲ್ಯವನ್ನು ಮೆರೆದರು. ಅವರಿಗೆ ಅದು ಪ್ರತಿಷ್ಠೆಯ ಕ್ಷೇತ್ರವಾಗಿ ಕಂಡಿತು. ವರ್ತಮಾನದಲ್ಲಿ ನಡೆಯುತ್ತಿರುವ ಕಂಬುಲಗಳ ಪೂರ್ಣ ಪಠ್ಯವನ್ನು ಕೋಣಗಳ ಓಟದ ಸ್ಪರ್ಧೆಗೆ ಕೇಂದ್ರೀಕರಿಸಿ ತರ್ಕಿಸಿದಾಗ ಅದು ಸಾಮಾಜಿಕ, ಆರ್ಥಿಕ, ರಾಜಕೀಯ ಆಯಾಮವುಳ್ಳ ಆಚರಣೆ ಎನ್ನುವ ತೀರ್ಮಾನಕ್ಕೆ ಬರಲು ಗ್ರಾಹ್ಯವಾಗುತ್ತದೆ.

ವರ್ತಮಾನದಲ್ಲಿ ಪೂಕರೆ ಆಚರಣೆಗೆ ಮತ್ತು ಓಟದ ಕೋಣಗಳ ಕಂಬುಳಗಳಿಗೆ ಯಾವುದೇ ಸಂಬಂಧ ಕಂಡು ಬರುವುದಿಲ್ಲ.

ಕದರಿ ಕಂಬುಲ, ಸುರತ್ಕಲ್ ಕಂಬುಲ, ತಲಪಾಡಿ ಕಂಬುಲ, ಪಜೀರ್ ಕಂಬುಲ, ಬಂಟ್ವಾಳ ಕಂಬುಲ, ಅರಿಬೈಲ್ ಕಂಬುಲ, ಪುತ್ತೂರು ಕಂಬುಲ, ಪಾಣೆಮಂಗಳೂರು ಕಂಬುಲ ಮಿಜಾರ್ ಕಂಬುಲ ಹೀಗೆ ಸಾಲುಗಟ್ಟಲೆ ಕಂಬುಲಗಳು ನಡೆಯುತ್ತಿದ್ದರೂ ಎಲ್ಲವೂ ಓಟದ ಕೋಣದ ಕಂಬುಲಗಳು. ಮಿಜಾರ್ ಕಂಬುಲದಲ್ಲಿ ಪೂಕರೆ ಆಚರಣೆ ನಡೆಯುತ್ತಿದೆ. ಮಂಗಳೂರು ತಾಲೂಕಿನಲ್ಲಿ ಉಳ್ಳಾಲ ಬೈಲ್, ಸೂರಿಂಜೆ, ಬಂಟ್ವಾಳದಲ್ಲಿ ಅರೆಬೊಟ್ಟು, ಮಾಣಿ, ಅನಂತಾಡಿ, ಬೆಳ್ತಂಗಡಿಯಲ್ಲಿ ಕೊಕ್ಕಡ, ಅಳದಂಗಡಿ, ಪುತ್ತೂರಿನಲ್ಲಿ ಇರಂತಾಜೆ, ದೇರ್ಲ ಮುಂತಾದ ಕೆಲವೆಡೆ ಮಾತ್ರ ಪೂಕರೆ ಕಂಬುಲಗಳು ನಡೆಯುತ್ತಿವೆ. ಬದಲಾದ ವೃತ್ತಿ ಜಗತ್ತುಗಳು ಕೃಷಿಯ ಪ್ರಾಮುಖ್ಯತೆ ಕಡಿಮೆಯಾಗಿ ಉದ್ಯಮಗಳು ಅಭಿವೃದ್ಧಿಯಾಗಿರುವುದು ಜಾಗತೀಕರಣದ ಬದಲಾವಣೆಯ ಪರಿಣಾಮಗಳು ವರ್ತಮಾನದ ಕಂಬುಲಗಳನ್ನು ಕೇವಲ ಉತ್ಸವಾಚರಣೆಗೆ ಸೀಮಿತಗೊಳಿಸಿದೆ. ಕೋಣದ ಓಟದ ಕಂಬುಲಗಳು ಮನರಂಜನೆಗೆ ಮತ್ತು ಕೋಣದ ಮಾಲೀಕನ ಪ್ರತಿಷ್ಠೆಗೆ ಸೀಮಿತಗೊಂಡಿದೆ.

ತುಳುನಾಡಿನ ಆಧುನಿಕ ಕಂಬಲಗಳಲ್ಲಿ ಕೋಣ ಓಡಿಸುವುದಕ್ಕೆ ಮಾತ್ರ ಪ್ರಾಶಸ್ತ್ಯ. ಮೊದಮೊದಲು ಕೋಣ ಓಡಿಸುವ ಕಂಬಲದಲ್ಲಿ ಒಂದು ಕರೆ ಮಾತ್ರ ಇರುತ್ತಿತ್ತು. ಇತ್ತೀಚಿನ ಆಧುನಿಕ ಕಂಬಲಗಳಲ್ಲಿ ಎರಡು ಕರೆ (ಟ್ರ್ಯಾಕ್) ಇರುತ್ತದೆ.

ಕೋಣದ ಓಟದಲ್ಲಿ ಈಗ ಜುಗಾರಿ ಇಲ್ಲವೆ ಜೂಜು ನಡೆಯುತ್ತಿದೆ. ಕಂಬುಲದಲ್ಲಿ ಕೋಣಗಳು ಓಡುವಾಗ ಯಾವ ಕೋಣ ಮೊದಲು ಬಂದು ತನ್ನ ಗುರಿಯನ್ನು ತಲುಪುತ್ತದೆ ಎನ್ನುವದನ್ನು ಮೊದಲೇ ಜೂಜು ಕಟ್ಟುತ್ತಾರೆ. ಆದುದರಿಂದ ಇದು ಮನರಂಜನೆಯೊಂದಿಗೆ ಜೂಜು ಕಟ್ಟೆಯಾಗಿಯೂ ರೂಪಾಂತರಗೊಂಡಿದೆ. ಕುದುರೆ ರೇಸ್‌ನಲ್ಲಿದ್ದ ಈ ಪದ್ಧತಿ ಈಗ ಕೋಣದ ಓಟದ ಕಂಬುಲಗಳಲ್ಲಿಯೂ ಕಾಣಿಸಿಕೊಂಡಿದೆ.

೧. **ಬಳ್ಳತವು:** ಹಗ್ಗದವು ಎಂದು ಅರ್ಥ. ಕೋಣಗಳ ಹೆಗಲಿಗೆ ನೊಗ ಕಟ್ಟಲಾಗುವುದು. ನೊಗದ ಮಧ್ಯಭಾಗದಲ್ಲಿ ಒಂದು ಹಗ್ಗವನ್ನು ಕಟ್ಟಿ ಅದನ್ನು ಕೋಣಗಳ ಹಿಂದುಗಡೆಗೆ ಇಳಿಬಿಡಲಾಗುವುದು. ಹಗ್ಗದ ಆ ತುದಿಯನ್ನು ಹಿಡಿದುಕೊಂಡು ಒಬ್ಬಾತನು ಕೋಣಗಳನ್ನು ಓಡಿಸುತ್ತಾನೆ. ಈ ಓಟದಲ್ಲಿ ಕೋಣಗಳಿಗೆ ಅತ್ಯಂತ ವೇಗವಾಗಿ ಓಡಲು ಸಾಧ್ಯವಾಗುತ್ತದೆ. ಯಾವ ಜೊತೆ ವೇಗವಾಗಿ ಮಂಜೊಟ್ಟಿಯನ್ನು ತಲುಪುವುದೋ ಅದು ಗೆಲ್ಲುತ್ತದೆ. ಇದರಲ್ಲಿ ಓಡಿಸುವಾತನ ಓಟದ ಸಾಮರ್ಥ್ಯ ಅಧಿಕವಾಗಿರಬೇಕು.

೨. **ಅಡ್ಡಪಲಾಯಿ:** ಇದರಲ್ಲಿ ಕೋಣಗಳ ಹೆಗಲು ಮೇಲಿನ ನೊಗಕ್ಕೆ ಉದ್ದವಾದ ಗೋರುಹಲಗೆಯನ್ನು ಕಟ್ಟಲಾಗುತ್ತದೆ. ಈ ಹಲಗೆಯ ಮೇಲೆ ನಿಲ್ಲುವ ಕೋಣ

ಓಡಿಸುವಾತ ಎಡಗೈಯಲ್ಲಿ ಕೋಣದ ಬಾಲವನ್ನು ಹಿಡಿದುಕೊಳ್ಳುತ್ತಾನೆ. ಬಲಗೈಯಲ್ಲಿ ಚಾಟಿ ಹಿಡಿದುಕೊಂಡು ಕೋಣಗಳ ತೊಡೆಗೆ ಚೆನ್ನಾಗಿ ಬಾರಿಸುತ್ತ ಅವು ವೇಗವಾಗಿ ಓಡುವಂತೆ ನೋಡಿಕೊಳ್ಳುತ್ತಾನೆ. ಓಡಿಸುವಾತನಿಗೆ ಇಲ್ಲಿ ಓಟದ ಮೇಲೆ ಅಪಾರ ಹಿಡಿತ ಬೇಕಾಗುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಆದರೂ ಆಯತಪ್ಪಿ ಗದ್ದೆಗೆ ಬೀಳುತ್ತಾನೆ. ಇದರಲ್ಲಿಯೂ ವೇಗದ ಓಟಕ್ಕೆ ಬಹುಮಾನ ಲಭಿಸುತ್ತದೆ.

**೩. ನೇಗಿಲ ಓಟ:** ಇದರಲ್ಲಿ ಉಳುವ ಸ್ಥಿತಿಯಲ್ಲಿಯೇ ಕೋಣಗಳನ್ನು ನೇಗಿಲಿನೊಂದಿಗೆ ಓಡಿಸಲಾಗುತ್ತದೆ. ಇದು ಸ್ವಲ್ಪ ಅಪಾಯಕಾರಿಯಾದ ಓಟವಾದ್ದರಿಂದ ಕಡಿಮೆ ಜನಪ್ರಿಯವಾಗಿದೆ. ಓಡುವಾಗ ನೇಗಿಲ ಮೊನೆ ಕೋಣಗಳಿಗೆ ತಾಗಿದರೆ ಅವಕ್ಕೆ ಅಪಾರವಾದ ನೋವುಂಟಾಗುತ್ತದೆ. ಕಾಲು ಕುಂಟಾಗಿಬಿಡಬಹುದು. ಇದರಲ್ಲಿಯೂ ವೇಗಕ್ಕೆ ಮರ್ಯಾದೆ.

**೪. ಕಣೆಪಲಾಯಿ:** ಕಂಬುಲದಲ್ಲೆಲ್ಲ ಇದು ಅತ್ಯಂತ ಸುಂದರವಾದ ಓಟ. ಗೋರು ಹಲಗೆಯನ್ನು ಸ್ವಲ್ಪ ವ್ಯತ್ಯಾಸ ಮಾಡಿ ಕಣೆಪಲಾಯಿಯನ್ನು ಸಿದ್ಧಗೊಳಿಸುತ್ತಾರೆ. ಇದನ್ನು ನೊಗಕ್ಕೆ ಬಿಗಿಯುತ್ತಾರೆ. ಕೋಣ ಓಡಿಸುವಾತ ಈ ಕಣೆ ಪಲಾಯಿಯ ಮೇಲೆ ಓರೆಯಾಗಿ ನಿಂತುಕೊಂಡು ಒಂದು ಕೈಯ್ಯಲ್ಲಿ ಕೋಣದ ಬಾಲವನ್ನು ಹಿಡಿದುಕೊಂಡು ಒಂದು ಕಾಲಿನಲ್ಲಿ ಕಣೆ ಪಲಾಯಿಯನ್ನು ನೆಲದತ್ತ ಅದುಮುತ್ತ ಓಡಿಸುತ್ತಾನೆ. ಕಣೆಪಲಾಯಿಯಿಂದ ಈಗ ನೀರು ಕಾರಂಜಿಯಿಂದ ಮೇಲಕ್ಕೆ ಚಿಮ್ಮುತ್ತದೆ. ಓಡಿಸುವಾತನ ಚಾಕಚಕ್ಯತೆ ಮತ್ತು ಕೋಣಗಳ ವೇಗ ಎರಡನ್ನೂ ಅನುಸರಿಸಿಕೊಂಡು ನೀರಿನ ಚಿಮ್ಮುವಿಕೆ ನಿರ್ಧಾರವಾಗುತ್ತದೆ. ಗದ್ದೆಯ ಮಧ್ಯಭಾಗದಲ್ಲಿ ಗದ್ದೆಗೆ ಅಡ್ಡಲಾಗಿ ಸುಮಾರು ೨೦-೨೫ ಅಡಿ ಎತ್ತರದಲ್ಲಿ ಬಿಳಿ ಬಟ್ಟೆಯನ್ನು ಕಟ್ಟುತ್ತಾರೆ. ಇದಕ್ಕೆ ನಿಸಾನೆ ಎನ್ನುತ್ತಾರೆ. ನಿಸಾನೆಗೆ ನೀರು ಚಿಮ್ಮಿಸಿದ ಕೋಣಗಳಿಗೆ ಬಹುಮಾನ ಸಿಗುತ್ತದೆ.

ಹೀಗೆ ಕೋಣಗಳನ್ನು ಓಡಿಸುವಾಗಲೇ ಕೋಣಗಳ ಮೇಲೆ ಜೂಜು ಕಟ್ಟಲಾಗುತ್ತದೆ. ಈ ಜೂಜಿನ ಮೊತ್ತ ನೂರು ರುಪಾಯಿಯಿಂದ ಲಕ್ಷಗಳವರೆಗೆ ಇರುತ್ತದೆ. ಇದು ಸಾಮಾಜಿಕ ಪ್ರತಿಷ್ಠೆಯ ಸಂಕೇತವೂ ಆಗಿರುತ್ತದೆ.

ಪಾರಂಪರಿಕ ಕಂಬಲಗಳಲ್ಲಿ ಕೋಣಗಳೆಲ್ಲ ತೆರಳಿದ ನಂತರ ಕಂಬುಲ ಗದ್ದೆಯ ಮಧ್ಯ ಭಾಗದಲ್ಲಿ ಹೂವಿನಿಂದ ಅಲಂಕೃತಗೊಂಡ ಒಂದು ಕಂಬವನ್ನು ನೆಡುತ್ತಾರೆ. ಅದನ್ನು ನೆಡುವ ಮುನ್ನ ನೆಡುವ ಜಾಗಕ್ಕೆ ಹಾಲೆರೆಯಲಾಗುತ್ತದೆ. ಕಂಬಕ್ಕೆ ಅರಿಸಿನ ಬಣ್ಣದ ಹೂವುಗಳನ್ನು ನಿಂಬೆಕಾಯಿಯನ್ನೂ ಕಟ್ಟುತ್ತಾರೆ. ಈ ಸಂದರ್ಭದಲ್ಲಿ. ಇದು ಪೂಕರೆಗೆ ಪರ್ಯಾಯವಾಗಿ ಕಾಣಿಸಿಕೊಂಡ ವ್ಯವಸ್ಥೆಯಾಗಿರುವುದು ಕಂಡುಬರುತ್ತದೆ.

ಆದುನಿಕ ಕಂಬುಲಗಳು ಪೂಕರೆ ಕಂಬುಲದಿಂದ ಬೇರ್ಪಟ್ಟು ಬೆಳೆದ ಸಾಂಸ್ಕೃತಿಕ ಗ್ರಾಮೀಣ ಕ್ರೀಡೆಯಾಗಿ ಕಂಡುಬರುತ್ತದೆ.

# ಅಧ್ಯಾಯ -6
# ಉಪಸಂಹಾರ

ತುಳುನಾಡಿನಲ್ಲಿ ಭತ್ತ, ಆಹಾರ ಮತ್ತು ಆರ್ಥಿಕತೆಯ ಮೂಲ ಬೆಳೆಯಾಗಿತ್ತು. ಭತ್ತದ ಗದ್ದೆಗಳು, ಕೃಷಿ ಮಾಡಲು ಉಪಯೋಗಿಸುತ್ತಿದ್ದ ಪ್ರಾಣಿಗಳು ಮತ್ತು ಪರಿಸರ ಬಗೆಗಿನ ಜೀವನ ಪ್ರೀತಿಯನ್ನು ಪೂಕರೆ ಆಚರಣೆಯಲ್ಲಿ ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಪೂಕರೆ ಆಚರಣೆಲ್ಲಿ ಕೃಷಿಕರ ಒಗ್ಗಟ್ಟನ್ನು ಜತನದಿಂದ ಕಾಯ್ದುಕೊಳ್ಳುವ ಆಶಯ ವ್ಯಕ್ತವಾಗುತ್ತದೆ.ಊರಿನ ಎಲ್ಲಾ ಸಮುದಾಯಗಳಿಗೆ ಕೃಷಿಯೇ ಜೀವನಾಧಾರವಾಗಿದ್ದಲ್ಲದೆ ಕೃಷಿ ಪೂರಕ ವೃತ್ತಿಯನ್ನು ಸೃಷ್ಟಿಸುತ್ತಿದ್ದುದರ ಪರಿಣಾಮ ಇಡೀ ಊರು ಮತ್ತು ಸಮುದಾಯ ಇದರಲ್ಲಿ ಜೀವನದ ಅಗತ್ಯವಾಗಿ ಪಾಲ್ಗೊಳ್ಳುತ್ತಿದ್ದುದ್ದನ್ನು ಅಧ್ಯಯನದಿಂದ ಗಮನಿಸಬಹುದು.

**ಒಂದು ಕಡೆಯಿಂದ ಪಶ್ಚಿಮ ಘಟ್ಟ ಶ್ರೇಣಿ ಇನ್ನೊಂದು ಕಡೆಯಿಂದ ಪಶ್ಚಿಮದ ಸಮುದ್ರ. ಈ ಭೂಪ್ರದೇಶದಲ್ಲಿ ಹುಲುಸಾಗಿ ನಡೆಯುತ್ತಿದ್ದ ಭತ್ತದ ಕೃಷಿ ಬೆಳೆಯುತ್ತಿದ್ದ ಜನಪದರು ಜೀವನ ನಿರ್ವಹಣೆ ಮಾಡಿಕೊಂಡು ಪ್ರಕೃತಿ ಶಕ್ತಿಯೊಂದಿಗೆ ಮಾನವ ಮೌಲ್ಯಗಳಾದ ಸತ್ಯ ಮತ್ತು ಸಾಮಾಜಿಕ ನ್ಯಾಯವನ್ನು ಬೆಸೆದು ಸತ್ಯದೈವ-ಧರ್ಮದೈವವೆಂದು ಉಪಾಸನೆ ಮಾಡುವುದು ಈ ದೈವಗಳ ಪರಿವಾರದಲ್ಲಿ ಸತ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ಮಡಿದ ಪಿತೃಗಳನ್ನೂ ಸೇರಿಸಿ ಅವರನ್ನು ಗೌರವಿಸಿ ಆರಾಧಿಸುತ್ತಾರೆ. ಈ ಆರಾಧನೆಗಳು ನಿತ್ಯ ಕಾಯಕ ಕೃಷಿ ಪದ್ಧತಿಯ ಭಾಗವಾಗಿ ಒಟ್ಟು ಒಂದು ಜೀವನ ಸಂಸ್ಕೃತಿಯಾಗಿ ರೂಪುಗೊಂಡಿರುವುದು ಕಾಣಬಹುದು.**

ಪೂಕರೆ ಆಚರಣೆ ಮಾಡಿದರೆ ಊರು ಸಮೃದ್ದಿಯಾಗಿರುತ್ತದೆ ಎನ್ನುವ ನಂಬಿಕೆ ಇದೆ. ಈ ಕ್ರಿಯಾಚರಣೆಗಳಲ್ಲಿ ಸಮೃದ್ಧಿ, ದೈಹಿಕ-ಮಾನಸಿಕ ಆರೋಗ್ಯ ಮತ್ತು ಸಂತಾನವೃದ್ಧಿ ಅಪೇಕ್ಷೆ ಉದ್ದೇಶಗಳನ್ನು ಗಮನಿಸಬಹುದು.

ಪೂಕರೆ ಆಚರಣೆಯಲ್ಲಿ ಮಾಂಸಾಹಾರ, ಶೇಂದಿಯ ಬಳಕೆ, ಮತ್ತು ಸಸ್ಯಾಹಾರದ ಆಹಾರ ಪದ್ದತಿ ತುಳುನಾಡಿನ ಜನರ ಆಹಾರ ಪದ್ಧತಿ ಬಗ್ಗೆ ಹೇಳುತ್ತದೆ. ಪೂಕರೆ ಕಂಬುಲ ಕೋರಿ ಆಚರಣೆಯ ಭಾಗವಾಗಿ ಗಂಡಗಣೊಕುಲೆಗ್ ಬಳಸುನೆ ಇಲ್ಲವೆ ಕಾಡಿನ ಪರಿಸರದಲ್ಲಿ ಸಾಮೂಹಿಕ ಮೀನುಮಾಂಸದ ಊಟ ನಡೆಯುತ್ತದೆ. ಪೂಕರೆ ಆಚರಣೆಯ ಭಾಗವಾಗಿರುವುದು ತುಳುನಾಡಿನ ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯಪೂರ್ಣ ಆಹಾರ ಸಂಸ್ಕೃತಿಯನ್ನು ಹೇಳುತ್ತದೆ. ಭತ್ತ ಬೆಳೆಯುವ ಜನರ ಆಹಾರ ಪದ್ಧತಿ ಮತ್ತು ಆರಾಧನೆಯೊಂದಿಗೆ ಸಮ್ಮಿಳಿತಗೊಂಡಿರುವ ಜೀವನ ಸಂಸ್ಕೃತಿಯನ್ನು ತೆರೆದಿಡುತ್ತದೆ.

ತುಳುನಾಡಿನ ಕಂಬಲಕೋರಿ ಆಚರಣೆಯಲ್ಲಿ ಊರಿನ ಎಲ್ಲಾಸಮುದಾಯಗಳು ಭಾಗವಹಿಸುವುದನ್ನು ಅಧ್ಯಯನ ಮಾಡಿದಾಗ ಶ್ರೇಣಿಕೃತ ಸಮಾಜ ವ್ಯವಸ್ಥೆ ಹೂರಣಗೊಳ್ಳುವ ಬಗೆಯನ್ನು ಕಾಣಬಹುದಾಗಿದೆ. ಇಂದಿನ ಆಧುನಿಕ ಕಾಲಘಟ್ಟದಲ್ಲಿ ಇಲ್ಲಿನ ಜನಪದರ ಪೂಕರೆ ಉತ್ಸವ ಸಂಸ್ಕೃತಿಯೊಂದಿಗೆ ಕಂಡು ಬರುತ್ತಿದ್ದ ಸಮುದಾಯಗಳ ಭಾಗವಹಿಸುವಿಕೆ ಇಲ್ಲವಾಗಿದೆ. ಈಗ ಉಳಿದಿರುವ ಪೂಕರೆ ಆಚರಣೆಗಳಲ್ಲಿ ಊರ ಸಮುದಾಯಗಳ ಬದಲಿಗೆ ಊರಿನ ಜನ ಯಾವುದೇ ಭೇದಭಾವ ಇಲ್ಲದೆ ಪಾಲ್ಗೊಳ್ಳುತ್ತಿರುವುದು ಕಂಡು ಬರುತ್ತಿದೆ.

ಕೃಷಿಯೇ ಜೀವಾನಾಧಾರ ಆರ್ಥಿಕತೆಯ ಮೂಲವಾಗಿದ್ದ ದಿನಗಳಲ್ಲಿ ಕೃಷಿಗೆ ಪೂರಕವಾದ ಕೆಲಸ ಮಾಡುವವರು ಆ ನಿಟ್ಟಿನಲ್ಲಿ ವೃತ್ತಿಗರಾಗಿ ಕಾಣಿಸಿಕೊಂಡಿದ್ದರು. ಈ ಎಲ್ಲಾ ವೃತ್ತಿಗಳು ಕೃಷಿಯ ಸುತ್ತವೇ ಗಿರಕಿ ಹೊಡೆಯುತ್ತಿದ್ದುದನ್ನು ಕಾಣಬಹುದು. ಈ ಕಾರಣದಿಂದ ಊರಿನ ಎಲ್ಲಾ ಜನಾಂಗ ಸಮುದಾಯಗಳ ನೆಲೆಯಲ್ಲಿ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. ಮಾತ್ರವಲ್ಲ ಪ್ರತಿಯೊಂದು ಜಾತಿ ಇಲ್ಲವೆ ಜನಾಂಗದ ಒಂದೆರಡು ಮನೆಗಳವರು ವಂಶಪಾರಂಪರ್ಯವಾಗಿ ಆಚರಣೆಯಲ್ಲಿ ಚಾಕರಿ ಮಾಡುತ್ತಿದ್ದರು. ಚಾಕರಿ ವ್ಯವಸ್ಥೆಯನ್ನು ಒಪ್ಪಿಕೊಂಡು ಸ್ವ ಇಚ್ಚೆಯಿಂದ ಪಾಲ್ಗೊಳ್ಳುವುದು ಮಾತ್ರವಲ್ಲ ಇದನ್ನೊಂದು ಗೌರವ ಎಂದು ಭಾವಿಸುತ್ತಿದ್ದರು. ಮುಂದೆ ಇದೇ ವೃತ್ತಿಗಳು ಜಾತಿಗಳಾಗಿ ಬದಲಾವಣೆಗೊಂಡದ್ದು ಮತ್ತು ಪಾಳೇಗಾರಿಕೆ ವ್ಯವಸ್ಥೆಯೊಂದಿಗೆ ಜಾತಿಗಳೊಳಗೆ ಮೇಲು ಕೀಳು ತಾರತಮ್ಯಗಳು ಬೆಳೆಯಲು ಕಾರಣವಾಗಿರುವುದು ಕಂಡು ಬರುತ್ತದೆ.

ಜಾಗತೀಕರಣದ ಇಂದಿನ ದಿನಗಳಲ್ಲಿ ಪೂಕರೆ ಆಚರಣೆಯಲ್ಲಿ ಭಾಗವಹಿಸುವ ಸಮುದಾಯಗಳ ನಡುವೆ ಯಾವುದೇ ಮೇಲು ಕೀಳು ತಾರತಮ್ಯಗಳು ಕಂಡುಬರುವುದಿಲ್ಲ. ಉಡುಪಿ ಜಿಲ್ಲೆ ಮತ್ತು ಸುಳ್ಯ ಪರಿಸರದ ಪೂಕರೆ ಆಚರಣೆಯಲ್ಲಿ ಕಂಡುಬರುತ್ತಿದ್ದ ಪನಿಕುಲ್ಲುನೆ ವಿಧಿಗೆ ಇಂದಿನ ದಿನಗಳಲ್ಲಿ ಯಾವುದೇ ಪ್ರಾಮುಖ್ಯತೆ ಕಾಣಸಿಗುವುದಿಲ್ಲ. ಪೂಕರೆ ಆಚರಣೆಗೆ ಸಿದ್ದಗೊಂಡ ಕಂಬುಲಕ್ಕೆ ಯಾವುದೇ ಕಾರಣಕ್ಕೆ ಊರ ಇಲ್ಲವೆ ಹೊರ ಊರ ಜನರ ದ್ವೇಷ ಮಾತ್ಸರ್ಯ ಸಾಧನೆಯಿಂದ ಇಲ್ಲವೆ ತಿಳಿದೋ ತಿಳಿಯದೆಯೋ ಏನಾದರೂ ವಸ್ತುಗಳನ್ನು ಕಂಬುಲಕ್ಕೆ ಎಸೆಯುವ ಸಾಧ್ಯತೆಗಳೇನಾದರೂ ಇದ್ದರೆ ಆ ಬಗ್ಗೆ ಜಾಗ್ರತೆ ವಹಿಸುವುದಕ್ಕೆ ಕಾವಲು ಕಾಯುವ ಉದ್ದೇಶ ಕಂಡು ಬರುತ್ತದೆ. ಇದರಿಂದ ಪೂಕರೆ ಆಚರಣೆಯಲ್ಲಿ ಭಾಗವಹಿಸುವ ಎತ್ತುಗಳು, ಕೋಣಗಳು, ಮನುಷ್ಯರು ಯಾವುದೇ ತೊಂದರೆ ಭಯ ಇಲ್ಲದೆ ಗದ್ದೆಯಲ್ಲಿ ಓಡಾಡಬಹುದು. ಸ್ಥಳೀಯ ಊರ ಪಾಳೇಗಾರ ಮತ್ತು ಬೇರೆ ಊರಿನ ಜಮೀನ್ದಾರಿಕೆಯವರ ಮೂಲದವರು ಪೂಕರೆಯನ್ನು ಬಲಾತ್ಕಾರವಾಗಿ ಇಲ್ಲವೆ ಕದ್ದು ಎತ್ತಿಕೊಂಡು ಹೋಗುವ, ಪೂಕರೆಗೆ ಸಂಬಂಧಪಟ್ಟ ವಸ್ತುಗಳನ್ನು ಹಾಳುಗೆಡಹುವ ಕಾರಣಗಳು ಎರಡು ಊರುಗಳ ನಡುವೆ ಜಗಳಕ್ಕೆ ಆಹ್ವಾನನೀಡುತ್ತಿತ್ತು. ಈ ವಿಚಾರಕ್ಕೆ ಒತ್ತು ನೀಡಿದರೆ ಪೂಕರೆ ಊರಿನ ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ

ಸಂಕೇತವೂ ಆಗಿತ್ತು.(ಇಂದಿರಾ ಹೆಗ್ಗಡೆಯ ಬಂಟರು ಒಂದು ಐತಿಹಾಸಿಕ ಶೋಧ, ಮತ್ತು ವಕ್ಸ್ಮ ದೊಂಬಯ್ಯ ಪಂಡಿತ್ ಅಭಿಪ್ರಾಯಗಳು ಈ ವಿಚಾರಕ್ಕೆ ಒತ್ತು ನೀಡುತ್ತದೆ

ಪೂಕರೆ ಕಂಬಲ ಆಚರಣೆಯಲ್ಲಿ ಕಂಡು ಬರುವ ನೇಮ, ಕೋಲಗಳು ದೈವಾರಾಧನೆಗೆ ಪ್ರಾಮುಖ್ಯತೆ ಇರುವುದನ್ನು ತೋರಿಸುತ್ತದೆಸ.ಇದು ಒಂದು ಭೂಭಾಗದ ಕೃಷಿ ಸಮುದಾಯವೊಂದರ ವಿಶಿಷ್ಟ ಸಂಸ್ಕೃತಿಯ ಬಗ್ಗೆ ಹೇಳುತ್ತದೆ.

ಕಾಡು ಹಂದಿ, ಹುಲಿ, ಮಂಗ, ನಾಗರಹಾವು, ಮುಂತಾದ ಪ್ರಾಣಿಸಂಕುಲಗಳ ಮೂಲಕ ಪ್ರಾಕೃತಿಕ ಶಕ್ತಿಯನ್ನು ಆರಾಧಿಸುವ ಕ್ರಮ ಮತ್ತು ಕೃಷಿಯನ್ನು ರಕ್ಷಿಸುವ ಶಕ್ತಿಗಳಿಗೆ ಆರಾಧನೆ ಮಾಡುವ ಕ್ರಮ ಪೂಕರೆ ಆಚರಣೆಯಲ್ಲಿ ಕಂಡುಬರುತ್ತದೆ.

ಇಂದು ಪೂಕರೆ ಆಚರಣೆ ಕೃಷಿ ನೆಲೆಗಟ್ಟಿನಿಂದ ಕೇವಲ ದೈವಾರಾಧನೆಯ ನೆಲೆಗಟ್ಟಿಗೆ ಮತಾಂತರಗೊಂಡಿರುವುದು ಕಂಡು ಬರುತ್ತದೆ. ಕಂಬಳ ಕೋರಿ ಆಚರಣೆಗೆ ನೆಲೆಗಟ್ಟಾಗಿದ್ದ ಪೂರ್ಣ ಪ್ರಮಾಣದ ಕೃಷಿ ಆಚರಣೆ ಇಂದು ಕಟ್ಟಳೆಯಾಗಿ ಉಳಿದಿರುವುದು ಕಂಡು ಬರುತ್ತದೆ.

ಪೂಕರೆ ಆಚರಣೆಯಲ್ಲಿ ತುಳುನಾಡಿನ ಮೂಲ ಸಂಸ್ಕೃತಿಯ ಆಳ ಮತ್ತು ಹರಹುಗಳು ಸ್ಪಷ್ಟವಾಗಿ ಕಂಡು ಬರುತ್ತದೆ. ಒಟ್ಟಾರೆ ಪೂಕರೆ ಆಚರಣೆ ಒಂದು ಸಾಮಾಜಿಕ ಮತ್ತು ಸಂಸ್ಕೃತಿಯ ಮಹತ್ವವನ್ನು ಪಡೆದಿದೆ. ವರ್ತಮಾನದಲ್ಲಿ ಭತ್ತದ ಕೃಷಿ ಆರ್ಥಿಕ ಹಿನ್ನೆಲೆಯಲ್ಲಿ ಹಿಂದೆ ಸರಿಯುತ್ತಿರುವ ಕಾರಣವಾಗಿ ಪೂಕರೆ ಅಪರೂಪವಾಗುತ್ತಿದೆ.

ಕಂಬುಲ ಕೋರಿ ಆಚರಣೆಯ ಮೂಲ ಆಶಯ ಒಂದೇ ಆಗಿದ್ದರೂ ಆಚರಣಾ ವಿಧಿ ವಿಧಾನಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶ ವ್ಯಾಪ್ತಿಗೆ ಭಿನ್ನವಾಗಿ ಗೋಚರಿಸುತ್ತದೆ. ಆಯಾ ಊರಿನ ಭೌಗೋಳಿಕ ಹಿನ್ನೆಲೆ, ಆಚರಣೆ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದವರ ದೂರದೃಷ್ಟಿ, ಪ್ರಸಕ್ತ ಆಚರಣೆ ಮಾಡುತ್ತಿರುವವರ ಚಿಂತನೆ, ಆಚರಣೆಗೆ ಪರಿಸರದಲ್ಲಿ ಸಿಗುವ ವಸ್ತುಗಳು, ಆರ್ಥಿಕ ವ್ಯವಸ್ಥೆ, ಭಾಗವಹಿಸುವ ಜನಸಮುದಾಯ ನಂಬಿಕೆಗಳು ಮುಂತಾದ ವಿಚಾರಗಳು ಒಟ್ಟು ಆಚರಣಾ ಪದ್ಧತಿ ಮೇಲೆ ಪರಿಣಾಮ ಬೀರಿರುವುದು ಕಂಡು ಬರುತ್ತದೆ.

ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಧಾನ ವೃತ್ತಿಯಾಗಿದ್ದ ಕೃಷಿ, ಇಂದು ಕೂಲಿ ಕಾರ್ಮಿಕರ ಕೊರತೆ, ಬೆಳೆದ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಬೆಲೆ ಇಲ್ಲದಿರುವುದರಿಂದ ನಷ್ಟದ ವೃತ್ತಿಯಾಗಿದೆ ಕೃಷಿ ಭೂಮಿಗಳಲ್ಲಿ ತಲೆ ಎತ್ತುತ್ತಿರುವ ಕಾಂಕ್ರೀಟ್ ಕಟ್ಟಡಗಳು-ಉದ್ದಿಮೆಗಳಿಂದ ಭತ್ತದ ಗದ್ದೆಗಳು ಕಾಣೆಯಾಗಿವೆ. ತುಳುನಾಡಿನಲ್ಲಿ ಕೃಷಿ ಅವನತಿಯತ್ತ ಸಾಗುವುದರೊಂದಿಗೆ ಆ ಸಂಬಂಧಿಯಾದ ಕಂಬಲಕೋರಿಯಂತಹ ವಿಶಿಷ್ಟ ಸಂಸ್ಕೃತಿ ಆಚರಣೆಗಳು ಅಳಿವಿನಂಚಿಗೆ ಸಾಗಿದೆ.

**ಅಳಿದುಳಿದಿರುವ ಪೂಕರೆ ಆಚರಣೆಗೆ ದೊಡ್ಡ ಮೊತ್ತದ ಹಣ ಖರ್ಚಾಗುತ್ತದೆ. ಇದನ್ನು ನಿಭಾಯಿಸುವುದು ಆಯಾ ಊರಿನ ಕೃಷಿಕರ ಪಾಲಿಗೆ ದೊಡ್ಡ ಸವಾಲಾಗಿದೆ.**

**ವಿಶಿಷ್ಟ ಸಂಸ್ಕೃತಿಯ ಪರಿಧಿಯಲ್ಲಿ ನಿಲ್ಲುವ ಪೂಕರೆ ಆಚರಣೆಯನ್ನು ಕೃಷಿ ಸಮುದಾಯ ಸಾಂಸ್ಕೃತಿಕ ಎಚ್ಚರವಾಗಿ ಉಳಿಸಿಕೊಳ್ಳುವ ಅಗತ್ಯ ಇದೆ. ಈ ನಿಟ್ಟಿನಲ್ಲಿ**

ಕಂಬಳ ಕೋರಿ ಆಚರಣೆಗೆ ಸರ್ಕಾರ ನೆರವು ನೀಡುವುದು ಇಂದಿನ ಅಗತ್ಯವಾಗಿದೆ

ಪೂಕರೆ ಆಚರಣೆಯ ಸಾಂಸ್ಕೃತಿಕ ಸಂರಚಣೆಗಳನ್ನು ನೋಡಿದಾಗ ಗದ್ದೆಗಳನ್ನು ಕೃಷಿ ಚಟುವಟಿಕೆಗೆ ಸಿದ್ಧಗೊಳಿಸುವುದರಿಂದ ಹಿಡಿದು ಊರಿನ ಸಮುದಾಯಗಳನ್ನು ಒಟ್ಟುಗೂಡಿಸುವುದು, ಊರ ದೈವಗಳ ಆರಾಧನೆ, ಅನ್ನದಾನ, ಮನೆಜಗಳ ಊರಜಗಳಗಳನ್ನು ಒಟ್ಟಾಗಿ ಪರಿಹರಿಸಿಕೊಳ್ಳುವವರೆಗೆ ವಿಸ್ತರಿಸಿಕೊಂಡಿರುವುದು ಗೋಚರಿಸುತ್ತದೆ.ನ್ಯಾಯ ಪರಿಪಾಲನೆ ಮಾಡಬೇಕಾದ ಸಂದರ್ಭದಲ್ಲಿ ವಹಿಸಬೇಕಾದ ಜಾಗ್ರತೆ ಬಗ್ಗೆ ಪೂಕರೆ ಆಚರಣೆ ವೇಳೆ ದೈವದ ಪಾತ್ರಿ ನುಡಿಯುವ ಮಾತುಗಳು ಇಂದಿಗೂ ಮಾದರಿಯಾಗಿ ಕಂಡು ಬರುತ್ತವೆ. ಊರ ಒಗ್ಗಟ್ಟು ಮತ್ತು ಕ್ಷೇಮದ ವಿಚಾರ ಬಂದಾಗ ತಪ್ಪು ಮಾಡಿದವನನ್ನು ಲೆಕ್ಕಕ್ಕಿಂತ ಅತಿಯಾಗಿ ದಂಡಿಸದೆ ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುವ ಆಶಯ ವ್ಯಕ್ತವಾಗುತ್ತದೆ.

‘ತೊರಿತಿನಾಯನ ಕಾರ್ ಕಡ್ಪಡ,  
ತಾಡ್‌ನಾಯನ ಕೊಂಬು ಪೊಲಿಪಡ,  
ಕೋಪೆದ ಬಂಗಾರ್‌ನ್ ಕೋಪೆಗೆ ತುರಿಪೆ,  
ಕೋಪೆದ ಬಂಗಾರ್ನ ಕೋಪೆಗ್ ತುರಿಪೆ.’

**************

# ಪರಾಮರ್ಶನ

1 'ಉಲ್ಲಾಕುಳು' ಐತಿಹಾಸಿಕತೆ, ಪ್ರಾದೇಶಿಕತೆ ಮತ್ತು ಆರಾಧನಾ ಸ್ವರೂಪ' ಡಾ. ಪೂವಪ್ಪ ಗೌಡ .ಕೆ ಕಣಿಯೂರು (2007)

2 'ಬತ್ತದ ಲೋಕ'– ಡಾ. ಸುಂದರ ಕೇನಾಜೆ; ಪ್ರಕಾಶಕರು– ಸಿಂಚು ಮಲ್ಟಿಗ್ರಾಫ್ ಮೈಸೂರು(2009)

3. 'ಚೇಳಾರುಗುತ್ತು ಮಂಜುನಾಯ್ಗೆರ್; ಸಾಂಸ್ಕೃತಿಕ ಐತಿಹಾಸಿಕ ಶೋಧ'– ಇಂದಿರಾ ಹೆಗ್ಗಡೆ

4. 'ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ'; ಪ್ರಕಾಶಕರು– ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಮೈಸೂರು.(2007)

5. 'ಪೊಲಿ ಕೆನರಾ 200 ನೆನಪಿನ ಸಂಪುಟ' ಪ್ರಕಾಶಕರು ಜಿಲ್ಲಾಧಿಕಾರಿ ಮಂಗಳೂರು (2002)

6. 'ಬಂಟರು ಒಂದು ಐತಿಹಾಸಿಕ ಶೋಧ'– ಇಂದಿರಾ ಹೆಗ್ಗಡೆ (2004)

7. 'ಮುಗೇರರ ದುಡಿ ಕುಣಿತಗಳು ಸ್ವರೂಪ ಮತ್ತು ಸಂಸ್ಕೃತಿ ಅಧ್ಯಯನ' ಡಾ. ಕೊಯಿರಾ ಎನ್. ಬಾಳೆಪುಣಿ (2010)

# ಮಾಹಿತಿ ನೀಡಿದ ವಕ್ತೃಗಳು

1. ಬಾಲಕೃಷ್ಣ ಶೆಟ್ಟಿ ಉಳ್ಳಾಲಗುತ್ತು (51 ವರ್ಷ) ಪೆರ್ಮನ್ನೂರು ಮಂಗಳೂರು ತಾಲೂಕು. 575020. (ದೂ. 9343112384)
2. ದೊಂಬಯ್ಯ ಪಂಡಿತ್ (78) ಮಿತ್ತೂರು ಮನೆ, ಪುತ್ತೂರು ತಾಲೂಕು. (ದೂ. 9449773742)
3. ಸುಬ್ರಮಣ್ಯ ಆಚಾರ್ಯ ಕೊಕ್ಕಡ, ಬೆಳ್ತಂಗಡಿ. 574198. (ದೂ.9481375097)
4. ಮಹಾಬಲ ನಾಯ್ಕ್ ಕೊಕ್ಕಡ, ಬೆಳ್ತಂಗಡಿ.574198.
3. ಜೀವನ್ ಪದಾತಿ ಕೊಕ್ಕಡ, ಬೆಳ್ತಂಗಡಿ.574198
4. ಸಂಜೀವ ಬೆಳ್ಚಾಡ ಮೇರ್ಲಪದವು, ಬಂಟ್ವಾಳ
7. ಗುಲಾಬಿ ಆಳ್ವ, ಮೂಳೂರುಗುತ್ತು ಬಂಟ್ವಾಳ 574153.

# ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

**ತುಳು ಭವನ, ಉರ್ವಸ್ಟೋರ್, ಮಂಗಳೂರು – 6**

ಅಧ್ಯಕ್ಷೆರ್
**ಎಮ್. ಜಾನಕಿ ಬ್ರಹ್ಮಾವರ**

ರಿಜಿಸ್ಟ್ರಾರ್
**ಚಂದ್ರಹಾಸ ರೈ. ಬಿ.**

ಅರ್ಥಸದಸ್ಯೆರ್
**ಡಿ. ಎಮ್. ರವಿ ಕುಮಾರ್**

ಅಕಾಡೆಮಿದ ಸದಸ್ಯೆರ್
**ಪ್ರೊ. ಡಿ. ವೇದಾವತಿ**
**ಶ್ರೀ ಡಿ. ಎಂ. ಕುಲಾಲ್**
**ಶ್ರೀ ಸುಭಾಶ್ಚಂದ್ರ ಪಡಿವಾಳ್**
**ಶ್ರೀ ದುರ್ಗಾಪ್ರಸಾದ್ ರೈ ಕುಂಬ್ರ**
**ಶ್ರೀಮತಿ ಜಯಶೀಲ**
**ಶ್ರೀ ವಸಂತ ಶೆಟ್ಟಿ ಬೆಳ್ಳಾರೆ**
**ಶ್ರೀ ಕೃಷ್ಣಪ್ಪ ಉಪ್ಪೂರು**
**ಶ್ರೀ ರಘು ಇಡ್ಕಿದು**
**ಶ್ರೀ ಮೋಹನ್ ಕೊಪ್ಪಲ ಕದ್ರಿ**
**ಶ್ರೀಮತಿ ರೂಪಕಲಾ ಆಳ್ವ**
**ಶ್ರೀ ನವೀನ್ ಡಿ. ಪಡೀಲ್**
**ಶ್ರೀ ಕೆ. ಟಿ. ವಿಶ್ವನಾಥ**
**ಡಾ. ದಿವಾ ಕೊಕ್ಕಡ**



ತುಳುವರಿಗೆ ಕೃಷಿ ಕೇವಲ ಒಂದು ಕಸುಬಲ್ಲ. ಕೃಷಿಯೂ ಒಂದು ಸಂಸ್ಕೃತಿ. ಅದರಲ್ಲಿ ಹತ್ತುಹಲವು ಆರಾಧನಾ ವಿಧಿಗಳೂ ಇವೆ. ಅವುಗಳಲ್ಲಿ ಒಂದು 'ಪೂಕರೆ ಆಚರಣೆ'. ಈ ಆಚರಣೆಯಲ್ಲಿ ಕರಾವಳಿಯ ಸಮಾಜ ವ್ಯವಸ್ಥೆಯ ಒಳನೋಟವೂ ಒದಗುವಂತಿದೆ. ಕೃಷಿಯು ಎಲ್ಲ ವರ್ಗದ ದುಡಿಮೆಗಾರರನ್ನು ಒಳಗೊಂಡು ಸಾಗುವ ಕ್ರೀಯೆ. ಭೂಮಿತಾಯಿಯನ್ನು ಗೌರವಿಸುವ, ನಮ್ಮ 'ಅಹಂ' ಅನ್ನು ಅಳಿಸಿಕೊಳ್ಳುವ ಅಗತ್ಯದ ಮರ್ಮವನ್ನು ಈ ಆಚರಣೆಯಲ್ಲಿ ಗುರುತಿಸಬಹುದು. ಶ್ರೀ ಹರೀಶ್ ಆಳ್ವರ ಈ ವಿಶೇಷ ಮಾಹಿತಿ ಭರಿತ ಅಧ್ಯಯನವು ತುಳುವರ ಕೃಷಿ ಸಂಬಂಧಿತ ಆರಾಧನೆಯ ಕಾರ್ಯಕಾರಣಗಳನ್ನು ಶೋಧಿಸುವಲ್ಲಿ ಯಶಸ್ವಿಯಾಗಿದೆ.

ಎಮ್. ಜಾನಕಿ ಬ್ರಹ್ಮಾವರ
ಅಧ್ಯಕ್ಷೆರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ